# ಆಧ್ಯಾತ್ಮ ಜ್ಞಾನವೆಂಬ ಫಿರಂಗಿ ಗುಂಡು

ಕಬೀರ್, ಔರ್ ಜ್ಞಾನ್ ಸಬ್ ಜ್ಞಾನಡೀ, ತತ್ವ್ ಜ್ಞಾನ್ ಸೋ ಜ್ಞಾನ್।
ಜೈಸೆ ಗೋಲಾ ತೋಬ್ ಕಾ, ಕರ್ತಾ ಚಲೇ ಮೈದಾನ್॥

ಅಂದರೆ ಪರಮಾತ್ಮನು ಭೂಮಿಯ ಮೇಲೆ ಪ್ರತ್ಯಕ್ಷವಾಗಿ ನಿಜವಾದ ಆಧ್ಯಾತ್ಮಜ್ಞಾನವನ್ನು ಸ್ವತಃ ತನ್ನ ಬಾಯಿಂದ ವಾಣಿಯ ರೂಪದಲ್ಲಿ ಹೇಳುತ್ತಾನೆ ಎನ್ನುವುದಕ್ಕೆ ವೇದಗಳಲ್ಲಿ ಸಾಕ್ಷಿ ಇದೆ. ಅದೇ ಸೂಕ್ಷ್ಮವೇದ ಅದನ್ನು ತತ್ವಜ್ಞಾನ ಎಂದು ಕರೆಯಲಾಗುತ್ತದೆ. ಕಬೀರನೆಂಬ ನೇಕಾರನು ಪೂರ್ಣ ಪರಮಾತ್ಮನಾಗಿದ್ದಾನೆ. ಅವನು ಯಾವ ಆಧ್ಯಾತ್ಮಿಕ ಜ್ಞಾನವನ್ನು ತನ್ನ ಕಬೀರವಾಣಿಯಲ್ಲಿ ಹಾಡುತ್ತಾ ಹೇಳಿದ್ದಾನೋ ಅದೇ ಸೂಕ್ಷ್ಮವೇದ. ಅಂದರೆ ತತ್ವಜ್ಞಾನ. ಇದು ಸಂಪೂರ್ಣ ಸತ್ಯವಾದ ಅಧ್ಯಾತ್ಮಜ್ಞಾನವಾಗಿದೆ.

ಇದರ ಮುಂದೆ ಬೇರೆ ಜ್ಞಾನಗಳು ಅಂದರೆ ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ), ಹದಿನೆಂಟು ಪುರಾಣಗಳು, ಹನ್ನೊಂದು ಉಪನಿಷತ್ತುಗಳು, ಭಗವದ್ಗೀತೆ, ಕುರಾನ್ ಶರೀಫ್(ತೌರೆತ್, ಜಬೂರ್, ಇಂಜಿಲ್), ಬೈಬಲ್ ಮುಂತಾದವುಗಳ ಜ್ಞಾನವು ಪೂರ್ಣವಾಗಿಲ್ಲ. ಇವುಗಳಿಂದ ಯಾವುದೇ ಸಂದೇಹ ನಿವಾರಣೆಯಾಗುವುದಿಲ್ಲ.

ಆದರೆ ಕಬೀರರ ಜ್ಞಾನವು ಫಿರಂಗಿಯ ಮದ್ದುಗುಂಡಿಗೆ ಸಮಾನವಾಗಿದೆ. ಇದು ಅಜ್ಞಾನವೆಂಬ ಕೋಟೆಯನ್ನು ಉರುಳಿಸಿ ಮೈದಾನವನ್ನಾಗಿ ಮಾಡುತ್ತದೆ. ಅಂದರೆ ತತ್ವಜ್ಞಾನವನ್ನು ಅರಿತ ನಂತರ ಯಾವುದೇ ಸಂದೇಹ ಭಕ್ತನಿಗೆ ಇರುವುದಿಲ್ಲ. ಸಂತ ರಾಮ್‌ಪಾಲ್‌ದಾಸರು ಇದೇ ಕಬೀರಾಧ್ಯಾತ್ಮಕ ಜ್ಞಾನದ ಮದ್ದಿನಿಂದ ಎಲ್ಲಾ ಧರ್ಮಗುರುಗಳ ಮತ್ತು ಆಚಾರ್ಯರ ಅಧ್ಯಾತ್ಮಿಕ ಜ್ಞಾನವನ್ನು ಪೂರ್ಣವಾಗಿಲ್ಲ ಎಂದು ಸಾಬೀತುಪಡಿಸಿ ನಿಜವಾದ ಜ್ಞಾನವನ್ನು ತಿಳಿಸಿದ್ದಾರೆ ಮತ್ತು ಕಾಶೀನಗರದಲ್ಲಿ ವಾಸವಿದ್ದ ನೇಕಾರರಾದ ಕಬೀರರು ಸಂಪೂರ್ಣರಾದವರು ಮತ್ತು ಎಲ್ಲರನ್ನು ಪಾಲಿಸುವವರು ಎಂದು ಅನ್ವೇಷಿಸಿದ್ದಾರೆ. ಮುಂದೆ ಸಂಕ್ಷಿಪ್ತ ವರ್ಣನೆಯನ್ನು ಓದಿ.

**ಸಂತ ರಾಮ್‌ಪಾಲರ ಮೂಲಕ ತಿಳಿಸಿಕೊಟ್ಟ ಆಧ್ಯಾತ್ಮಿಕ ಅವಿಷ್ಕಾರ = ಕಬೀರ್ ನೇಕಾರರೇ ಪೂರ್ಣ ಪರಮಾತ್ಮ**
**(Spiritual Discovery = Kabir the weaver is complete God)**

ಶ್ರೀ ಕೃಷ್ಣ ಅಂದರೆ ಶ್ರೀವಿಷ್ಣುವು ಮೂರು ಲೋಕಗಳಲ್ಲಿ (ಸ್ವರ್ಗ, ಪಾತಾಳ, ಪೃಥ್ವಿ) ಒಂದಾದ ಸತೋಗುಣ ವಿಭಾಗದ ಪರಮಾತ್ಮನಾಗಿದ್ದಾನೆ. ಒಂದು ಬ್ರಹ್ಮಾಂಡದಲ್ಲಿ 14 ಲೋಕಗಳಿವೆ. ಬ್ರಹ್ಮಲೋಕವು ಇವುಗಳಿಗಿಂತ ಭಿನ್ನವಾಗಿದೆ. ಈ ರೀತಿಯ ಅಸಂಖ್ಯ ಬ್ರಹ್ಮಾಂಡಗಳಿವೆ.

ಪರಮೇಶ್ವರರಾದ ಕಬೀರರು ಇಂತಹ ಅಸಂಖ್ಯ ಬ್ರಹ್ಮಾಂಡಗಳ ಪ್ರಭುವಾಗಿದ್ದಾರೆ. ಎಲ್ಲಾ ಆತ್ಮಗಳ ಹಾಗೂ ಎಲ್ಲಾ ಬ್ರಹ್ಮಾಂಡಗಳ ಸೃಷ್ಟಿಕರ್ತರಾಗಿದ್ದಾರೆ. ಎಲ್ಲರನ್ನು ಪಾಲಿಸುವವರಾಗಿದ್ದಾರೆ ಹಾಗೂ ಎಲ್ಲರ ಮಾಲೀಕರಾಗಿದ್ದಾರೆ. ಅಂದರೆ ವಾಸುದೇವರಾಗಿದ್ದಾರೆ. ಗೀತೆಯ 3ನೇ ಅಧ್ಯಾಯದ 15ನೇ ಶ್ಲೋಕದಲ್ಲಿ "ಸರ್ವಗತಂ ಬ್ರಹ್ಮಂ" ಎಂದು ಹೇಳಿದೆ. ಇದನ್ನು ಕಬೀರರ ವಿಷಯವಾಗಿಯೇ ಹೇಳಲಾಗಿದೆ. ಗೀತೆಯ 7ನೇ ಅಧ್ಯಾಯದ 29ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ಬೋಧಿಸಿದವನು ಅಂದರೆ ಶ್ರೀಕೃಷ್ಣನು ಲೋಕವೇದದ ಆಧಾರದಿಂದ 'ತತ್‌ಬ್ರಹ್ಮ'ದ ವರ್ಣನೆಯನ್ನು ಮಾಡಿದ್ದಾನೆ. ಅರ್ಜುನನು ಗೀತೆಯ 8ನೇ ಅಧ್ಯಾಯದ 1ನೇ ಶ್ಲೋಕದಲ್ಲಿ 'ತತ್ ಬ್ರಹ್ಮ' ಎಂದರೆ ಏನು ಎಂದು ಪ್ರಶ್ನಿಸಿದ್ದಾನೆ. ಗೀತೆಯನ್ನು ತಿಳಿಸಿದಾತನು 8ನೇ ಅಧ್ಯಾಯದ 3, 8, 9, 10, 20 ಮತ್ತು 22 ನೇ ಶ್ಲೋಕದಲ್ಲಿ ಹಾಗೂ 15ನೆಯ ಅಧ್ಯಾಯದ ಒಂದರಿಂದ 4ನೇ ಶ್ಲೋಕ ಮತ್ತು 16ರಿಂದ 17ನೇ ಶ್ಲೋಕದಲ್ಲಿ ಇದರ ಉತ್ತರವನ್ನು ನೀಡಿದ್ದಾನೆ. 8ನೇ ಅಧ್ಯಾಯದ 3ನೇ ಶ್ಲೋಕದಲ್ಲಿ ಅವನು ಪರಮ ಅಕ್ಷರಬ್ರಹ್ಮ ಎಂದು ಹೇಳಲಾಗಿದೆ. 8ನೇ ಅಧ್ಯಾಯದ 5 ಮತ್ತು 7ನೇ ಶ್ಲೋಕದಲ್ಲಿ ನನ್ನನ್ನು ಭಕ್ತಿಯಿಂದ ಕಾಣು ಹಾಗೂ ನನ್ನನ್ನು ಪಡೆದುಕೋ ಎಂದು ಹೇಳಲಾಗಿದೆ. ಗೀತೆಯ 8ನೇ ಅಧ್ಯಾಯದ 8, 9, 10 ರಲ್ಲಿ ಈ ಪರಮ ಅಕ್ಷರಬ್ರಹ್ಮನು ನನಗಿಂತ ಬೇರೆಯವನು, ಆ ಪರಮ ದಿವ್ಯಪುರುಷನ ಭಕ್ತಿಯನ್ನು ಮಾಡುತ್ತಾರೋ ಅವನು ಅಂತಹ ಭಕ್ತನಿಗೆ ಮಾತ್ರ ಸಿಗುವನು ಎಂದೂ ಹೇಳಲಾಗಿದೆ. 20–22 ನೇ ಶ್ಲೋಕದಲ್ಲಿ ಸಹ ಇವನನ್ನೇ 'ಅವಿನಾಶಿ' ಎಂದು ಕರೆಯಲಾಗಿದೆ. ಎಲ್ಲಾ ಜೀವಿಗಳು ನಾಶಹೊಂದಿದರೂ ಕೂಡ ಇವನು ನಾಶಹೊಂದುವುದಿಲ್ಲ. ಅನನ್ಯ ಭಕ್ತಿ ಹೊಂದಿದವರಿಗೆ ಇವನು ಲಭ್ಯವಾಗುತ್ತಾನೆ.

ಗೀತೆಯನ್ನು ಬೋಧಿಸಿದವನು ಗೀತೆಯ 7ನೇ ಅಧ್ಯಾಯದ 24, 25ನೇ ಶ್ಲೋಕದಲ್ಲಿ ತನ್ನನ್ನು 'ಅವ್ಯಕ್ತ' ನೆಂದು ಹೇಳಿದ್ದಾನೆ. ಇವನನ್ನು ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ 'ಕ್ಷರಪುರುಷ' ಎಂದಿದ್ದಾನೆ. ಗೀತೆಯ 8ನೇ ಅಧ್ಯಾಯದಲ್ಲಿ

18–19ನೇ ಶ್ಲೋಕದಲ್ಲಿ 'ಅವ್ಯಕ್ತ' ಎಂದು ಕರೆಯಲಾಗಿದೆ. ಇವನನ್ನು ಗೀತೆಯ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ 'ಅಕ್ಷರ ಪುರುಷ' ಎಂದು ಕರೆದಿದ್ದಾರೆ. ಈ ಇಬ್ಬರು ಕ್ಷರಪುರುಷ ಮತ್ತು ಅಕ್ಷರಪುರುಷ ಹಾಗೂ ಇವರಲ್ಲಿರುವ ಎಲ್ಲಾ ಜೀವಿಗಳನ್ನು ಮತ್ತು ಇವರ ಲೋಕಗಳನ್ನು ನಾಶವಾಗುವಂಥಾದ್ದು ಎಂದು ಹೇಳಲಾಗಿದೆ. ಅಂದರೆ 'ನಶ್ವರ' ಎಂದು ಹೇಳಲಾಗಿದೆ. 8ನೇ ಅಧ್ಯಾಯದ 20–22ನೇ ಶ್ಲೋಕದಲ್ಲಿ 'ಅವ್ಯಕ್ತ' ಎಂದು ಯಾರನ್ನು ಹೇಳಲಾಗಿದೆಯೋ ಅವರು ಬೇರೆಯವರೇ ಆಗಿದ್ದಾರೆ. ಅಂದರೆ ಗೀತೆಯ 8ನೇ ಅಧ್ಯಾಯದ 3ನೇ ಶ್ಲೋಕದ 'ಪರಮ ಅಕ್ಷರಬ್ರಹ್ಮ'ನು ಇವರೆಲ್ಲರಿಗಿಂತ ಭಿನ್ನವಾಗಿರುವವನು. 'ಕ್ಷರಪುರುಷ ಮತ್ತು ಅಕ್ಷರ ಪುರುಷ' ನಾಶವಾದರೂ ಸಹ ಇವರು ನಾಶವಾಗುವುದಿಲ್ಲ. ಅವರೇ ಕಬೀರ ಪರಮೇಶ್ವರರು. ವಾಸ್ತವವಾಗಿ ಇವರೇ ಅವಿನಾಶಿ.

ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ಈ ರೀತಿ ಹೇಳಲಾಗಿದೆ:– (ಉತ್ತಮ ಪುರುಷಃ) ಶ್ರೇಷ್ಠ ಪ್ರಭು ಎಂದರೆ ಪುರುಷೋತ್ತಮ ಅಂದರೆ 15ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಹೇಳಿರುವ ಕ್ಷರಪುರುಷ ಗೀತೆಯ ಜ್ಞಾನವನ್ನು ನೀಡುವವನು ಮತ್ತು 8ನೇ ಅಧ್ಯಾಯದ 18–19ನೆಯ ಶ್ಲೋಕದಲ್ಲಿ ಹೇಳಿರುವ ಅಕ್ಷರಪುರುಷನಿಗಿಂತ (ತು) ಅಂತು (ಅನ್ಯಃ) ಅನ್ಯ ಅಂದರೆ ಬೇರೆಯವರೇ ಆಗಿದ್ದಾರೆ. ಯಾವ (ಪರಮಾತ್ಮ) ಪರಮಾತ್ಮನು (ಇತಿ) ಈ ಪ್ರಕಾರವಾಗಿ (ಉದಾಹೃತಃ) ಈ ರೀತಿಯಾಗಿ ಹೇಳಿದ್ದಾನೋ (ಯಃ) ಯಾರು (ಲೋಕತ್ರಯಂ) ಮೂರು ಲೋಕಗಳಲ್ಲಿ (ಆವಿಶ್ಯ) ಪ್ರವೇಶ ಮಾಡಿ (ವಿಭರ್ತಿ) ಎಲ್ಲರ ಪಾಲನೆ ಪೋಷಣೆ ಮಾಡುತ್ತಾನೋ, ಅವನೇ (ಅವ್ಯಯಃ) ಅವಿನಾಶಿ (ಈಶ್ವರಃ). ಅವನೇ ಪರಮಪ್ರಭು.

ಉಪಸಂಹಾರ :– ಗೀತೆಯ ಜ್ಞಾನವನ್ನು ನೀಡುವವನು 'ವಾಸ್ತವವಾಗಿ ಎಲ್ಲರನ್ನು ಪಾಲಿಸುವವನು ಮತ್ತು ಅವಿನಾಶಿ ಪರಮಪುರುಷನು ನನಗಿಂತ ಭಿನ್ನವಾಗಿದ್ದಾನೆ. ಅವನೇ ಪುರುಷೋತ್ತಮನು' ಎಂದು ಸ್ಪಷ್ಟಪಡಿಸಿದ್ದಾನೆ. ಗೀತೆಯ ಜ್ಞಾನ ನೀಡುವವನು ಗೀತೆಯ 15ನೇ ಅಧ್ಯಾಯದ 18ನೇ ಶ್ಲೋಕದಲ್ಲಿ, 'ನಾನು ನನ್ನ ಕ್ಷೇತ್ರದ (ಕ್ಷರಪುರುಷನ 21 ಬ್ರಹ್ಮಾಂಡ) ಎಲ್ಲಾ ಜೀವಿಗಳಿಗಿಂತ ಉತ್ತಮನು. ಆದ್ದರಿಂದ ನಾನು ಲೋಕವೇದ ಅಂದರೆ ಕಿವಿಯಿಂದ ಕಿವಿಗೆ ಕೇಳಿರುವ ಜ್ಞಾನದ ಆಧಾರದಿಂದ ಪುರುಷೋತ್ತಮ (ಉತ್ತಮ ಪುರುಷ) ಎಂದು ಪ್ರಸಿದ್ಧಿಯಾಗಿದ್ದೇನೆ'. ಈ ರೀತಿ ಗೀತೆಯ ಜ್ಞಾನವನ್ನು ನೀಡುವವನಾದ ಶ್ರೀಕೃಷ್ಣ ಅಂದರೆ ವಿಷ್ಣುವು ತನ್ನ ಸ್ಥಿತಿಯನ್ನು ಸ್ಪಷ್ಟಪಡಿಸಿದ್ದಾನೆ.

ಗೀತೆಯ 4ನೇ ಅಧ್ಯಾಯದ 5ನೇ ಶ್ಲೋಕದಲ್ಲಿ ಹೇಳಲಾಗಿರುವುದೇನೆಂದರೆ ''ಹೇ, ಅರ್ಜುನ, ನಿನ್ನ ಮತ್ತು ನನ್ನ ಅನೇಕ ಜನ್ಮಗಳಾಗಿವೆ. 2ನೇ ಅಧ್ಯಾಯದ 12ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ, ನಾನು, ನೀನು ಮತ್ತು ಎಲ್ಲ ರಾಜಾಧಿರಾಜರು ಮೊದಲೇ ಜನ್ಮ ತಳೆದಿದ್ದೆವು. ವರ್ತಮಾನದಲ್ಲೂ ಸಹ ಜನ್ಮ ತಳೆದಿದ್ದೇವೆ ಮತ್ತು ಮುಂದೆಯೂ ಜನ್ಮ ತಾಳುವೆವು ಅಂದರೆ ನಮ್ಮ ಜನನ–ಮರಣಗಳು ನಿರಂತರವಾಗಿರುವುವು". 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, 'ನನ್ನ ಸೃಷ್ಟಿ ಆಗಿದೆ. ಆದರೆ ಈ ನನ್ನ ಸೃಷ್ಟಿಯ ಬಗ್ಗೆ ಋಷಿಗಳು ಮತ್ತು ದೇವತೆಗಳಿಗೆ ಏನು ತಿಳಿದಿಲ್ಲ'.

ಗೀತೆಯ ಜ್ಞಾನವನ್ನು ಬೋಧಿಸಿದಾತನು ತನಗಿಂತ ಭಿನ್ನವಾದ ಅವಿನಾಶಿ ಎಂದರೆ 3 ಲೋಕಗಳನ್ನು ಪಾಲಿಸುವ ಪರಮ ಅಕ್ಷರಬ್ರಹ್ಮನನ್ನು ತನಗಿಂತ ಎತ್ತರದಲ್ಲಿರುವವನು ಎಂದು ತಿಳಿಸಿದ್ದಾನೆ. ಅವನೇ ವಾಸ್ತವವಾಗಿ ಅವಿನಾಶಿ ಮತ್ತು ಪುರುಷೋತ್ತಮನು ಹಾಗೂ ಎಲ್ಲರಿಗೂ ಒಡೆಯನು.

ಗೀತೆಯನ್ನು ಬೋಧಿಸುವವನು 18ನೆಯ ಅಧ್ಯಾಯದ 62–66ನೇ ಶ್ಲೋಕದಲ್ಲಿ ಆ ಪುರುಷೋತ್ತಮನ ಆಶ್ರಯಕ್ಕೆ ಹೋಗಲು ತಿಳಿಸಿದ್ದಾನೆ. ಅವನ ಕೃಪೆಯಿಂದ ಪರಮಶಾಂತಿಯು ಸಿಗುವುದು ಹಾಗೂ ಸನಾತನ ಪರಮಧಾಮವು ಪ್ರಾಪ್ತಿಯಾಗುವುದು. ಇದರ ವರ್ಣನೆಯನ್ನು ಗೀತೆಯ 15ನೇ ಅಧ್ಯಾಯದ 1–4 ಶ್ಲೋಕದಲ್ಲಿ ಹೇಳಲಾಗಿದೆ. ಅದೇನೆಂದರೆ, ಪ್ರಪಂಚವೆಂಬ ಅರಳಿ ಮರದ ಬೇರು ಮೇಲಿದೆ. ಅದು ಪರಮ ಅಕ್ಷರ ಬ್ರಹ್ಮ. ಮೂರು ಗುಣಗಳು (ರಜೋಗುಣ ಶ್ರೀ ಬ್ರಹ್ಮಾ, ಸತೋಗುಣ ಶ್ರೀ ವಿಷ್ಣು, ಮತ್ತು ತಮೋಗುಣ ಶ್ರೀ ಶಿವ) ಇವು ಪ್ರಪಂಚವೆಂಬ ಮರದ ಕೊಂಬೆಗಳು. ಪ್ರಪಂಚವೆಂಬ ಮರದ ಎಲ್ಲಾ ಭಾಗಗಳನ್ನು ಯಾವ ಸಂತನು ಬೇರೆ ಬೇರೆ ಎಂದು ಬಣ್ಣಿಸಿದ್ದಾರೋ, (ಸಃ ವೇದ ವಿತ್) ಅವನು ವೇದದ ತಾತ್ಪರ್ಯವನ್ನು ಬಲ್ಲವನು ಅಂದರೆ ಅವನೇ ತತ್ವದರ್ಶಿ ಸಂತನು.

ಈ ತತ್ವದರ್ಶಿಯ ವಿಷಯದಲ್ಲಿ ಗೀತೆಯ 4ನೇ ಅಧ್ಯಾಯದ 32–34ನೇ ಶ್ಲೋಕದಲ್ಲಿ ಹೇಳಿರುವಂತೆ, ಈ ಪರಮ ಅಕ್ಷರಬ್ರಹ್ಮನ ಬಗ್ಗೆ ಅರಿವು ತತ್ವಜ್ಞಾನದಲ್ಲಿ ಅಂದರೆ (ಬ್ರಹ್ಮಣಃ ಮುಖೇ) ಆ ಸಚ್ಚಿದಾನಂದ ಘನ ಬ್ರಹ್ಮನು ತನ್ನ ಬಾಯಿಂದ ಹೇಳಿರುವ ವಾಣಿಯಲ್ಲಿ ವಿಸ್ತಾರವಾಗಿ ತಿಳಿಸಲಾಗಿದೆ. ಈ ಜ್ಞಾನವನ್ನು ತತ್ವದರ್ಶಿ ಸಂತರಿಂದ ಪಡೆದುಕೋ. ಕಬೀರ್ ಪರಮೇಶ್ವರರು ಭೂಮಿಯ ಮೇಲೆ ಸಶರೀರವಾಗಿ ಪ್ರತ್ಯಕ್ಷವಾಗಿ, ನಿಜವಾದ ಆಧ್ಯಾತ್ಮ ಜ್ಞಾನವನ್ನು ತನ್ನ ಕಬೀರ ವಾಣಿಯ (ವೇದದಲ್ಲಿ ಕವಿರ್ಗಿರಭಿಃ)

ಮೂಲಕ ಉಚ್ಚರಿಸಿ ತಿಳಿಸಿದ್ದಾರೆ ಹಾಗೂ ಹೀಗೆ ಹೇಳಿದ್ದಾರೆ–

ಕಬೀರ್ ಅಕ್ಷರ್ ಪುರುಷ್ ಏಕ್ ಪೇಡ್ ಹೈ, ಕ್ಷರ್ ಪುರುಷ್ ವಾಕೀ ಡಾರ್।
ತೀನೋಂ ದೇವಾ ಶಾಖಾ ಹೈಂ ಪಾತ್ ರೂಪ್ ಸಂಸಾರ್॥
ಕಬೀರ್ ಹಮ್ ಹೀ ಅಲಖ್ ಅಲ್ಲಾಹ್ ಹೈ ಮೂಲ್ ರೂಪ್ ಸಂಸಾರ್।
ಅನಂತ್ ಕೋಟಿ ಬ್ರಹ್ಮಾಂಡೋಂ ಕಾ ಮೈಂ ಹೀ ಸಿರ್‌ಜನ್‌ಹಾರ್॥

ಅಂದರೆ ಕಬೀರ್ ಪರಮೇಶ್ವರರು ಗೀತೆಯ 15ನೇ ಅಧ್ಯಾಯವನ್ನು ಈ ಮೇಲೆ ತಿಳಿಸಿದ 2 ದ್ವಿಪದಿಗಳಲ್ಲಿ ತಿಳಿಸಿದ್ದಾರೆ. ಪ್ರಪಂಚವೆಂಬ ಒಂದು ಮರವಿದೆ. ಅದರ ಬೇರು ನಾನು ಅಂದರೆ ಪರಮ ಅಕ್ಷರಪುರುಷನು. ಆ ಬೇರಿನಿಂದ ಅನೇಕ ದೊಡ್ಡ ದೊಡ್ಡ ಕೊಂಬೆಗಳು ಜನ್ಮ ತಾಳುತ್ತವೆ.

ಇವುಗಳಲ್ಲಿ ಒಂದು ಕೊಂಬೆಯು ಕ್ಷರಪುರುಷ. ಆ ದೊಡ್ಡ ಕೊಂಬೆಯಲ್ಲಿ ಹುಟ್ಟಿದ 3 ಸಣ್ಣ ಸಣ್ಣ ರೆಂಬೆಗಳನ್ನು ರಜೋಗುಣವಾದ ಬ್ರಹ್ಮಾ, ಸತೋಗುಣವಾದ ವಿಷ್ಣು, ತಮೋಗುಣವಾದ ಶಿವ ಎಂದು ತಿಳಿ. ಆ ರೆಂಬೆಯಲ್ಲಿ ಇರುವ ಎಲೆಗಳನ್ನು ಪ್ರಪಂಚದ ಜೀವಿಗಳೆಂದು ತಿಳಿ. ಪ್ರಪಂಚವೆಂಬ ಈ ಮರದ ಚಿತ್ರವನ್ನು ನೋಡೋಣ.


ಗೀತೆಯ 15ನೇ ಅಧ್ಯಾಯದ 17ನೇ ಶ್ಲೋಕದಲ್ಲಿ ತಿಳಿಸಿರುವ ಅವಿನಾಶಿ ಪರಮಾತ್ಮನು ಅಂದರೆ ಎಲರನ್ನೂ ಪಾಲಿಸುವವನು. 16ನೇ ಶ್ಲೋಕದಲ್ಲಿ ಹೇಳಿರುವ ಕ್ಷರಪುರುಷ ಮತ್ತು ಅಕ್ಷರಪುರುಷನಿಗಿಂತ ಭಿನ್ನವಾದವನು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಅವನೇ ಎಲ್ಲವನ್ನು ಪಾಲಿಸುವವನು ಮತ್ತು ಪೋಷಿಸುವವನು. ಅವನೇ ಪರಮಪುರುಷನು ಅಂದರೆ ಪುರುಷೋತ್ತಮನು. ಅವನನ್ನು ಪರಮಾತ್ಮನು ಎಂದು ಹೇಳಲಾಗಿದೆ. ಇದರಿಂದ ತಿಳಿಯುವುದೇನೆಂದರೆ, ಪೂರ್ಣ ಪರಮಾತ್ಮನು ಗೀತೆಯ ಜ್ಞಾನವನ್ನು ಬೋಧಿಸುವ ಅಂದರೆ ಪುರಾಣಿಕರ ಪ್ರಕಾರ ಶ್ರೀ ಕೃಷ್ಣ ಅಂದರೆ ಶ್ರೀ ವಿಷ್ಣುವಿಗಿಂತ ಭಿನ್ನನು.

ಕಬೀರ್ ಪರಮೇಶ್ವರರು ತನ್ನ ಸ್ಥಿತಿಯನ್ನು ಹೀಗೆ ಹೇಳಿದ್ದಾರೆ–

ಕಬೀರ, ಅವಧೂ ಅವಿಗತ್ ಸೇ ಚಲ್ ಆಯಾ, ಮೇರಾ ಭೇದ್ ಮರಮ್ ನಾ ಪಾಯಾ।
ನಾ ಮೇರಾ ಜನ್ಮ್ ನಾ ಗರ್ಭ್ ಬಸೇರಾ ಬಾಲಕ್ ಬನ್ ದಿಖ್‌ಲಾಯಾ।
ಕಾಶೀ ಶಹರ್ ಜಲ್ ಕಮಲ್ ಪರ್ ಡೇರಾ ತಹಾ ಜುಲಾಹೇ ನೇ ಪಾಯಾ॥
ಮಾತ್–ಪಿತಾ ಮೇರೇ ಕಛು ನಾಹೀಂ, ನಾ ಮೇರೆ ಘರ್ ದಾಸೀ।
ಜುಲಾಹೆ ಕಾ ಸುತ್ ಆನ್ ಕಹಾಯಾ, ಜಗತ್ ಕರೇ ಮೇರೀ ಹಾಸೀ॥
ಪಾಂಚ್ ತತ್ವ್ ಕಾ ಧಡ್ ನಹೀಂ ಮೇರೆ ಜಾನೂ ಜ್ಞಾನ್ ಅಪಾರಾ।
ಸತ್ ಸ್ವರೂಪೀ ನಾಮ್ ಸಾಹೇಬ್ ಕಾ ವೋ ಹೀ ನಾಮ್ ಹಮಾರಾ॥
ಅಧರ್ ದ್ವೀಪ್ ಗಗನ್ ಗುಫಾ ಮೆಂ ತಹಾಂ ನಿಜ್ ವಸ್ತು ಹಮಾರಾ।
ತೇರಾ ಜ್ಯೋತಿ ಸ್ವರೂಪೀ ಅಲಖ್ ನಿರಂಜನ್ ಧರತಾ ಧ್ಯಾನ್ ಹಮಾರಾ॥
ಹಾಡ್ ಚಾಮ್ ಲಹೂ ನಾ ಮೇರೇ ಕೋಯಿ ಜಾನೇ ಸತ್ ನಾಮ್ ಉಪಾಸೀ।
ತಾರಣ್ ತರಣ್ ಅಭಯ್ ಪದ್ ದಾತಾ ಮೈಂ ಹೂಂ ಕಬೀರ್ ಅವಿನಾಶೀ॥

ಭಾವಾರ್ಥ:– ಕಬೀರ್ ಪರಮೇಶ್ವರರು ತನ್ನ ಬಗ್ಗೆ ಸ್ವತಃ ಅವರೇ ತಿಳಿಸಿದ್ದಾರೆ. ಅಲಖ್‌ನಿರಂಜನ್ ಎಂದು ಘೋಷಣೆ ಮಾಡುತ್ತಿದ್ದ ತಮೋಗುಣ ಶಿವನ ಉಪಾಸಕರಾದ ಗೋರಖ್‌ನಾಥರು ಒಮ್ಮೆ ಕಬೀರರ ಜೊತೆ ಜ್ಞಾನದ ಬಗ್ಗೆ ಚರ್ಚೆ ಮಾಡಿದರು. ಆ ಚರ್ಚೆಯಲ್ಲಿ ಅವರು ಸೋತು ಹೋದರು. ನಂತರ ಸಿದ್ಧಿಗಳ ಪ್ರಯೋಗ ಮಾಡಿದರು. ಆದರೂ ಸಹ ಕಬೀರರಿಂದ ಸೋತು ಹೋದರು. ಆಗ ಗೋರಖ್‌ನಾಥರು ಹೀಗೆಂದರು, "ಇಲ್ಲಿಯವರೆಗೂ ಯಾರೂ ನನ್ನ ಸಮಾನ ನಿಲ್ಲಲು ಸಾಧ್ಯವಾಗಿರಲಿಲ್ಲ.

ಈಗ ನೀವು ಎಲ್ಲಿಂದ ಬಂದಿರುವಿರಿ?" ಗೋರಖ್‌ನಾಥರ ಪ್ರಶ್ನೆಗೆ ಈ ರೀತಿ ಉತ್ತರವನ್ನು ನೀಡಲಾಯಿತು. 'ಹೇ ಅವದೂತರೇ, (ಗೋರಖನಾಥರು ಒಂದು ಹರಿದ ಬಟ್ಟೆಯನ್ನು ಲಂಗೋಟಿಯ ರೂಪದಲ್ಲಿ ಧರಿಸುತ್ತಿದ್ದರು. ಇಂತಹ ವೇಷವನ್ನು



ಧರಿಸಿದವರಿಗೆ ಸಂತರ ಭಾಷೆಯಲ್ಲಿ ಅವದೂತ ಎಂದು ಕರೆಯುತ್ತಾರೆ. ಹಾಗಾಗಿ ಕಬೀರರು ಪ್ರೀತಿಯಿಂದ ಅವದೂ ಎಂದು ಸಂಬೋಧಿಸಿದ್ದಾರೆ). ಗೌಪ್ಯಸ್ಥಾನ ಅಂದರೆ ಯಾವುದರ ರಹಸ್ಯವು ನನ್ನ ವಿನಃ ಬೇರೆಯವರಿಗೆ ತಿಳಿದಿಲ್ಲವೋ ಆ ಸ್ಥಾನದ ಸ್ಥಿತಿಯು ಯಾರಿಗೆ ಗೊತ್ತಿಲ್ಲವೋ, ಅದನ್ನು ನಾನು ತಿಳಿದಿರುವೆ. ಅಲ್ಲಿಂದ ನಾನು ಸಶರೀರವಾಗಿ ಇಲ್ಲಿಗೆ ಬಂದಿದ್ದೇನೆ. ಕಾಶೀ ನಗರದ ಒಂದು ಸರೋವರದಲ್ಲಿ ತಾವರೆ ಹೂವಿನ ಮೇಲೆ ಬಾಲಕನ ರೂಪ ಧರಿಸಿ ಅವತರಿಸಿದ್ದೇನೆ. ಅಲ್ಲಿಂದ 'ನೀರು' ಎಂಬ ನೇಕಾರನು ಎತ್ತಿಕೊಂಡು ಬಂದನು. ಈ ಕಾರಣದಿಂದ ನಾನು ಒಬ್ಬ ನೇಕಾರನ ಮಗ ಎಂದು ಕರೆಯಲ್ಪಡುತ್ತೇನೆ. ಮೇಲ್ಜಾತಿಯ ಜನರು ನನ್ನನ್ನು ನೇಕಾರ ಎಂದು ಹಾಸ್ಯ ಮಾಡುತ್ತಿದ್ದರು. ನನ್ನ ಜ್ಞಾನವನ್ನು ಅವರು ಉದಾಸೀನ ಮಾಡುತ್ತಿದ್ದರು. ಅಸಲಿಗೆ ನನ್ನ ಜನ್ಮವಾಗೇ ಇಲ್ಲ. ನಾನು ಯಾವುದೇ ತಾಯಿಯ ಗರ್ಭದಲ್ಲಿ ಬೆಳೆಯಲಿಲ್ಲ. ನನಗೆ ಯಾರೂ ತಂದೆ–ತಾಯಿ ಮತ್ತು ಹೆಂಡತಿ ಇಲ್ಲ. ನನ್ನ ಶರೀರ ಪಂಚಭೂತಗಳಿಂದಾಗಿಲ್ಲ. ಇದು ಒಂದು 'ನೂರಿ' ತತ್ವದಿಂದಾಗಿದೆ ಎಂದರು. ಕಬೀರ್ ಪರಮೇಶ್ವರರು 'ವಿದೇಹಿಗಳು' ಅಂದರೆ ಎಲ್ಲರಿಂದ ಭಿನ್ನವಾದ 'ಅಲೌಖಿಕ' ಶರೀರವುಳ್ಳವರು. ಕಬೀರರು ಹೇಳಿರುವುದೇನೆಂದರೆ, "ಮೇಲೆ ಆಕಾಶದಲ್ಲಿ ಒಂದು ಗುಹೆಯಿದೆ. ಅದೇ ನನ್ನ ಲೋಕಕ್ಕೆ ಹೋಗುವ ದಾರಿ. ಅಲ್ಲಿ ಒಂದು ವಿಶೇಷವಾದ ಧ್ವನಿಯುಂಟಾಗುತ್ತಿರುತ್ತದೆ. ಹೇ ಗೋರಖ್‌ನಾಥರೇ, ನಿಮ್ಮ ಅಲಖ್‌ನಿರಂಜನ್ ಅಂದರೆ ಕ್ಷರಬ್ರಹ್ಮನು ಸಹ ನನ್ನನ್ನು ಪೂಜಿಸುತ್ತಾನೆ".

**ಆಧಾರ:– ಗೀತೆಯ ಜ್ಞಾನವನ್ನು ತಿಳಿಸುವ ಕ್ಷರಬ್ರಹ್ಮನು 18ನೇ ಅಧ್ಯಾಯದ 64ನೇ ಶ್ಲೋಕದಲ್ಲಿ ತಿಳಿಸಿರುವುದೇನೆಂದರೆ, "ಆ ಪರಮೇಶ್ವರನು ಯಾರ ಆಶ್ರಯಕ್ಕೆ ಹೋಗಲು 18ನೇ ಅಧ್ಯಾಯ 62ನೇ ಶ್ಲೋಕದಲ್ಲಿ ಹೇಳಲಾಗಿದೆಯೋ ಅವನೇ ನನ್ನ ಇಷ್ಟದೈವ. ಅಂದರೆ ನಾನು ಸಹ ಅವನ ಭಕ್ತ".**

**"ಹೀಗೆ ವೇದಗಳಲ್ಲಿ ಕವಿರ್ದೇವ, ಕುರಾನ್‌ನಲ್ಲಿ ಅಲ್ಲಾಹ್ ಕಬೀರ್ ಮುಂತಾದ ನಿಜವಾದ ಹೆಸರುಗಳು ಪರಮಾತ್ಮನದ್ದೇ ಆಗಿದೆ. ಯಾವುದು ಪರಮಾತ್ಮನ ನಿಜವಾದ ಹೆಸರೋ ಅದೇ ನನ್ನ ಹೆಸರು 'ಕಬೀರ್' ಎಂದಾಗಿದೆ. ಎಂದು ಕಬೀರರು ತಿಳಿಸಿದ್ದಾರೆ.**

**ನಾನು ಸಂಪೂರ್ಣ ಆಧ್ಯಾತ್ಮ ಜ್ಞಾನವನ್ನು ತಿಳಿದವನಾಗಿದ್ದೇನೆ. ಯಾರಾದರೂ ಸತ್ಯನಾಮ ಅಂದರೆ ನಿಜವಾದ ಭಕ್ತಿಮಂತ್ರದ ಸ್ಮರಣೆಯನ್ನು ಮಾಡುವವನೇ ನನ್ನ ವಿಷಯವನ್ನು ತಿಳಿದವನಾಗಿರುತ್ತಾನೆ. ನಾನು ಜೀವಿಗೆ ಪೂರ್ಣಮುಕ್ತಿಯನ್ನು ಪ್ರದಾನಮಾಡಿ ಅವನನ್ನು ಭಯಮುಕ್ತನನ್ನಾಗಿ ಮಾಡುತ್ತೇನೆ. ನಾನು ಅವಿನಾಶಿ ಕಬೀರ.**

**ಉಪಸಂಹಾರ :– ಈ ವಿವರಣೆಯಿಂದ ಶ್ರೀಕೃಷ್ಣನು ಗೀತೆಯಲ್ಲಿ ತನ್ನನ್ನು 'ನಶ್ವರನು' ಎಂದು ತಿಳಿಸಿರುವುದು ಸ್ಪಷ್ಟವಾಗಿರುತ್ತದೆ. ಪರಮಾತ್ಮ ಕಬೀರರು ತನ್ನನ್ನು ಅವಿನಾಶಿ ಎಂದು ತಿಳಿಸಿದ್ದಾರೆ. ಕಬೀರರು ಹೀಗೆಂದಿದ್ದಾರೆ–**

ಕಬೀರ್ ಬೇದ್ ಮೇರಾ ಭೇದ್ ಹೈ ಮೈಂ ನಾ ಬೇದನ್ ಕೆ ಮಾಹೀ।

ಜೋನ್ ಬೇದ್ ಸೆ ಮೈಂ ಮಿಲೂಂ, ಚಾರೋಂ ಬೇದ್ ಜಾನ್‌ತೇ ನಾಂಹೀ॥

**ಭಾವಾರ್ಥ :– ಕಬೀರ್ ಪರಮೇಶ್ವರರು ಹೀಗೆಂದಿದ್ದಾರೆ, "4 ವೇದಗಳು ನನ್ನ ಮಹಿಮೆಯಿಂದಲೇ ತುಂಬಿವೆ. ಆದರೆ ನನ್ನ ಪ್ರಾಪ್ತಿಯ ವಿಧಿಯನ್ನು ಈ ನಾಲ್ಕು ವೇದಗಳಲ್ಲಿ (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ) ತಿಳಿಸಲಾಗಿಲ್ಲ. ಸೂಕ್ಷ್ಮವೇದ ಅಂದರೆ ತತ್ವಜ್ಞಾನದಲ್ಲಿ ನನ್ನ ಪ್ರಾಪ್ತಿಯ ವಿಧಿಯನ್ನೇ ತಿಳಿಸಲಾಗಿದೆ. ಈ ಜ್ಞಾನವು ನಾಲ್ಕು ವೇದಗಳ ಜ್ಞಾನಕ್ಕಿಂತ ಭಿನ್ನವಾಗಿದೆ.**

**ಆಧಾರಕ್ಕಾಗಿ ವೇದಗಳ ಕೆಲವು ಮಂತ್ರಗಳನ್ನು ಪ್ರಸ್ತುತಪಡಿಸುತ್ತೇನೆ.**

**ಪರಮೇಶ್ವರ ಕಬೀರರು ಮೇಲೆ ತಿಳಿಸಿದ ವಾಣಿಯಲ್ಲಿ ಹೇಳಿರುವುದೇನೆಂದರೆ, ನಾನು ಮೇಲಿನ ಲೋಕದಿಂದ ಈ ಭೂಮಿಗೆ ನಡೆದುಬಂದಿದ್ದೇನೆ. ಈ ರಹಸ್ಯವು ಬೇರೆ ಯಾರಿಗೂ ತಿಳಿದಿಲ್ಲ. ಸಂತ ಗರೀಬದಾಸರು ಹೀಗೆಂದು ಹೇಳಿದ್ದಾರೆ:–**

ಗರೀಬ್, ಅಜಬ್ ನಗರ್ ಮೇಂ ಲೇ ಗಯಾ ಮುಝ್‌ಕೋ ಸತ್‌ಗುರು ಆನ್।

ಝಿಲಕೆ ಬಿಂಬ್ ಅಗಾಧ್ ಗತಿ ಸೂತೆ ಚಾದರ್ ತಾನ್।

**ಅಂದರೆ ಸದ್ಗುರು ಕಬೀರರು ಮೇಲಿನ ಲೋಕದಿಂದ ಈ ಭೂಮಿಗೆ ನಡೆದು ಬಂದು ನನ್ನನ್ನು ತಮ್ಮ ಜೊತೆಯಲ್ಲಿ ಮೇಲಿನ ಒಂದು ಅದ್ಭುತನಗರ ಎಂದರೆ ಅದ್ಭುತ ಲೋಕಕ್ಕೆ ಕರೆದುಕೊಂಡು ಹೋದರು. ನಾನು ಚಿಂತಾಹೀನನಾಗಿ ಹೋಗಿದ್ದೇನೆ. ಮರಣದ ನಂತರ ಅತ್ಯಂತ ಸುಖವಾದ ಅಂದರೆ ಸುಖಸಾಗರವೆಂಬ ಸತ್ಯಲೋಕಕ್ಕೆ ಸದ್ಭಕ್ತಿಯನ್ನು ಮಾಡುತ್ತಾ ಹೊರಟು**

ಹೋಗುತ್ತೇನೆ ಎಂದು ಗರೀಬದಾಸರು ತಿಳಿಸಿದ್ದಾರೆ.

ಪರಮೇಶ್ವರನು ಮೇಲಿನ ಲೋಕದಲ್ಲಿ ವಿರಾಜಮಾನನಾಗಿ ಇದ್ದಾನೆ ಹಾಗೂ ಅಲ್ಲಿಂದ ನಡೆದು ಭೂಮಿಗೆ ಬಂದಿದ್ದಾನೆ ಎಂದು ವೇದಗಳು ಸಹ ತಿಳಿಸುತ್ತವೆ. ಒಳ್ಳೆಯ ಆತ್ಮಗಳಿಗೆ ಅವನು ಸಿಗುತ್ತಾನೆ ಹಾಗೂ ಅವರಿಗೆ ಉಪದೇಶವನ್ನು ನೀಡುತ್ತಾನೆ. ನಿಜವಾದ ಅಧ್ಯಾತ್ಮಿಕ ಜ್ಞಾನವನ್ನು ತನ್ನ ವಾಣಿಯ ಮೂಲಕ ಹೇಳುತ್ತಾನೆ. ಇದನ್ನೇ ತತ್ವಜ್ಞಾನ (ಸೂಕ್ಷ್ಮವೇದ) ಎಂದು ಕರೆಯುತ್ತಾರೆ ಎನ್ನುವುದನ್ನು ವೇದಗಳು ತಿಳಿಸಿವೆ.

**ಆಧಾರ :– ಋಗ್ವೇದದ 9ನೇ ಮಂಡಲದ 54ನೇ ಸೂಕ್ತಿಯ 3ನೇ ಮಂತ್ರ :**

ಅಯಮ್ ವಿಶ್ವಾನಿ ತಿಷ್ಠತಿಂ ಪುನಾನೋಂ ಭುವನೋಪರಿ ಸೋಮಃ ದೇವಃ ನ ಸೂರ್ಯಃ॥

ಅಂದರೆ ಹೇಗೆ ಸೂರ್ಯನು ಆಕಾಶದಲ್ಲೇ ಇದ್ದು ಎಲ್ಲರಿಗೂ ಬೆಳಕನ್ನು ಹಾಗೂ ತಾಪವನ್ನು ನೀಡುತ್ತಾನೋ, ಹಾಗೆಯೇ ಅಮರನಾದ ಪರಮೇಶ್ವರನು ಎಲ್ಲರನ್ನು ಪವಿತ್ರಗೊಳಿಸಿ ಎಲ್ಲಾ ಬ್ರಹ್ಮಾಂಡಗಳಿಗಿಂತ ಮೇಲಿರುವ ಭಾಗದಲ್ಲಿ ವಿರಾಜಮಾನನಾಗಿರುತ್ತಾನೆ. ಅಂದರೆ ಒಂದು ಸ್ಥಾನದಲ್ಲಿ ಕುಳಿತಿರುತ್ತಾನೆ.

**ಋಗ್ವೇದದ 9ನೇ ಮಂಡಲದ 86ನೇ ಸೂಕ್ತಿಯ 26ನೇ ಮಂತ್ರ:–**

ಇಂದುಃ ಪುನಾನಃ ಅತಿ ಗಾಹತೇ ಮೃಯಃ ವಿಶ್ವಾನಿ ಕೃಣ್ವನ್ ಸುಪಥಾನಿ ಯಜ್ಯವೇ।
ಗಾಃ ಕೃಣ್ವಾನಃ ನಿರ್ಜಿನಮ್ ಹರ್ಯತ್ ಕವಿರ್ ಅತ್ಯೋ ನ ಕ್ರೀಲನ್ ಪರಿ ವಾರಮ್ ಅರ್ಯತಿ॥

ಅಂದರೆ ಧಾರ್ಮಿಕ ಅನುಷ್ಠಾನ ಅಂದರೆ ಪೂಜೆಯನ್ನು ಮಾಡುವ ಭಕ್ತರಿಗಾಗಿ ಪರಮೇಶ್ವರನು ಎಲ್ಲಾ ಮಾರ್ಗಗಳನ್ನು ಸುಗಮಗೊಳಿಸುತ್ತ ಅವರ ಕಷ್ಟಗಳನ್ನು ಕೊನೆಗೊಳಿಸುತ್ತಾನೆ. ಮತ್ತು ಸಾಧಕನ ಪಾಪವನ್ನು ನಾಶಮಾಡಿ ಶುದ್ಧಗೊಳಿಸುತ್ತಾನೆ. ತನ್ನ ತೇಜೋಮಯವಾದ ರೂಪವನ್ನು ಸರಳವಾಗಿ ಅಂದರೆ ಪ್ರಕಾಶಯುಕ್ತವನ್ನಾಗಿ ಮಾಡಿ ಕವಿರ್ದೇವ ಅರ್ಥಾತ್ ಪರಮಾತ್ಮ ಕವಿರ್ ಅಂದರೆ ಆಕಾಶದ ಮಿಂಚಿನಂತೆ ಬಹಳ ವೇಗವಾಗಿ ನಡೆದು ಬರುತ್ತಾನೆ. ಯಾರು ಮಿಂಚಿನಂತೆ ಲೀಲೆ ಮಾಡುತ್ತಾ ಒಳ್ಳೆಯ ಪುರುಷ ಅಂದರೆ ಒಳ್ಳೆಯ ಭಕ್ತರ ಆತ್ಮಗಳನ್ನು ತಲುಪುತ್ತಾನೋ, ಅವನೇ ಕವಿರ್ದೇವನು.

**ಋಗ್ವೇದದ 9ನೇ ಮಂಡಲದ 82ನೇ ಸೂಕ್ತಿಯ 1ನೇ ಮಂತ್ರ :–**

ಅಸಾವಿ ಸೋಮಃ ಅರುಷಃ ವೃಷಾ ಹರಿಃ ರಾಜೇವ್ ದಸ್ಮಃ ಅಭಿ ಗಾ ಅಚಿಕ್ರದತ್।
ಪುನಾನಃ ವಾರಮ್ ಪರ್ಯೇತಿ ಅವ್ಯಯಮ್ ಶ್ಯೇನಃ ನ ಯೋನಿ ಘೃತವನ್ತಮ್ ಆಸದಮ್॥(1)

ಅಂದರೆ ಎಲ್ಲರನ್ನು ಸೃಷ್ಟಿ ಮಾಡುವ ತೇಜೋಮಯವಾದ ಶರೀರವನ್ನು ಹೊಂದಿರುವ ಪರಮೇಶ್ವರನು ನಿಜವಾದ ಆಧ್ಯಾತ್ಮಿಕ ಜ್ಞಾನ ಹಾಗೂ ಸುಖದ ಸುರಿಮಳೆಯನ್ನು ಸುರಿಸುವ ಹಾಗೂ ಪಾಪಗಳನ್ನು ತೊಳೆಯುವ ಕಬೀರ್ ಪರಮೇಶ್ವರರು (ರಾಜೇವ್) ರಾಜನಂತೆ ಎಲ್ಲರಿಗೂ ಸಮಾನವಾದ (ದಸ್ಮಃ) ದರ್ಶನ ಕೊಡುವರು. ಅಂದರೆ ಈ ಪೂರ್ಣ ಪರಮಾತ್ಮನು ಮೇಲಿರುವ ತನ್ನ ನಿಜವಾದ ಲೋಕದಂತಿರುವ ರಾಜಧಾನಿಯಲ್ಲಿ ಸಿಂಹಾಸನದ ಮೇಲೆ ವಿರಾಜಮಾನನಾಗಿರುತ್ತಾನೆ. ಅವನು ನೋಡಲು ರಾಜನಂತಿರುತ್ತಾನೆ. ಆ ಪರಮೇಶ್ವರನೇ ಅಲ್ಲಿಂದ ನಡೆದು ಬಂದು ಭೂಮಿ ಮುಂತಾದ ಲೋಕಗಳಿಗೆ ಜ್ಞಾನವನ್ನು ನೀಡುತ್ತಾನೆ. ಅವನ ಅಮೃತವಾಣಿಯು ಝೇಂಕರಿಸುತ್ತದೆ. ಅವನು (ವಾರಮ್) ಶ್ರೇಷ್ಠ ಪುರುಷರ ಅಂದರೆ ಶ್ರೇಷ್ಠ ಆತ್ಮಗಳನ್ನು ತನ್ನ ಅಮೃತವಾಣಿಯ ಆಶೀರ್ವಾದದಿಂದ ಪವಿತ್ರಗೊಳಿಸುತ್ತಾ ಭಕ್ತರನ್ನಾಗಿ ಮಾಡುತ್ತಾನೆ. ಎಲ್ಲರಿಗೂ ಪ್ರಾಪ್ತವಾಗುತ್ತಾನೆ. ಹೇಗೆ (ಶ್ಯೇನಃ) ಆಕಾಶದಲ್ಲಿರುವ ಮಿಂಚು ತನ್ನ ಸ್ನೇಹಮಯವಾದ ಸ್ಥಾನಗಳನ್ನು ಆಧಾರವಾಗಿಸಿ ಪ್ರಾಪ್ತವಾಗುತ್ತದೆಯೋ ಹಾಗೆಯೇ ಪರಮೇಶ್ವರನು ತನ್ನ ಪ್ರೀತಿ ಪಾತ್ರರಿಗೆ ಪ್ರಾಪ್ತವಾಗುತ್ತಾನೆ.

ಭಾವಾರ್ಥ :– ಪರಮಾತ್ಮನು ಎಲ್ಲಕ್ಕಿಂತ ಮೇಲಿರುವ ಸತ್ಯಲೋಕವೆಂಬ ಲೋಕದಲ್ಲಿ ಸಿಂಹಾಸನದ ಮೇಲೆ ಒಬ್ಬ ಸಾಮ್ರಾಟನ ರೀತಿಯಲ್ಲಿ ತಲೆಯ ಮೇಲೆ ಕಿರೀಟ ಹಾಗೂ ಛತ್ರಿಯನ್ನು ಧರಿಸಿರುತ್ತಾನೆ. ಒಂದು ಗುಮ್ಮಟದಂತಹ ಅರಮನೆಯಲ್ಲಿ ಕುಳಿತಿದ್ದಾನೆ. ಪರಮಾತ್ಮನು ನೋಡಲು ಒಬ್ಬ ರಾಜನಂತೆ ಹಾಗೂ ಒಬ್ಬ ಮನುಷ್ಯನ ರೂಪದಲ್ಲಿ ಇದ್ದಾನೆ. ಹೇಗೆ ಆಕಾಶದ ಮಿಂಚು ಒಂದು ಧಾತುವಿನ ಮೇಲೆ ಬಿದ್ದು ಅದನ್ನು ಆಕರ್ಷಿಸುವುದೋ, ಹಾಗೆಯೇ ಪರಮಾತ್ಮನು ತನ್ನ ರಾಜಧಾನಿಯಿಂದ ನಡೆದು ಬಂದು ಭೂಮಿ ಮುಂತಾದ ಲೋಕಗಳಲ್ಲಿ ಸಂಚರಿಸುತ್ತಾನೆ. ಯಾರು ದೃಢವಾಗಿರುತ್ತಾರೋ, ಅಂಥವರಿಗೆ ಪರಮಾತ್ಮನು ಆಕರ್ಷಿತಗೊಂಡು ಒಳ್ಳೆಯ ಆತ್ಮಗಳಿಗೆ ಪ್ರಾಪ್ತಿಯಾಗುತ್ತಾನೆ. ಆ ಆತ್ಮಗಳಿಗೆ ಪರಮಾತ್ಮನು ಯಥಾರ್ಥ ಆಧ್ಯಾತ್ಮ ಜ್ಞಾನವನ್ನು

ಅಂದರೆ ತತ್ವಜ್ಞಾನದ ಉಪದೇಶವನ್ನು ನೀಡುತ್ತಾನೆ.

ಕಬೀರ್ ಪರಮೇಶ್ವರರು ಮೇಲಿನಿಂದ ಇಳಿದು ಬಂದು ಈ ಕೆಳಕಂಡ ದೃಢಭಕ್ತರನ್ನು ಭೇಟಿಯಾಗಿದ್ದಾರೆ.

1. ಸೇಟ್ ಧರ್ಮದಾಸರು ಬಾಂಧವಗಢ್ (ಮಧ್ಯಪ್ರದೇಶ)
2. ಶ್ರೀ ನಾನಕ್‌ದೇವ್ – ಸಿಖ್ ಧರ್ಮದ ಪ್ರವರ್ತಕರು
3. ಶ್ರೀ ದಾದೂದಾಸರು
4. ಸಂತ ಗರೀಬ್‌ದಾಸರು – ಛುಡಾನೀ ಗ್ರಾಮ, ಝುಜ್ಜರ್ ಜಿಲ್ಲೆ, ಹರಿಯಾಣ
5. ಶ್ರೀ ಮಲೂಕ್‌ದಾಸರು
6. ಶ್ರೀ ಘೀಸಾದಾಸರು – ಖೇಖಡಾ ಗ್ರಾಮ, ಬಾಗಪತ್ ಜಿಲ್ಲೆ, ಉತ್ತರಪ್ರದೇಶ

ವಿವೇಚನೆ :– ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ) ಪರಮಾತ್ಮನ ಪರಿಚಯವನ್ನು ಮಾಡಿಸುತ್ತದೆ. ಪರಮಾತ್ಮನು ಹೇಗಿದ್ದಾನೆ? ಯಾವ ಲೀಲೆಯನ್ನು ಮಾಡುತ್ತಾನೆ? ಎಲ್ಲಿರುತ್ತಾನೆ? ಅವನನ್ನು ಪಡೆಯುವ ವಿಧಾನ ಯಾವುದು? ಹಿಂದೂ ಧರ್ಮದವರು ಅಂದರೆ ಸನಾತನ ಪಂಥದವರು ನಾಲ್ಕು ವೇದಗಳನ್ನು ಸತ್ಯವಿದ್ಯೆಯ ಮೂಲ ಎಂದು ತಿಳಿಯುತ್ತಾರೆ. ಮೇಲೆ ತಿಳಿಸಿರುವ ಹಾಗೂ ಮುಂದೆ ಹೇಳಲಿರುವ ವೇದಮಂತ್ರಗಳಿಂದ ಸ್ಪಷ್ಟವಾಗುವುದೇನೆಂದರೆ, ಪರಮಾತ್ಮನು ಇಂತಹ ಲೀಲೆಗಳನ್ನು ಮಾಡುತ್ತಾನೆ. ವೇದಗಳಲ್ಲಿಯೇ ವರ್ಣಿಸಲಾದ ಪರಮಾತ್ಮನ ಲಕ್ಷಣಗಳನ್ನು ನೋಡಿದಾಗ ಕೇವಲ ಕಬೀರ್ ಪರಮೇಶ್ವರನು ಮಾತ್ರ ನಿಜವಾದ ಪರಮಾತ್ಮನೆಂದು ತಿಳಿಯುತ್ತದೆ. ವೇದಗಳಲ್ಲಿ ಕಬೀರ್ ಪರಮೇಶ್ವರನ ಹೆಸರು ಕವಿರ್ದೇವ್ ಎಂದಿದೆ. ಹಾಗಾಗಿ ನೇಕಾರರಾದ ಕಬೀರರು ಪೂರ್ಣ ಪರಮಾತ್ಮರು **(Kabir the weaver is complete God)**

**ಋಗ್ವೇದದ 9ನೇ ಮಂಡಲದ 82ನೇ ಸೂಕ್ತಿಯ 2ನೇ ಮಂತ್ರ :–**

ಕವಿರ್ವೇದ್‌ಸ್ಯಾ ಪರ್ಯೇಷಿ ಮಾಹಿನಮ್ ಅತ್ಯಃ ನ ಮೃಷ್ಟಃ ಅಭಿ ವಾಜಮ್ ಅರ್ಷಸಿ।
ಅಪಸೇಧನ್ ದುರಿತಾ ಸೋಮ್ ಮೃಲಯ್ ಘೃತಮ್ ವಸಾನಃಪರಿಯಾಸಿ ನಿರ್ಣಿಜಮ್॥ (2)

ಅಂದರೆ ಹೇ ಪರಮೇಶ್ವರ, ನೀನು ಉಪದೇಶ ಮಾಡುವ ಅಂದರೆ ನಿಜವಾದ ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಜ್ಞಾನ ಅಂದರೆ ತತ್ವಜ್ಞಾನವನ್ನು ತಿಳಿಸುವ ಇಚ್ಛೆಯಿಂದ ಮಹಾಪುರುಷರಿಗೆ ಪ್ರಾಪ್ತಿಯಾಗುವೆ. ಅವರನ್ನು ನಿನ್ನ ಮೇಲಿರುವ ಲೋಕದಿಂದ ತೆರಳಿ ಭೇಟಿಯಾಗುವೆ. ನೀವು ಅತ್ಯಂತ ವೇಗವಾದ ಪದಾರ್ಥದಂತೆ ಕ್ಷಿಪ್ರವಾಗಿ ಅಂದರೆ ಬೆಳಕಿನಂತೆ ಹೊರಟು ನಮ್ಮ ಆಧ್ಯಾತ್ಮಿಕ ಅನುಷ್ಠಾನಗಳಲ್ಲಿ ಬಂದು ತಲುಪುವಿರಿ. ನೀನೇ ಕವಿರ್ದೇವ ಅಂದರೆ ಕಬೀರಪ್ರಭು. {ವೇದಗಳಲ್ಲಿ ಪರಮೇಶ್ವರನ ನಿಜವಾದ ಹೆಸರನ್ನು ಕವಿರ್ದೇವ ಎಂದು ಬರೆಯಲಾಗಿದೆ. ಈ ಹಿಂದೆ ಎಲ್ಲಾ ಸಂತರು 'ವ' ಎನ್ನುವುದನ್ನು 'ಬ' ಎಂದು ಹೇಳುತ್ತಿದ್ದರು. ಅಂದರೆ ವೇದವನ್ನು 'ಬೇದ' ಎಂದು ಕರೆಯುತ್ತಿದ್ದರು. ಅದೇ ರೀತಿ ವೇದಗಳಲ್ಲಿ ಬರೆದಿರುವ ಕವಿರ್ದೇವನನ್ನು ಕಬೀರಪರಮಾತ್ಮ ಎಂದು ಕರೆಯಲು ಪ್ರಾರಂಭಿಸಿದರು. ಪರಮಾತ್ಮನು ಸಹ ಸಂತರಿಗೆ ಇದೇ ಹೆಸರಿನಿಂದ ತನ್ನ ಪರಿಚಯವನ್ನು ಮಾಡಿಕೊಟ್ಟಿದ್ದಾನೆ. ಮುಸಲ್ಮಾನ ಧರ್ಮಪ್ರವರ್ತಕರಾದ ಹಜರತ್ ಮೊಹಮ್ಮದರಿಗೂ ಸಹ ಕಬೀರ್ ಪರಮೇಶ್ವರರು ಸಿಕ್ಕರು. ಅವರಿಗೂ ಸಹ ತನ್ನ ಹೆಸರು ಕಬೀರ್ ಅಲ್ಲಾಹ್ ಎಂದು ಹೇಳಿದ್ದರು. ಇದೇ ಹೆಸರನ್ನು 'ಅಲ್ಲಾಹ್' ಅಕಬೀರ್, ಅಲ್ಲಾಹ್ ಅಕ್ಬರ್, ಅಲ್ಲಾಹ ಕಬೀರ್ ಮುಂತಾದ ಹೆಸರುಗಳಿಂದ ಉಚ್ಚರಿಸುತ್ತಾರೆ.} ಕವಿರ್ದೇವ ಅಂದರೆ ಹೇ ಕಬೀರ್ ಪರಮೇಶ್ವರ, ನೀನು ಶುದ್ಧ ಸ್ವರೂಪನು, ಪಾಪನಾಶಕನು, ನಮ್ಮ ಪಾಪಗಳನ್ನು ದೂರ ಮಾಡು. ಯಾರು ತಮ್ಮ ಪಾಪಗಳಿಂದ ಕಷ್ಟವನ್ನು ಅನುಭವಿಸುತ್ತಾರೋ ಅವರನ್ನು ಮುಕ್ತಗೊಳಿಸು. ಈ ಶಕ್ತಿ ಕೇವಲ ನಿನ್ನಲ್ಲಿ ಮಾತ್ರ ಇದೆ. ನೀನು ಯಾವ ಲೀಲೆಯನ್ನು ಮಾಡುವೆಯೋ ಆ ಲೀಲೆಯಿಂದ ಸಶರೀರವಾಗಿ ಪ್ರತ್ಯಕ್ಷವಾಗಿ ನಮಗೆ ಬುದ್ಧಿಯನ್ನು ನೀಡು.

**ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 17ನೆಯ ಮಂತ್ರ :–**

ಶಿಶುಮ್ ಜಜ್ಞಾನಮ್ ಹೃರ್ಯತಮ್ ಮೃಜಂತಿ ಶುಭ್ಭಂತಿ ವಹಿನ್ ಮರುತಃ ಗರ್ಣೇನ್।
ಕವಿರ್‌ಗೀರ್ಭಿ ಕಾವ್ಯೇನಾ ಕವಿಃ ಸಂತ್ ಸೋಮಃ ಪವಿತ್ರಮ್ ಅತ್ಯೇತಿ ರೇಭನ್॥ (17)

ಅಂದರೆ ಪರಮೇಶ್ವರ ಕಬೀರರು ತನ್ನ ಪ್ರಿಯ ಭಕ್ತನಾದ ಧರ್ಮದಾಸನಿಗೆ ಮತ್ತು ದೃಢಭಕ್ತನಾದ ಗರೀಬದಾಸನಿಗೆ ನಾನು 4 ಯುಗಗಳಲ್ಲಿ (ಸತ್ಯಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ) ಸಶರೀರವಾಗಿ ಪ್ರತ್ಯಕ್ಷವಾಗುವೆನು ಹಾಗೂ ಪ್ರಪಂಚದಲ್ಲಿ ಪ್ರತ್ಯಕ್ಷವಾಗಲು 2 ರೀತಿಯಲ್ಲಿ ಲೀಲೆಗಳನ್ನು ಮಾಡುತ್ತೇನೆ ಎಂದು ಹೇಳಿದ್ದರು.

ಮೊದಲನೇ ಲೀಲೆ :– ಪ್ರತಿಯೊಂದು ಯುಗದಲ್ಲಿ ನವಜಾತ ಮಗುವಿನ ರೂಪದಲ್ಲಿ ತಾವರೆಯ ಹೂವಿನ ಮೇಲೆ ವಿರಾಜಮಾನನಾಗಿರುತ್ತೇನೆ. ಅಲ್ಲಿಂದ ಸಂತಾನವಿಲ್ಲದ ದಂಪತಿಯು ನನ್ನ ಗುಪ್ತ ಪ್ರೇರಣೆಯಿಂದ ನನ್ನನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ದೊಡ್ಡವನಾಗುವ ಲೀಲೆಗಳನ್ನು ಮಾಡುತ್ತಾ ನಾನು ಸತ್ಯಜ್ಞಾನವನ್ನು ನನ್ನ ಮುಖಕಮಲದಿಂದ ಹಾಡುತ್ತಾ ಹೇಳುತ್ತೇನೆ. ಅದು ಕಬೀರವಾಣಿಯ ಮೂಲಕ ಕಾವ್ಯದ ರೂಪದಲ್ಲಿ ಅಂದರೆ ದೋಹ, ಚೌಪಾಯಿ, ಸಬದ್ ಅಂದರೆ ಕವಿತೆಗಳ ರೂಪದಲ್ಲಿ ಹೇಳಲಾಗುತ್ತದೆ. ಕವಿತೆಗಳ ರೂಪದಲ್ಲಿ ಹೇಳಿರುವ ಕಾರಣ ನಾನು ಕವಿ ಎಂಬ ಬಿರುದನ್ನು ಪಡೆಯುತ್ತೇನೆ. ಆದರೆ ನಾನೇ ಪೂರ್ಣ ಪರಮಾತ್ಮನು.

ಕಬೀರರವಾಣಿ :–

ಹಮ್ ಹೀ ಅಲಖ್ ಅಲ್ಲಾಹ್ ಹ್ಯೆಂ, ಮೂಲ್ ರೂಪ್ ಕರ್‌ತಾರ್।
ಅನಂತ್ ಕೋಟಿ ಬ್ರಹ್ಮಾಂಡ್ ಮೆ ಮ್ಯೆಂ ಹೀ ಸಿರಜನ್‌ಹಾರ್।

ಅಂದರೆ ಕಬೀರರು 600 ವರ್ಷಗಳ ಹಿಂದೆ ಹೇಳಿರುವ ಕಬೀರವಾಣಿಯಲ್ಲಿ ಹೀಗಿದೆ. 'ನಾನು ಅಲಖ್ ಅಲ್ಲಾಹನು, ನನ್ನನ್ನು ಯಾರೂ ಅರಿತಿಲ್ಲ. ನಾನು ಪ್ರಪಂಚವೆಂಬ ವೃಕ್ಷದ ಬೇರು. ಅಂದರೆ ಎಲ್ಲರನ್ನು ಪಾಲಿಸುವವನು, ಪೋಷಿಸುವವನು, ಎಲ್ಲಾ ಬ್ರಹ್ಮಾಂಡಗಳನ್ನು ನಾನೇ ಸೃಷ್ಟಿಸಿದವನು.

ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 18ನೇ ಮಂತ್ರದಲ್ಲಿ ಸ್ಪಷ್ಟಪಡಿಸಲಾಗಿರುವುದೇನೆಂದರೆ:–

2) 2ನೇ ಲೀಲೆ:– ನಾನು (ಕಬೀರ್) ಯಾವಾಗಲಾದರೂ, ಯಾವುದೇ ಸಮಯದಲ್ಲಾದರೂ ಸಾಧುವಿನ ವೇಷದಲ್ಲಿ ಪ್ರತ್ಯಕ್ಷನಾಗಿ ಒಳ್ಳೆಯ ಆತ್ಮಗಳನ್ನು ಭೇಟಿಯಾಗುತ್ತೇನೆ. ಅವುಗಳಿಗೆ ಸತ್ಯವಾದ ಅಧ್ಯಾತ್ಮಿಕ ಜ್ಞಾನವನ್ನು ತಿಳಿಸುತ್ತೇನೆ. {ಕಲಿಯುಗದಲ್ಲಿ ಪರಮಾತ್ಮನು ಯಾರ್ಯಾರಿಗೆ ಸಿಕ್ಕಿದ್ದಾನೋ ಅವರ ಹೆಸರನ್ನು ಈ ಮೊದಲೇ ಇಲ್ಲಿ ತಿಳಿಸಲಾಗಿದೆ. ಮಗುವಿನ ರೂಪದಲ್ಲಿ ಪ್ರತ್ಯಕ್ಷವಾಗುವ ಸಂದೇಶವನ್ನು ಪ್ರಕಟಗೊಳಿಸಲಾಗಿದೆ}. ಕಬೀರರು ಹೇಳಿರುವುದೇನೆಂದರೆ, ನಾನು ನಾಲ್ಕು ಯುಗಗಳಲ್ಲಿ ಶಿಶುವಿನ ರೂಪದಲ್ಲಿ ಲೀಲೆಗಳನ್ನು ಮಾಡುತ್ತೇನೆ.

ಸತ್‌ಯುಗ್ ಮೆಂ ಸತ್‌ಸುಕೃತ್ ಕಹ್ ಟೇರಾ, ತ್ರೇತಾ ನಾಮ್ ಮುನಿಂದರ್ ಮೇರಾ।
ದ್ವಾಪರ್ ಮೆಂ ಕರುಣಾಮಯ್ ಕಹಾಯಾ, ಕಲಯುಗ್ ನಾಮ್ ಕಬೀರ್ ಧರಾಯಾ॥

ಅಂದರೆ 'ಸತ್ಯಯುಗದಲ್ಲಿ ನನ್ನ ಹೆಸರು 'ಸತ್ ಸುಕೃತ್' ಎಂದಿತ್ತು. ತ್ರೇತಾಯುಗದಲ್ಲಿ 'ಮುನಿಂದ್ರ' ಎಂಬ ಹೆಸರಿತ್ತು, ದ್ವಾಪರದಲ್ಲಿ 'ಕರುಣಾಮಯ್' ಎಂಬ ಹೆಸರಿತ್ತು ಹಾಗೂ ಕಲಿಯುಗದಲ್ಲಿ ನನ್ನ ಹೆಸರು 'ಕಬೀರ' ಎಂದಾಗಿದೆ' ಎಂದು ಕಬೀರರು ಹೇಳಿದ್ದಾರೆ.

ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 17ನೆಯ ಮಂತ್ರದಲ್ಲಿ ಹೀಗೆ ಹೇಳಲಾಗಿದೆ:–

ಸರಳಾರ್ಥ :– (ಶಿಶುಮ್ ಜಜ್ಞಾನಮ್ ಹ್ಯರ್ಯಂತಮ್) ಪರಮೇಶ್ವರನು ಚೆನ್ನಾಗಿ ತಿಳಿದುಕೊಂಡೇ ಅಂದರೆ ತನ್ನ ಯೋಜನೆಯಂತೆಯೇ ಕಾರ್ಯಕ್ರಮದ ಪ್ರಕಾರ ತತ್ವಜ್ಞಾನವನ್ನು ತಿಳಿಸುವ ಉದ್ದೇಶದಿಂದ ಶಿಶುವಿನ ರೂಪದಲ್ಲಿ ಪ್ರತ್ಯಕ್ಷನಾಗುತ್ತಾನೆ. ಆ ಬಾಲಕನು ಅತ್ಯಂತ ತೇಜೋಮಯನಾಗಿರುತ್ತಾನೆ. ದೊಡ್ಡವನಾದ ಮೇಲೆ ತತ್ವಜ್ಞಾನವನ್ನು ತಿಳಿಸುತ್ತಾನೆ. ಅವನ ಜ್ಞಾನವನ್ನು ಕೇಳಿ (ಮರುತೋ ಗಣೇನ) ಭಕ್ತರ ಸಮೂಹವು ಆ ಪರಮಾತ್ಮನ ಅನುಯಾಯಿಯಾಗಿ ಬಿಡುತ್ತದೆ. ಆ ಭಕ್ತಗಣಗಳ ಮೂಲಕ ಪರಮಾತ್ಮನ ಮಹಿಮೆಯನ್ನು ತಿಳಿಸಿಕೊಡಲಾಗುತ್ತದೆ. (ಮೃಜಂತಿ ಶುಭ್ಯಂತಿ) ಪರಮಾತ್ಮನ ಮೂಲಕ ತಿಳಿಸಿರುವ ತತ್ವಜ್ಞಾನವನ್ನು ಬುದ್ಧಿವಂತರಾದ ಯಾವ ಮನುಷ್ಯರು ಅರ್ಥ ಮಾಡಿಕೊಳ್ಳುತ್ತಾರೆಯೋ ಅವರಿಗೆ ಅದು ಅತ್ಯಂತ ಶುಭದಾಯಕವಾಗಿರುತ್ತದೆ. ಈ ಸಾಧನೆಯು (ವಹಿನ್) ಬಹಳ ಬೇಗ ಲಾಭವನ್ನು ತರುವಂತಹದ್ದು, (ಕವಿಃ ಸೋಮ್) ಅಮರನಾದ ಕವಿರ್ದೇವ ಪರಮಾತ್ಮನು ತತ್ವಜ್ಞಾನವನ್ನು (ಕಾವ್ಯೆನಾ) ತನ್ನ ಕವಿತ್ವದಿಂದ ಅಂದರೆ ಶಬ್ದದಿಂದ ದ್ವಿಪದಿಗಳ, ಚತುಷ್ಪದಿಗಳ ರೂಪದಲ್ಲಿ (ಪವಿತ್ರಂ) (ಕಬೀರ್‌ಗೀರ್ಭಿ) ಪವಿತ್ರವಾದ ಕವಿವಾಣಿಯ ಮೂಲಕ (ಅತ್ಯೆತಿ ರೇಭನ್ ಸನ್) ಅತ್ಯಂತ ದೊಡ್ಡದಾದ ಧ್ವನಿಯಲ್ಲಿ ಕೂಗಿ ಕೂಗಿ ಹೇಳುವುದರ

ಮೂಲಕ ತಿಳಿಸುತ್ತಾ ಲೀಲೆಗಳನ್ನು ಮಾಡುತ್ತಾನೆ. ಎಲ್ಲೆಲ್ಲೋ ಮಾರುಕಟ್ಟೆಗಳಲ್ಲಿ ಅಥವಾ ನಾಲ್ಕು ದಾರಿ ಕೂಡುವಲ್ಲಿ ನಿಂತು ಹಾಡಲು ಪ್ರಾರಂಭಿಸುತ್ತಾನೆ. ಮುಂದೆ 18ನೆಯ ಮಂತ್ರದಲ್ಲಿ ಪರಮಾತ್ಮನು ಪ್ರಸಿದ್ಧ ಕವಿ ಎನ್ನುವ ಬಿರುದನ್ನು ಪಡೆಯುತ್ತಾನೆ ಎಂದು ಹೇಳಲಾಗಿದೆ.

**ಋಗ್ವೇದದ 9ನೇ ಮಂಡಲದ 96ನೇ ಸೂಕ್ತಿಯ 18ನೇ ಮಂತ್ರ:–**

ಋಷಿಮನಾ ಯ ಋಷಿಕೃತ್ ಸ್ವರ್ಷಾಃ ಸಹಸ್ರಣೀಥಃ ಪದವೀಃ ಕವಿನಾಮ್।
ತೃತೀಯಮ್ ಧಾಮ್ ಮಹಿಷಃ ಸಿಷಾನ್ ಸೋಮಃ ವಿರಾಜಮ್ ಅನುರಾಜತಿ ಸ್ತುಪ್ (18)

ಅಂದರೆ (ಯ) ಯಾರು ಸಂತ ಅಥವಾ ಋಷಿಯ ರೂಪದಲ್ಲಿ ಪ್ರತ್ಯಕ್ಷನಾಗಿ (ವೃಷಿಕೃತ್) ಅವರ ಮೂಲಕ ರಚಿಸಲ್ಪಟ್ಟ (ಸಹಸ್ರಣೀಥಃ) ವಾಣಿಯು ಸಾವಿರಾರು ಸಂಖ್ಯೆಯಲ್ಲಿ (ವೃಷಿಮನಾ) ಸಾಧು ಸ್ವಭಾವದ ಭಕ್ತರಿಗಾಗಿ (ಸ್ವರ್ಷಾಃ) ಸ್ವರ್ಗದಂತೆ ಸುಖವನ್ನು ನೀಡುತ್ತದೆಯೋ, ಆ ಕಾರಣಕ್ಕಾಗಿ ಆ ಪರಮಾತ್ಮನು (ಕವಿನಾಮ್ ಪದವಿಃ) ಪ್ರಸಿದ್ಧ ಕವಿಗಳಲ್ಲಿ ಪ್ರಸಿದ್ಧ ಕವಿ ಎಂಬ ಬಿರುದನ್ನು ಪಡೆಯುತ್ತಾನೆ. ಅಂದರೆ ತತ್ವಜ್ಞಾನವನ್ನು ದ್ವಿಪದಿ, ಚತುಷ್ಪದಿ, ಶಬ್ದಗಳ ರೂಪದಲ್ಲಿ ವಾಣಿಯನ್ನು ತಿಳಿಸುವ ಕಾರಣಕ್ಕೆ ಪೂರ್ಣ ಪರಮಾತ್ಮನನ್ನು ಕವಿ ಎಂದು ಕರೆಯುತ್ತಾರೆ. ಆದರೆ ಅವನು (ಸೋಮ್ ಸನ್) ಅಮರ ಪರಮಾತ್ಮನಾಗಿದ್ದಾನೆ. ಪರಮಾತ್ಮ (ಮಹಿಷಃ) ಈ ದೊಡ್ಡ ಭೂಮಿಯ ಮೇಲೆ ಅಂದರೆ ಸತ್ಯಲೋಕದಲ್ಲಿ (ತೃತೀಯಮ್ ಧಾಮ್) ಮೂರನೇ ಧಾಮ ಅಂದರೆ ಸ್ಥಾನದಲ್ಲಿ (ಶಿಷಾಸನ್) ಎಲ್ಲರನ್ನು ಪಾಲಿಸುವ ಇಚ್ಛೆಯಿಂದ (ಅನುರಾಜತಿ) ತೇಜೋಮಯ ಶರೀರದಿಂದ (ಸ್ತುಪ್) ಗುಮ್ಮಟವುಳ್ಳ ಅರಮನೆಯಲ್ಲಿ (ವಿರಾಜಂ) ವಿರಾಜಮಾನನಾಗಿದ್ದಾನೆ. ಅಲ್ಲಿ ಅವನು ರಾಜನಂತೆ ಕುಳಿತಿದ್ದಾನೆ. ಋಗ್ವೇದದ 9ನೇ ಮಂಡಲದ 54ನೇ ಸೂಕ್ತಿಯ 3ನೇ ಮಂತ್ರದಲ್ಲಿ ಪರಮಾತ್ಮನು (ವಿಶ್ವಾನಿ ಭೂವನೋಪರಿ ತಿಷ್ಠಂತಿ) ಎಲ್ಲಾ ಬ್ರಹ್ಮಾಂಡಗಳ ಮೇಲಿನ ಭಾಗದಲ್ಲಿ ಕುಳಿತಿದ್ದಾನೆ ಎನ್ನುವ ಆಧಾರವಿದೆ.

**ಋಗ್ವೇದದ 9ನೇ ಮಂಡಲದ 95ನೇ ಸೂಕ್ತಿಯ 2ನೇ ಮಂತ್ರ :–**

ಹರಿಃ ಸೃಜಾನಃ ಪಥ್ಯಾಮ್ ಋತಸ್ಯ ಇಯರ್ತಿ ವಾಚಮ್ ಅರಿತೇವ್ ನಾವಮ್।
ದೇವಃ ದೇವಾನಾಮ್ ಗುಹ್ಯಾನಿ ನಾಮ್ ಅವಿಷ್ಕೃಣೋತಿ ಬರ್ಹಿಷ್ ಪ್ರವಾಚೆ॥

ಅಂದರೆ (ಹರಿಃ ಸೃಜಾನಃ) ಆ ಪೂರ್ವೋಕ್ತ ಪರಮೇಶ್ವರರು ತನ್ನ ಅನ್ಯ ರೀತಿಯ ಸರಳ ಶರೀರವನ್ನು ಸೃಷ್ಟಿ ಮಾಡಿಕೊಂಡು ಭೂಮಿಯ ಮೇಲೆ ಪ್ರತ್ಯಕ್ಷವಾಗುತ್ತಾ (ಋತಸ್ಯ ಪಥ್ಯಾಮ್ ವಾಚಮ್) ವಾಣಿಯ ಮೂಲಕ ಭಕ್ತಿಯ ಸತ್ಯಮಾರ್ಗವನ್ನು ಹೇಳುತ್ತಾನೆ. ಮತ್ತು ಭಕ್ತರಿಗೆ (ಇಯರ್ತಿ) ಸತ್ಯಸಾಧನೆಯನ್ನು ಮಾಡಲು ಪ್ರೇರಣೆ ನೀಡುತ್ತಾನೆ. ಪರಮಾತ್ಮನ ಮೂಲಕ ಹೇಳಲ್ಪಟ್ಟಿರುವ ಸತ್ಯಸಾಧನೆಯು ಸಾಧಕನನ್ನು ಹೇಗೆ ಹಡಗಿನಿಂದ ಸಮುದ್ರವನ್ನು ದಾಟುತ್ತದೆಯೋ ಹಾಗೆ ಸಾಧಕನನ್ನು ಭವಸಾಗರದಿಂದ ದಾಟಿಸುತ್ತದೆ (ಅರಿತೇವ ನಾವಮ್) (ದೇವಾನಾಮ್ ದೇವಃ) ಎಲ್ಲಾ ದೇವರ ದೇವ ಅಂದರೆ ಸರ್ವಪ್ರಭುಗಳ ಪ್ರಭು ಅಂದರೆ ಪರಮೇಶ್ವರನು. ವಾಣಿ ಎಂಬ ಯಜ್ಞಕ್ಕಾಗಿ (ಬರ್ಹಿಷಿ ಪ್ರವಾಚೆ), ಅಂದರೆ ತತ್ವಜ್ಞಾನದ ಮೂಲಕ (ಗುಹ್ಯಾನಿ) ರಹಸ್ಯಮಯವಾದ (ನಾಮ್) ಭಕ್ತಿಯ ಹೆಸರುಗಳಾದ ಅಂದರೆ ಮಂತ್ರಗಳ ಆವಿಷ್ಕಾರವನ್ನು (ಅವಿಷ್ಕೃಣೋತಿ) ಮಾಡುತ್ತಾನೆ. ಅಂದರೆ ಯಾವ ನಿಜವಾದ ಭಕ್ತಿಮಂತ್ರವು ಪ್ರಚಲಿತವಾದ ಗ್ರಂಥಗಳಲ್ಲಿ ಸಿಗುವುದಿಲ್ಲವೋ ಅವುಗಳನ್ನು ಪ್ರಕಟಪಡಿಸುತ್ತಾನೆ.

**ಕಬೀರ್ ಪರಮೇಶ್ವರರು ತನ್ನ ಅಮೃತವಾಣಿಯಲ್ಲಿ (ತತ್ವಜ್ಞಾನದಲ್ಲಿ) ಹೀಗೆ ಹೇಳಿದ್ದಾರೆ–**

ಸೋಹಮ್ ಶಬ್ದ್ ಹಮ್ ಜಗ್ ಮೆಂ ಲಾಯೆ। ಸಾರ್ ಶಬ್ದ್ ಹಮ್ ಗುಪ್ತ್ ಛುಪಾಯೆ॥
ಸೋಹಮ್ ಊಪರ್ ಔರ್ ಹೈ ಸತ್‌ಸುಕೃತ್ ಏಕ್ ನಾಮ್।
ಸಬ್ ಹಂಸೋಂ ಕಾ ಜಹಾಂ ಬಾಸ್ ಹೈ ಬಸ್ತೀ ಹೈ ಬಿನ್ ಧಾಮ್॥

ಅಂದರೆ ಕಬೀರ್ ಪರಮೇಶ್ವರರು ಹೇಳಿರುವುದೇನೆಂದರೆ ನಾನು "ಸೋಹಂ" ಎಂಬ ಹೆಸರಿನ ಆವಿಷ್ಕಾರ ಮಾಡಿದ್ದೇನೆ. ಅಂದರೆ ಈ ಪ್ರಪಂಚಕ್ಕಾಗಿ ಪ್ರಕಟಪಡಿಸಿದ್ದೇನೆ. ಈ ಸೋಹಂಗಿಂತ ಇನ್ನೂ ಶ್ರೇಷ್ಠವಾದ ಹೆಸರಿದೆ. ಅದನ್ನು ನಾನು ಮುಚ್ಚಿಟ್ಟಿದ್ದೇನೆ. ಇದನ್ನು ಆ ಸಮಯದವರೆಗೆ ಅಂದರೆ ಕಲಿಯುಗದ ಐದು ಸಾವಿರದ ಐದು ನೂರು ಐದು ವರ್ಷ ಕಳೆಯುವವರೆಗೆ (1997ನೇ ಇಸವಿಯವರೆಗೆ ಕಲಿಯುಗದಲ್ಲಿ 5505 ವರ್ಷಗಳು ಪೂರ್ಣವಾಗಿದೆ, ಅಂದರೆ ಇಲ್ಲಿಯವರೆಗೆ) ರಹಸ್ಯವಾಗಿ ಇಡಬೇಕಾಗಿತ್ತು. ಕಬೀರ ಸಾಗರ್ ಎಂಬ ಗ್ರಂಥದಲ್ಲಿ ಪರಮಾತ್ಮನು ಹೇಳಿರುವುದೇನೆಂದರೆ–

ಧರ್ಮ್‌ದಾಸ್ ಮೇರೀ ಲಾಖ್ ದುಹಾಯೀ ಸಾರ್‌ಶಬ್ದ್ ಬಾಹರ್ ನಾ ಜಾಯೀ।

ಸಾರ್‌ಶಬ್ದ್ ಬಾಹರ್ ಜೋ ಪರಹೀ। ಬಿಚಲೀ ಪೀಢೀ ಹಂಸ್ ನಹೀಂ ತಿರಹೀ॥
ಸಾರ್‌ಶಬ್ದ್ ತಬ್ ತಕ್ ಛುಪಾಯೀ। ಜಬ್ ಪಾಂಚ್ ಹಜಾರ್ ಪಾಂಚ್ ಸೌ
ಪಾಂಚ್ ಕಲ್‌ಯುಗ್ ನ ಬೀತ್ ಜಾಯೀ॥

ಅಂದರೆ ಕಬೀರರು ಈ 2 ಹೆಸರುಗಳನ್ನು (ಸೋಹಂ ಮತ್ತು ಸಾರಶಬ್ದ್) ಸಂತರಾದ ಧರ್ಮದಾಸರಿಗೆ ತಿಳಿಸಿದ್ದರು. ಆದರೆ ಉಳಿದವರಿಗೆ ತಿಳಿಸುವುದನ್ನು ನಿಷೇಧಿಸಿದ್ದರು. ಕಲಿಯುಗದ ಈ ಮೇಲೆ ತಿಳಿಸಿದ ಸಮಯದವರೆಗೆ ಸಾರ್ ಶಬ್ದವನ್ನು ರಹಸ್ಯವಾಗಿಡಲು ಹೇಳಿದ್ದರು. ಹಾಗೆ ಮಾಡದೆ ಇದ್ದಿದ್ದರೆ ಇಂದಿನ ಪೀಳಿಗೆ ಅಂದರೆ 1997ರ ಸಮಯದಿಂದ ಯಾರು ಸತ್ಯ, ಭಕ್ತಿಮಾರ್ಗ ಮೇಲೆ ನಡೆಯಬೇಕೋ ಆ ಜೀವಿಗಳು ಭವಸಾಗರವನ್ನು ದಾಟುವುದಿಲ್ಲ. ಆ ಸಮಯ ಅಂದರೆ ಕಲಿಯುಗದ 5505 ವರ್ಷ ಪೂರ್ಣವಾದ ನಂತರ ಒಬ್ಬ ಮಹಾಪುರುಷರು ಈ ಸಾರಶಬ್ದವನ್ನು ನನ್ನ ಆದೇಶದ ಮೇರೆಗೆ ವಿವರಿಸುತ್ತಾರೆ. ಇಡೀ ಪ್ರಪಂಚವು ಆ ಮಹಾಪುರುಷನಿಂದ ದೀಕ್ಷೆ ಪಡೆದುಕೊಳ್ಳುತ್ತದೆ. ಆ ಸಮಯದಲ್ಲಿ ಕಲಿಯುಗದಲ್ಲಿ ಸತ್ಯಯುಗದ ಪ್ರಾರಂಭವಾಗುತ್ತದೆ. ಎಲ್ಲಾ ಸ್ತ್ರೀ ಪುರುಷರು, ಶುದ್ಧ ಆತ್ಮವಿರುವವರು, ಪರಮಾತ್ಮನಿಗೆ ಹೆದರುವವರೆಲ್ಲಾ ಪಾಪವನ್ನು ತ್ಯಜಿಸಿ ಪುಣ್ಯ ಮತ್ತು ಪರಮಾರ್ಥವನ್ನು ಮಾಡುವವರಾಗುತ್ತಾರೆ. ಆಗ ಎಲ್ಲಾ ಧರ್ಮ ಮತ್ತು ಜಾತಿ ಒಂದಾಗಿ ಒಂದು ಮಾನವ ಧರ್ಮ ಮತ್ತು ಏಕೈಕ ಜೀವ ಜಾತಿ ಇರುತ್ತದೆ.

ಇದರ ಆಧಾರವು ಪವಿತ್ರವಾದ ಕಬೀರ್‌ಸಾಗರ್ ಗ್ರಂಥದ ಸೂಕ್ಷ್ಮವೇದ್ ಬೋಧ್‌ದ 121 ಹಾಗೂ 178ನೇ ಪುಟದಲ್ಲಿದೆ. ಋಗ್ವೇದದ 9ನೇ ಮಂಡಲದ 94ನೇ ಸೂಕ್ತಿಯ 1ನೇ ಮಂತ್ರ:– ಈ ಮಂತ್ರದಲ್ಲಿ ಪರಮಾತ್ಮನು ತತ್ವಜ್ಞಾನದಿಂದ ಕವಿಗಳ ರೀತಿ ಆಚರಣೆ ಮಾಡುತ್ತಾ (ಕೃಣಾನಃ ಪವತೆ ಕವಿಯನ್ ನ ತಜಮ್) ಎಲ್ಲಾ ಕಡೆ ವಿಹರಿಸುತ್ತಾ ಸರ್ವಾತ್ಮಗಳನ್ನು ಪವಿತ್ರಗೊಳಿಸುತ್ತಾನೆ ಎಂದು ಹೇಳಲಾಗಿದೆ.

ಋಗ್ವೇದದ 9ನೇ ಮಂಡಲದ 20ನೇ ಸೂಕ್ತಿಯ 1ನೇ ಮಂತ್ರ :–

ಪ್ರ ಕವಿರ್ದೇವ್ ವಿತಯೇ ಅವ್ಯಃ ವಾರೇಭಿ ಅರ್ಷತಿ ಸಾಹ್ವಾನ್ ವಿಶ್ವಾಃ ಅಭಿ ಸ್ಪೃಧಃ

ಅಂದರೆ (ಪ್ರ) ವೇದಜ್ಞಾನವನ್ನು ತಿಳಿಸುವ ಕಾಲಬ್ರಹ್ಮನಿಗಿಂತ ಮತ್ತೊಬ್ಬ (ಕವಿರ್ದೇವ) ಕವಿರ್ದೇವ ಅಂದರೆ ಕಬೀರ್ ಪರಮೇಶ್ವರನು (ವಾರೇಭಿಃ) ಶ್ರೇಷ್ಠ ಆತ್ಮಗಳಿಗೆ (ವೀತಯೆ) ಭಕ್ತಿಯೆಂಬ ಧನಪ್ರಾಪ್ತಿಗಾಗಿ (ಅರ್ಷತಿ) ಜ್ಞಾನವನ್ನು ನೀಡುತ್ತಾನೆ. ಅವನು (ಅವ್ಯಃ) ಅವಿನಾಶಿ ಹಾಗೂ ಎಲ್ಲರ ರಕ್ಷಕನು. (ಸಾಹ್ವಾನ್) ಸಹನಾಶೀಲನು, (ವಿಶ್ವಾ) ಎಲ್ಲ ತತ್ವಜ್ಞಾನಹೀನರನ್ನು (ಸ್ಪೃಧಃ) ಅಧ್ಯಾತ್ಮ ಜ್ಞಾನಗೋಷ್ಠಿಯ ಸ್ಪರ್ಧೆ ಎನ್ನುವ ವಾಕ್ ಯುದ್ಧದಲ್ಲಿ (ಅಭಿ) ತಿರಸ್ಕರಿಸುತ್ತಾನೆ ಅಂದರೆ ಅಜ್ಞಾನಿಗಳನ್ನು ಸೋಲಿಸುತ್ತಾನೆ.

ಭಾವಾರ್ಥ :– ಈ ವೇದಮಂತ್ರದಲ್ಲಿಯೂ ಸಹ ಕವಿರ್ದೇವ ಅಂದರೆ ಕಬೀರ್ ಪರಮಾತ್ಮನು ಒಳ್ಳೆಯ ಆತ್ಮಗಳಿಗೆ ಜ್ಞಾನವನ್ನು ನೀಡುತ್ತಾನೆ ಎನ್ನುವ ಆಧಾರವಿದೆ ಹಾಗೂ ಅಜ್ಞಾನಿಗಳನ್ನು ತಿರಸ್ಕರಿಸುತ್ತಾನೆ, ಅವನು ಕಾಲಪುರುಷನಿಗಿಂತ ಭಿನ್ನನು ಎನ್ನುವ ಆಧಾರವಿದೆ. ಅಜ್ಞಾನಿಗಳನ್ನು ತಿರಸ್ಕರಿಸುತ್ತಾನೆ ಎನ್ನುವ ಆಧಾರಕ್ಕಾಗಿ ಈ ಕತೆ:–

## "ಮಹರ್ಷಿ ಸರ್ವಾನಂದ ಮತ್ತು ಪರಮೇಶ್ವರ ಕಬೀರ್ (ಕವಿರ್ದೇವ) ಇವರ ಶಾಸ್ತ್ರಾರ್ಥ"

ಸರ್ವಾನಂದ ಎಂಬ ಒಬ್ಬ ಮಹರ್ಷಿ ಇದ್ದನು. ಅವನ ತಾಯಿಯಾದ ಶ್ರೀಮತಿ ಶಾರದಾದೇವಿಯು ತನ್ನ ಪ್ರಾರಬ್ಧ ಪಾಪಕರ್ಮಗಳಿಂದ ತೊಳಲಾಡುತ್ತಿದ್ದಳು. ಅವಳು ಎಷ್ಟೋ ವರ್ಷಗಳವರೆಗೆ ಎಲ್ಲಾ ರೀತಿಯ ಪೂಜೆ ಪುನಸ್ಕಾರಗಳನ್ನು, ಮಂತ್ರತಂತ್ರಗಳನ್ನು ಮಾಡಿದಳು. ತನ್ನ ಶಾರೀರಿಕ ಕಾಯಿಲೆಯ ಪರಿಹಾರಕ್ಕಾಗಿ ವೈದ್ಯರಿಂದ ಸಾಕಷ್ಟು ಔಷಧಿ ತೆಗೆದುಕೊಂಡಿದ್ದಳು. ಆದರೆ ಯಾವುದೇ ಪರಿಹಾರ ಕಾಣಲಿಲ್ಲ. ಆ ಸಮಯದ ಮಹರ್ಷಿಗಳಿಂದ ಉಪದೇಶವನ್ನು ಪಡೆದಿದ್ದಳು. ಆದರೆ ಎಲ್ಲಾ ಮಹರ್ಷಿಗಳು ಮಗಳೇ ಶಾರದ, ಇದು ನಿನ್ನ ಪಾಪಕರ್ಮದ, ಪ್ರಾರಬ್ಧಕರ್ಮದ ಶಿಕ್ಷೆ. ಇದನ್ನು ಯಾರೂ ಪರಿಹರಿಸಲು ಸಾಧ್ಯವಿಲ್ಲ. ಇದನ್ನು ನೀನು ಅನುಭವಿಸಲೇಬೇಕು ಎಂದು ಹೇಳಿದರು. ನೋಡು, ಪರಮಾತ್ಮನಾದ ಶ್ರೀರಾಮನು ವಾಲಿಯನ್ನು ವಧಿಸಿದನು. ಆ ಪಾಪಕರ್ಮದ ಶಿಕ್ಷೆಯನ್ನೇ ಶ್ರೀರಾಮನ ಆತ್ಮವು ಕೃಷ್ಣನಾಗಿ ಹುಟ್ಟಿ ಅನುಭವಿಸುವಂತಾಯಿತು. ಆಗ ವಾಲಿಯ ಆತ್ಮವು ಬೇಟೆಗಾರನ ರೂಪದಲ್ಲಿ ಜನ್ಮತಾಳಿತ್ತು. ಅವನು ಶ್ರೀಕೃಷ್ಣನ ಕಾಲಿಗೆ ವಿಷಪೂರಿತ ಬಾಣವನ್ನು ಬಿಟ್ಟು ಹತ್ಯೆ ಮಾಡಿದನು ಎಂದು ಆ ಮಹರ್ಷಿಗಳು ಶಾರದೆಗೆ ಉದಾಹರಣೆ ನೀಡಿದರು. ಹೀಗೆ ಗುರುಗಳ ಹಾಗೂ ಸಾಧುಸಂತರ ವಿಚಾರವನ್ನು ಕೇಳಿ ಭಕ್ತೆಯಾದ ಶಾರದೆಯು ದುಃಖ ತುಂಬಿದ ಮನಸ್ಸಿನಿಂದ ತನ್ನ ಪ್ರಾರಬ್ಧ ಪಾಪಕರ್ಮ ಎಂದು ತಿಳಿದು ಅಳುತ್ತಾ ಕಷ್ಟವನ್ನು ಅನುಭವಿಸುತ್ತಿದ್ದಳು. ಒಂದು ದಿನ ಯಾರೋ ಅವಳ ಸಂಬಂಧಿಕರು ಹೇಳಿದಾಗ ಕಾಶಿಯಲ್ಲಿ (ಸ್ವಯಂಭು) ಸ್ವತಃ ಸಶರೀರವಾಗಿ

ಪ್ರತ್ಯಕ್ಷವಾಗಿರುವ (ಕವಿರ್ದೇವ) ಕವಿರ್ ಪರಮೇಶ್ವರ ಅರ್ಥಾತ್ ಕಬೀರ್ ಪ್ರಭುವಿನಿಂದ ಉಪದೇಶ ಪಡೆದಳು. ಅದೇ ದಿನ ಅವಳ ಕಷ್ಟವೆಲ್ಲ ತೀರಿಹೋಯಿತು. ಏಕೆಂದರೆ ಪವಿತ್ರವಾದ ಯಜುರ್ವೇದದ 5ನೇ ಅಧ್ಯಾಯದ 32ನೇ ಮಂತ್ರದಲ್ಲಿ ಹೀಗೆ ಬರೆದಿದೆ–''ಕವಿರಂಘಾರಿರಸಿ'' ಅಂದರೆ (ಕವಿರ್) ಕವಿರ್ದೇವ ಅಂದರೆ ಕಬೀರಪ್ರಭು (ಅಂಘಾರಿ) ಪಾಪದ ಶತ್ರು(ಅಸಿ)ವಾಗಿದ್ದಾನೆ. ಅದೇ ಪವಿತ್ರವಾದ ಯಜುರ್ವೇದದಲ್ಲಿ 8ನೇ ಅಧ್ಯಾಯದ 13ನೇ ಮಂತ್ರದಲ್ಲಿ ಹೀಗೆ ಬರೆದಿದೆ. ಪರಮಾತ್ಮ (ಏನಸಃ ಏನಸಃ) ಅಧರ್ಮದಲ್ಲಿ ಅಧರ್ಮವಾದ, ಪಾಪಗಳಲ್ಲಿ ಪಾಪವಾದ ಘೋರಪಾಪವನ್ನು ಸಹ ತೊಳೆದು ಹಾಕುತ್ತಾನೆ. (ಪ್ರಭು ಕವಿರ್ದೇವನು) ಕಬೀರ ಪರಮೇಶ್ವರರು ಹೀಗೆಂದರು "ಮಗಳೆ ಶಾರದ, ಈ ಸುಖವು ನಿನ್ನ ಅದೃಷ್ಟದಲ್ಲಿರಲಿಲ್ಲ. ಆದರೆ ನಾನು ಅದನ್ನು ನನ್ನ ಭಂಡಾರದಿಂದ ಪ್ರದಾನಿಸಿರುವೆ ಮತ್ತು ಪಾಪವಿನಾಶಕನೆನ್ನುವ ಆಧಾರವನ್ನು ನೀಡಿದ್ದೇನೆ. ನಿನ್ನ ಮಗ ಮಹರ್ಷಿ ಸರ್ವಾನಂದನು 'ಪ್ರಭು, ಪಾಪವನ್ನು ನಾಶ ಮಾಡಲು ಸಾಧ್ಯವಿಲ್ಲ' ಎಂದು ಹೇಳುತ್ತಿರುತ್ತಾನೆ. ಆದರೆ ನೀನು ನನ್ನಿಂದ ಉಪದೇಶವನ್ನು ಪಡೆದು ಆತ್ಮಕಲ್ಯಾಣವನ್ನು ಮಾಡಿಕೋ". ಭಕ್ತೆಯಾದ ಶಾರದಾಳು ಸ್ವತಃ ಬಂದು ಪರಮೇಶ್ವರ ಕಬೀರಪ್ರಭುವಿನಿಂದ ಉಪದೇಶ ಪಡೆದು ತನ್ನ ಉದ್ಧಾರವನ್ನು ಮಾಡಿಕೊಂಡಳು. ಭಕ್ತೆಯಾದ ಶಾರದಾಳ ಪುತ್ರನಾದ ಮಹರ್ಷಿ ಸರ್ವಾನಂದನಿಗೆ ಶಾಸ್ತ್ರಗಳಲ್ಲಿ ಬಹಳ ನಂಬಿಕೆಯಿತ್ತು. ಅವನು ತನ್ನ ಸಮಕಾಲೀನ ಎಲ್ಲಾ ವಿದ್ವಾಂಸರನ್ನು ಶಾಸ್ತ್ರಾರ್ಥದಲ್ಲಿ ಸೋಲಿಸಿದ್ದನು. ಹಾಗಾಗಿ ಅವನು ಹೀಗೆಂದು ಯೋಚಿಸಿದನು–ನಾನು ಎಲ್ಲಾ ವಿದ್ವಾಂಸರ ಮೇಲೆ ವಿಜಯವನ್ನು ಸಾಧಿಸಿದ್ದೇನೆ ಎಂದು ಎಲ್ಲಾ ಜನರಿಗೆ ಹೇಳಬೇಕಾಗುತ್ತದೆ. ಹಾಗಾಗಿ ನಾನು ನನ್ನ ತಾಯಿಯಿಂದ ನನ್ನ ಹೆಸರನ್ನು 'ಸರ್ವಾಜೀತ್' ಎಂದು ಏಕೆ ಇರಿಸಿಕೊಳ್ಳಬಾರದು. ಹಾಗೆಂದು ಯೋಚಿಸಿ ತನ್ನ ತಾಯಿಯಾದ ಶಾರದಾಳ ಬಳಿಗೆ ಬಂದು ಪ್ರಾರ್ಥಿಸಿದನು. "ಅಮ್ಮ, ನನ್ನ ಹೆಸರನ್ನು ಸರ್ವಾಜೀತ್ ಎಂದು ಬದಲಿಸಿ ಇಡು" ಎಂದು ಹೇಳಿದನು. ಆಗ ತಾಯಿಯು ಮಗನೇ 'ಸರ್ವಾನಂದ್' ಎಂಬುದು ಕೆಟ್ಟ ಹೆಸರೇ? ಎಂದು ಕೇಳಿದಳು. ಹಾಗಲ್ಲ ತಾಯಿಯೇ, ನಾನು ಎಲ್ಲಾ ವಿದ್ವಾಂಸರನ್ನು ಶಾಸ್ತ್ರಾರ್ಥದಲ್ಲಿ ಸೋಲಿಸಿದ್ದೇನೆ. ಆದ್ದರಿಂದ ನನ್ನ ಹೆಸರನ್ನು ಸರ್ವಾಜೀತ್ ಎಂದು ಇಡು ಎಂದು ಹಠ ಮಾಡಿದನು. ಆಗ ತಾಯಿಯು ಹೀಗೆ ಹೇಳಿದಳು, 'ಮಗನೇ ಒಬ್ಬ ವಿದ್ವಾಂಸರಿರುವರು. ಅವರು ನನ್ನ ಗುರುಗಳಾದ ಕವಿರ್ದೇವರು. (ಕಬೀರಪ್ರಭು) ಅವರನ್ನು ಸಹ ಸೋಲಿಸಿಬಿಡು. ಆಗ ನಾನು ನನ್ನ ಮಗನ ಹೆಸರನ್ನು ಸರ್ವಾಜೀತ್ ಎಂದು ಇಡುತ್ತೇನೆ'. ತಾಯಿಯ ಈ ಮಾತನ್ನು ಕೇಳಿ ಸರ್ವಾನಂದನು ನಕ್ಕುಬಿಟ್ಟನು. ನಂತರ 'ಅಮ್ಮ ನೀನೆಷ್ಟು ಮುಗ್ಧೆ, ಆ ನೇಕಾರನಾದ ಕಬೀರನು ಅಶಿಕ್ಷಿತನು. ಅವನನ್ನು ಸೋಲಿಸುವುದು ಎಷ್ಟು ಹೊತ್ತು? ಈಗ ಹೋಗಿ ಹಾಗೆ ಬರುವೆ' ಎಂದು ಹೇಳಿದನು.

ಮಹರ್ಷಿ ಸರ್ವಾನಂದನು ಎಲ್ಲಾ ಶಾಸ್ತ್ರಗಳನ್ನು ಒಂದು ಎತ್ತಿನ ಮೇಲೆ ಹೊರೆಸಿಕೊಂಡು ಕಬೀರ್ ಪರಮೇಶ್ವರನ ಗುಡಿಸಲಿನ ಕಡೆಗೆ ಹೊರಟನು. ಕಬೀರ್ ಪರಮೇಶ್ವರರ ಧರ್ಮದ ಮಗಳಾದ ಕಮಾಲಿಯು ಬಾವಿಯ ಬಳಿ ಸಿಕ್ಕಳು. ಅವಳು ನೀರನ್ನು ಸೇದುತ್ತಿದ್ದಳು. ಸರ್ವಾನಂದನಿಗೆ ಇದ್ದಕ್ಕಿದ್ದಂತೆ ಭಯಂಕರವಾದ ಬಾಯಾರಿಕೆಯುಂಟಾಯಿತು. ಅವನು ಅವಳ ಬಳಿ ಹೋಗಿ 'ಹೇ ಹುಡುಗಿ, ನನಗೆ ಬೇಗನೆ ನೀರನ್ನು ಕುಡಿಸು ನನ್ನ ಪ್ರಾಣ ಹೋಗುವ ಹಾಗಿದೆ' ಎಂದನು. ಆಗ ಆ ಹುಡುಗಿಯು ಬಿಂದಿಗೆಯಿಂದ ನೀರನ್ನು ತೆಗೆದು ಸರ್ವಾನಂದನಿಗೆ ಕುಡಿಸಿದಳು. ಆ ಸಮಯದಲ್ಲಿ ನೇಕಾರ ಕಾಲೋನಿಯ ಎಲ್ಲಾ ವ್ಯಕ್ತಿಗಳು ತಮ್ಮ ಮನೆಗಳಿಂದ ಈ ದೃಶ್ಯವನ್ನು ನೋಡುತ್ತಿದ್ದರು. ಇವನೊಬ್ಬ ಬ್ರಾಹ್ಮಣನಿರಬೇಕು. ಎಲ್ಲೋ ತಪ್ಪು ದಾರಿಯಿಂದ ಇಲ್ಲಿಗೆ ಬಂದಿರಬೇಕೆಂದು ಯೋಚಿಸಿದರು. ಬಾಯಾರಿಕೆ ನೀಗಿದ ಮೇಲೆ ಸರ್ವಾನಂದನು ಅತ್ತಿತ್ತ ನೋಡಿದನು. ನೇಕಾರರ ಬಾವಿಯಿಂದ ನೀರು ಕುಡಿದಿದ್ದನ್ನು ಯಾರಾದರೂ ನೋಡಿಬಿಟ್ಟಿದ್ದಾರೇನೋ ಎಂಬ ಭಯವಿತ್ತು. ಹಾಗೆ ನೋಡಿದಾಗ ಇವನು ನೀರು ಕುಡಿದದ್ದನ್ನು ಬಹಳಷ್ಟು ಸ್ತ್ರೀ ಪುರುಷರು ನೋಡಿಬಿಟ್ಟಿದ್ದರು ಹಾಗೂ ನಗುತ್ತಿದ್ದರು. ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಹೀಗೆಂದನು–"ಹೇ ಹುಡುಗಿಯೇ, ಇದು ಯಾವ ಜಾತಿಯವರ ಬಾವಿ?" ಅದಕ್ಕೆ ಕಮಾಲಿ ಎಂದಳು, 'ಹೇ ಬ್ರಾಹ್ಮಣನೇ, ನೇಕಾರರ ಬಡಾವಣೆಯಲ್ಲಿ ನೇಕಾರರ ಬಾವಿ ಇರುತ್ತದೆಯೇ ಹೊರತು ಬ್ರಾಹ್ಮಣರದ್ದಲ್ಲ', ಆಗ ಸರ್ವಾನಂದನು ಗಟ್ಟಿಯಾಗಿ ಕಿರುಚುತ್ತಾ ಹೀಗೆಂದನು, 'ಹೇ ಮೂರ್ಖ ಹುಡುಗಿಯೇ, ಇದು ಶೂದ್ರರ ಬಾವಿಯೆಂದು ಮೊದಲೇ ಏಕೆ ಹೇಳಲಿಲ್ಲ. ನನ್ನ ಧರ್ಮವನ್ನ ಹಾಳು ಮಾಡಿಬಿಟ್ಟೆ', ಆಗ ಕಮಾಲಿ ಹೇಳಿದಳು, 'ಆಗ ನಿಮ್ಮ ಪ್ರಾಣ ಹೋಗುವುದರಲ್ಲಿತ್ತು. ಈಗ ಬಾಯಾರಿಕೆ ನೀಗಿತು. ಈಗ ಜಾತಿಯ ನೆನಪಾಯಿತೆ? ಸರ್ವಾನಂದನು ಮರುಮಾತನಾಡದೆ 'ಹೇ ಹುಡುಗಿ, ಕಬೀರರ ಮನೆ ಎಲ್ಲಿದೆ ಹೇಳು? ಎಂದು ಕೇಳಿದನು.

ಕಬೀರ್ ಕಾ ಘರ್ ಶಿಖರ್ ಮೆಂ, ಜಹಾಂ ಸಲೈಲೀ ಗೈಲ್।
ಪಾಂವ್ ನಾ ಟಿಕೈ ಪಪೀಲ್ (ಇರುವೆ) ಕೆ ಪಂಡಿತ್ ಲಾದೈ ಬೈಲ್॥

ಭಾವಾರ್ಥ :– ಕಮಾಲಿಯು ಹೀಗೆಂದಳು, 'ಕಬೀರರ ನಿಜವಾದ ಮನೆ ಸತ್ಯಲೋಕದಲ್ಲಿದೆ. ಅಲ್ಲಿ ಹೋಗಬೇಕಾದ ದಾರಿ ಸ್ವಲ್ಪ ಜಾರುತ್ತದೆ. ಸತ್ಯಸಾಧನೆಯನ್ನು ಮಾಡಿ ಅವರ ಮನೆಗೆ ಹೋಗಬೇಕಾಗುತ್ತದೆ. ಅಲ್ಲಿಗೆ ಒಂದು ಇರುವೆಯೂ ಹೋಗಲು ಸಾಧ್ಯವಿಲ್ಲ. ಆದರೆ ನೀವು ಎತ್ತಿನ ಮೇಲೆ ಗ್ರಂಥಗಳನ್ನು ಹೇರಿಕೊಂಡು ಓಡಾಡುತ್ತಿದ್ದೀರಿ. ಇದರಲ್ಲಿ ಪರಮೇಶ್ವರನನ್ನು ಪಡೆಯುವ ವಿಧಾನವು ಇಲ್ಲ'.

ಆಗ ಸರ್ವಾನಂದನು ಹೀಗೆಂದನು, 'ಹೇ ಹುಡುಗಿ, ಸರಿಯಾಗಿ ಮಾತನಾಡು. ಅವರು ಈ ಬಡಾವಣೆಯಲ್ಲಿ ಎಲ್ಲಿರುತ್ತಾರೆಂದು ಹೇಳು'. ಆಗ ಕಮಾಲಿಯು, "ಹೇ ಬ್ರಾಹ್ಮಣರೇ, ನೀವು ನನ್ನ ಹಿಂದೆ ಬನ್ನಿ, ನಾನು ಅವರ ಮಗಳು" ಎಂದು ಹೇಳಿದಳು. ಕಮಾಲಿಯು ತನ್ನ ಮನೆಯ ಬಾಗಿಲಿನ ಬಳಿ ಬಂದು "ಹೇ ಮಹರ್ಷಿಗಳೇ, ಪರಮೇಶ್ವರರಾದ ಕಬೀರರ ಮನೆ ಇದೇ" ಎಂದು ಹೇಳಿದಳು. ಸರ್ವಾನಂದನು ಕಮಾಲಿಯಿಂದ ತನ್ನ ಬಟ್ಟಲಿಗೆ ನೀರನ್ನು ತುಂಬಿಸಿಕೊಂಡನು. ಬಟ್ಟಲಿನ ತುಂಬ ನೀರು ತುಂಬಿಕೊಂಡಿತು. ಇನ್ನು ಒಂದು ತೊಟ್ಟು ನೀರು ಹಾಕಿದರು ಅದು ಹೊರಗಡೆ ಚೆಲ್ಲುವಷ್ಟು ಬಟ್ಟಲು ತುಂಬಿತ್ತು. ನಂತರ ಹೀಗೆಂದನು, ಮಗಳೇ ಈ ಬಟ್ಟಲನ್ನು ನಿಧಾನವಾಗಿ ತೆಗೆದುಕೊಂಡು ಕಬೀರರಿಗೆ ಕೊಡು ಹಾಗೂ ಅವರು ಏನು ಹೇಳುತ್ತಾರೋ ಅದನ್ನು ನನಗೆ ಬಂದು ಹೇಳು". ಕಬೀರ್ ಪರಮೇಶ್ವರರು ಕಮಾಲಿಯು ತಂದ ಬಟ್ಟಲಿಗೆ ಬಟ್ಟೆಯನ್ನು ಹೊಲಿಯುವ ಒಂದು ದೊಡ್ಡ ಸೂಜಿಯನ್ನು ಹಾಕಿದರು. ಆಗ ಬಟ್ಟಲಿನಿಂದ ಸ್ವಲ್ಪ ನೀರು ನೆಲದ ಮೇಲೆ ಚೆಲ್ಲಿತು. ಆಗ ಆ ಬಟ್ಟಲನ್ನು ಸರ್ವಾನಂದನಿಗೆ ಕೊಡಲು ಹೇಳಿದರು. ಬಟ್ಟಲನ್ನು ವಾಪಸ್ಸು ಪಡೆಯುತ್ತಾ ಕಬೀರರು ಏನು ಹೇಳಿದರೆಂದು ಸರ್ವಾನಂದನು ಕೇಳಿದನು. ಪ್ರಭುಗಳು ಸೂಜಿ ಹಾಕಿದ ವಿಷಯವನ್ನು ಕಮಾಲಿಯು ತಿಳಿಸಿದಳು. ಆಗ ಸರ್ವಾನಂದನು ಕಬೀರ ಪರಮೇಶ್ವರರ ಬಳಿ ತೆರಳಿ ನೀವು ನನ್ನ ಪ್ರಶ್ನೆಗೆ ಏನು ಉತ್ತರ ನೀಡಿದರೆಂದು ಕೇಳಿದನು. ಆಗ ಕಬೀರರು ನೀವು ಕೇಳಿದ ಪ್ರಶ್ನೆ ಏನು ಎಂದು ಕೇಳಿದರು.

ಆಗ ಸರ್ವಾನಂದ ಮಹರ್ಷಿಯು ಹೀಗೆಂದನು, ನಾನು ಎಲ್ಲ ವಿದ್ವಾಂಸರನ್ನು ಶಾಸ್ತ್ರಾರ್ಥದಲ್ಲಿ ಸೋಲಿಸಿದ್ದೇನೆ. ನನ್ನ ಹೆಸರನ್ನು ಸರ್ವಾಜೀತ್ ಎಂದು ಇಡಬೇಕೆಂದು ನನ್ನ ತಾಯಿಯವರಲ್ಲಿ ಪ್ರಾರ್ಥಿಸಿದೆ. ನಿಮ್ಮನ್ನು ಸೋಲಿಸಿದ ನಂತರ ನನ್ನ ಹೆಸರನ್ನು ಪರಿವರ್ತಿಸುವುದಾಗಿ ನನ್ನ ತಾಯಿಯು ಹೇಳಿದಳು. ನಿಮ್ಮ ಬಳಿ ನೀರು ತುಂಬಿದ ಬಟ್ಟಲನ್ನು ಕಳುಹಿಸಿದ ಅರ್ಥವೇನೆಂದರೆ ಹೇಗೆ ನೀರಿನಿಂದ ಬಟ್ಟಲು ತುಂಬಿದೆಯೋ ಹಾಗೆ ಜ್ಞಾನದಿಂದ ನಾನು ಪರಿಪೂರ್ಣನಾಗಿದ್ದೇನೆ. ಈ ಬಟ್ಟಲಿನಲ್ಲಿ ಇನ್ನು ನೀರನ್ನು ತುಂಬಿಸಲಾಗುವುದಿಲ್ಲ. ಹಾಗೇನಾದರೂ ನೀರು ಹಾಕಿದರೆ ಅದು ಹೊರಗೆ ಚೆಲ್ಲುತ್ತದೆ. ಅಂದರೆ ನನ್ನ ಜೊತೆ ಜ್ಞಾನದ ಚರ್ಚೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲ. ನಿಮ್ಮ ಜ್ಞಾನ ನನ್ನ ಜ್ಞಾನಕ್ಕೆ ಸಮಾನವಿಲ್ಲ. ಆದ್ದರಿಂದ ಸೋಲನ್ನು ಒಪ್ಪಿಕೊಳ್ಳುವುದರಲ್ಲಿ ನಿಮಗೆ ಹಿತವಿದೆ" ಎಂದನು. ಪೂಜ್ಯರಾದ ಕಬೀರ್ ಪರಮೇಶ್ವರರು (ಕವಿರ್ದೇವ್) ಹೀಗೆಂದರು "ನೀರಿನಿಂದ ತುಂಬಿರುವ ಬಟ್ಟಲಿಗೆ ಕಬ್ಬಿಣದ ಸೂಜಿಯನ್ನು ಹಾಕಿದ್ದರ ಅರ್ಥವೇನೆಂದರೆ ನನ್ನ ಜ್ಞಾನವು (ತತ್ತ್ವಜ್ಞಾನ) ಎಷ್ಟಿದೆಯೆಂದರೆ ಒಂದು ಸಣ್ಣ ಸೂಜಿಯು ಬಟ್ಟಲಿನ ನೀರನ್ನು ಹೊರಗೆ ಹಾಕಿ ಕೆಳಗೆ ಬೀಳಿಸಿತು. ಇದೇ ರೀತಿ ನನ್ನ ತತ್ತ್ವಜ್ಞಾನವು ನಿಮ್ಮ ಅಸತ್ಯ ಜ್ಞಾನವನ್ನು ಹೊರದಬ್ಬಿ ನಿಮ್ಮ ಹೃದಯದಲ್ಲಿ ನೆಲೆಸುತ್ತದೆ". ಆಗ ಮಹರ್ಷಿ ಸರ್ವಾನಂದನು ಕಬೀರರಿಗೆ ಪ್ರಶ್ನೆ ಕೇಳು ಎಂದು ಹೇಳಿದನು. ಒಬ್ಬ ವಿದ್ವಾಂಸನು ನೇಕಾರರ ಬಡಾವಣೆಗೆ ಬರುವುದನ್ನು ನೋಡಿ ಸುತ್ತಮುತ್ತಲಿನ ಅಶಿಕ್ಷಿತ ನೇಕಾರರು ಶಾಸ್ತ್ರಾರ್ಥವನ್ನು ಕೇಳಲು ಅಲ್ಲಿಗೆ ಬಂದು ಸೇರಿದರು. ಪೂಜ್ಯ ಕಬೀರದೇವರು ಹೀಗೆ ಪ್ರಶ್ನಿಸಿದರು:

ಕೌನ್ ಬ್ರಹ್ಮಾ ಕಾ ಪಿತಾ ಹೈ, ಕೌನ್ ವಿಷ್ಣು ಕೀ ಮಾಂ।<br>
ಶಂಕರ್ ಕಾ ದಾದಾ ಕೌನ್ ಹೈ, ಸರ್ವಾನಂದ್ ದೇ ಬತಾಏ॥

ಸರ್ವಾನಂದರ ಉತ್ತರ ಹೀಗಿತ್ತು–ಶ್ರೀ ಬ್ರಹ್ಮಾ ರಜೋಗುಣ, ಶ್ರೀ ವಿಷ್ಣು ಸತೋಗುಣ ಹಾಗೂ ಶ್ರೀ ಶಿವ ತಮೋಗುಣದಿಂದ ಕೂಡಿದ್ದಾರೆ. ಈ ಮೂವರು ಅಜರಾಮರರು ಅಂದರೆ ಅವಿನಾಶಿಗಳು. ಸರ್ವೇಶ್ವರ, ಮಹೇಶ್ವರ ಮೃತ್ಯುಂಜಯರು. ಇವರಿಗೆ ತಂದೆ ತಾಯಿಗಳಿಲ್ಲ. ನೀವೇ ಅಜ್ಞಾನಿಗಳು. ನಿಮಗೆ ಶಾಸ್ತ್ರಗಳ ಜ್ಞಾನವಿಲ್ಲ. ಹೀಗೆ ಸುಮ್ಮನೆ ಬೇಕಾಬಿಟ್ಟಿ ಪ್ರಶ್ನೆಗಳನ್ನು ಕೇಳುತ್ತೀರಿ ಎಂದನು. ಆಗ ಅಲ್ಲಿ ನೆರೆದಿದ್ದ ಎಲ್ಲಾ ಅಶಿಕ್ಷಿತ ನೇಕಾರರು ಮಹರ್ಷಿ ಸರ್ವಾನಂದನನ್ನು ಸಮರ್ಥಿಸುತ್ತಾ ಚಪ್ಪಾಳೆ ತಟ್ಟಿದರು.

ಪೂಜ್ಯರಾದ ಕಬೀರ್ ಪ್ರಭುಗಳು (ಕವಿರ್ದೇವ) ಹೀಗೆಂದರು. "ಹೇ ಮಹರ್ಷಿಗಳೇ! ನೀವು ಶ್ರೀಮದ್ ದೇವಿ ಭಾಗವತ ಪುರಾಣದ 3ನೇ ಸ್ಕಂದ ಹಾಗೂ ಶ್ರೀ ಶಿವಪುರಾಣದ 6ನೇ ಮತ್ತು 7ನೇ ಸಂಹಿತೆಯ ಈ ಅಧ್ಯಾಯಗಳನ್ನು ಸಾಕ್ಷಿಯನ್ನಾಗಿ ಮಾಡಿ ಗೀತೆಯ ಮೇಲೆ ಆಣೆ ಮಾಡಿ ಅದನ್ನು ಓದಿ ಹಾಗೂ ಅದರ ಅನುವಾದವನ್ನು ಹೇಳಿ ಎಂದರು. ಮಹರ್ಷಿ ಸರ್ವಾನಂದನು ಪವಿತ್ರ ಗೀತೆಯ ಮೇಲೆ ಆಣೆ ಮಾಡಿ ಪ್ರತಿಜ್ಞೆ ಮಾಡಿದನು. ನಿಜವಾದದ್ದನ್ನೇ ಹೇಳುತ್ತೇನೆ ಎಂದನು. ಪವಿತ್ರ ಪುರಾಣಗಳನ್ನು ಕಬೀರ್ ಪರಮೇಶ್ವರರು ಹೇಳಿದ ನಂತರ ಗಮನವಿಟ್ಟು ಓದಿದನು. ಶ್ರೀಶಿವ ಪುರಾಣ (ಗೀತಾ ಪ್ರೆಸ್, ಗೋರಖ್‌ಪುರದಿಂದ

ಪ್ರಕಾಶಿತಗೊಂಡದ್ದು, ಇದರ ಸಂಪಾದಕರು ಶ್ರೀ ಹನುಮಾನ್ ಪ್ರಸಾದ್ ಪೊದ್ದಾರ್– ಕನ್ನಡ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್) ಶ್ರೀ ಶಿವಪುರಾಣದಲ್ಲಿ 81ನೇ ಪುಟದಿಂದ 84ನೇ ಪುಟದವರೆಗೆ ಬರೆದಿರುವುದೇನೆಂದರೆ ಸದಾಶಿವ ಅಂದರೆ ಕಾಲ ರೂಪದಲ್ಲಿರುವ ಬ್ರಹ್ಮ ಮತ್ತು ಪ್ರಕೃತಿಯ (ದುರ್ಗಾ) ಸಂಯೋಗದಿಂದ (ಪತಿ ಪತ್ನಿಯ ಸಂಯೋಗದಿಂದ) ಸತೋಗುಣ ಶ್ರೀ ವಿಷ್ಣು, ರಜೋಗುಣ ಶ್ರೀ ಬ್ರಹ್ಮಾ ಮತ್ತು ತಮೋಗುಣ ಶ್ರೀ ಶಿವನ ಜನ್ಮವಾಯಿತು. ಇದೇ ಪ್ರಕೃತಿಯನ್ನು ಅಷ್ಟಾಂಗಿ, ದುರ್ಗಾ, ತ್ರಿದೇವರುಗಳ  (ಬ್ರಹ್ಮಾ, ವಿಷ್ಣು, ಶಿವ) ಜನನಿ ಎಂದು ಕರೆಯಲಾಗುತ್ತದೆ.

ಪವಿತ್ರವಾದ ಶ್ರೀ ದೇವಿ ಪುರಾಣ (ಗೀತಾ ಪ್ರೆಸ್ ಗೋರಖ್‌ಪುರದಿಂದ ಪ್ರಕಾಶಿತಗೊಂಡದ್ದು, ಸಂಪಾದಕರು ಶ್ರೀ ಹನುಮಾನ್ ಪ್ರಸಾದ ಪೊದ್ದಾರ್ ಹಾಗೂ ಚಿಮನ್‌ಲಾಲ್ ಗೋಸ್ವಾಮಿ, ಕನ್ನಡ ಅನುವಾದಕರು ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್) 3ನೇ ಸ್ಕಂದದ ಪುಟ ಸಂಖ್ಯೆ 97ರಿಂದ 107ರವರೆಗೆ ಸ್ಪಷ್ಟವಾದ ವರ್ಣನೆಯಿದೆ. ಇಲ್ಲಿ ಪ್ರಕೃತಿಯು (ದುರ್ಗೆ) ನಮ್ಮ ಮೂವರ ತಾಯಿ. ನಾನು ಚಿಕ್ಕ ಮಗುವಾಗಿದ್ದಾಗಿನಿಂದಲೂ ಇವಳನ್ನು ನೋಡಿದ್ದೇನೆ ಎಂದು ವಿಷ್ಣು ಹೇಳಿದ್ದಾನೆ. ದೇವಿಮಾತೆಯ ಸ್ತುತಿಯನ್ನು ಮಾಡುತ್ತಾ ವಿಷ್ಣು ಹೀಗೆಂದನು–ಹೇ ಮಾತೆಯೇ ನಾವು (ವಿಷ್ಣು, ಬ್ರಹ್ಮಾ, ಶಿವ) ನಶ್ವರರು. ನಮ್ಮ ಅವಿರ್ಭಾವ(ಜನನ) ಮತ್ತು ತಿರೋಭಾವ(ಮರಣ) ಆಗುತ್ತಿರುತ್ತದೆ. ನೀನು ಶಾಶ್ವತಳು, ನಿತ್ಯಳು, ಪ್ರಕೃತಿದೇವಿ ಆಗಿರುವೆ". ಆಗ ಶಂಕರನು ಹೀಗೆಂದನು. "ಹೇ ಮಾತೆ, ಬ್ರಹ್ಮಾ ಮತ್ತು ವಿಷ್ಣುವು ನಿನ್ನಿಂದ ಹುಟ್ಟಿದ್ದರೆ ಶಂಕರನಾದ ನಾನು ಸಹ ನಿಮ್ಮಿಂದಲೇ ಹುಟ್ಟಿದ್ದೇನೆ ಅಂದರೆ ನೀವು ನನಗೂ ತಾಯಿ.

ಮಹರ್ಷಿ ಸರ್ವಾನಂದನು ಈ ಮೊದಲೇ ಕೇಳಿದ್ದ ಅರ್ಥಂಬರ್ಥ ಶಾಸ್ತ್ರವಿರುದ್ಧವಾದ ಜ್ಞಾನ (ಲೋಕವೇದ)ದ ಆಧಾರದಿಂದ ಬ್ರಹ್ಮಾ, ವಿಷ್ಣು, ಶಿವ ಈ ಮೂವರನ್ನು ಅವಿನಾಶಿ ಎಂದು ಕರೆಯುತ್ತಿದ್ದನು. ಪುರಾಣಗಳನ್ನು ಓದುತ್ತಿದ್ದರೂ ಸಹ ಅಜ್ಞಾನಿಯಾಗಿದ್ದನು. ಏಕೆಂದರೆ ಬ್ರಹ್ಮನು (ಕಾಲ) ಪವಿತ್ರವಾದ ಗೀತೆಯ 7ನೇ ಅಧ್ಯಾಯದ 10ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ ನಾನು ಸರ್ವಪ್ರಾಣಿಗಳ ಬುದ್ಧಿಯು. ನನ್ನ 21 ಬ್ರಹ್ಮಾಂಡಗಳಲ್ಲಿ ಎಲ್ಲರೂ ನನ್ನ ಅಧೀನರು. ನನಗೆ ಬೇಕಾದಾಗ ಜ್ಞಾನವನ್ನು ಪ್ರಸಾದಿಸುವೆ ಹಾಗೂ ಬೇಕಾದಾಗ ಅಜ್ಞಾನವನ್ನು ತುಂಬಿಸುವೆ. ಆ ಸಮಯದಲ್ಲಿ ಪೂರ್ಣ ಪರಮಾತ್ಮನ ಮೂಲಕ ಪುರಾಣಗಳ ಅಧ್ಯಾಯ ಮತ್ತು ಪುಟ ಸಂಖ್ಯೆಯನ್ನು ಹೇಳಿದ ನಂತರ ಕಾಲನ (ಬ್ರಹ್ಮ) ಒತ್ತಡ ನಿವಾರಣೆಯಾಯಿತು. ನಂತರ ಸರ್ವಾನಂದನಿಗೆ ಸ್ಪಷ್ಟ ಜ್ಞಾನ ಪ್ರಾಪ್ತಿಯಾಯಿತು. ಆದರೂ ಸಹ ಅವನು ಮರ್ಯಾದೆಗೆ ಅಂಜಿ ಹೀಗೆಂದನು. "ನಾನು ಎಲ್ಲವನ್ನು ಓದಿದ್ದೇನೆ. ಈ ರೀತಿ ಎಲ್ಲಿಯೂ ಬರೆದಿಲ್ಲವೆಂದು ಕವಿರ್‌ದೇವರಿಗೆ ಹೇಳಿದ, ನೀನು ಸುಳ್ಳುಗಾರ. ಶಾಸ್ತ್ರಗಳ ವಿಷಯದಲ್ಲಿ ನಿನಗೇನು ಗೊತ್ತು? ನಾವು ಅದನ್ನು ಪ್ರತಿದಿನವೂ ಓದುತ್ತಿರುತ್ತೇವೆ" ಎಂದನು. ನಂತರ ಸರ್ವಾನಂದನು ಸಂಸ್ಕೃತವನ್ನು ಮಾತಾಡಲು ಪ್ರಾರಂಭಿಸಿದನು. 20 ನಿಮಿಷಗಳವರೆಗೆ ತನಗೆ ಗೊತ್ತಿದ್ದ ವೇದವಾಣಿಯನ್ನು ಹೇಳುತ್ತಾ ಹೋಗುತ್ತಿದ್ದನು. ಆದರೆ ಪುರಾಣವನ್ನು ಹೇಳಲೇ ಇಲ್ಲ.

ಅಲ್ಲಿ ನೆರೆದಿದ್ದ ಮುಗ್ಧರಾದ ನೇಕಾರರು ಸಂಸ್ಕೃತವನ್ನು ಅರ್ಥ ಮಾಡಿಕೊಳ್ಳದೆ ಆ ಭಾಷೆಯಿಂದ ಪ್ರಭಾವಿತರಾಗಿ ಸರ್ವಾನಂದ ಮಹರ್ಷಿಯನ್ನು ಸಮರ್ಥಿಸುತ್ತಾ ಅವನನ್ನು ಮಹಾಜ್ಞಾನಿ ಎಂದು ಹೊಗಳಿದರು. ಇದರರ್ಥವೇನೆಂದರೆ ಕಬೀರ್ ಪರಮೇಶ್ವರರನ್ನು ಸೋಲಿಸಿ ಮಹರ್ಷಿ ಸರ್ವಾನಂದರನ್ನು ವಿಜಯಿ ಎಂದು ಘೋಷಿಸಲಾಯಿತು. ಆಗ ಕಬೀರ್ ಪರಮೇಶ್ವರರು ಹೀಗೆಂದರು– "ನೀವು ಗೀತೆಯ ಮೇಲೆ ಕೈಯಿಟ್ಟು ಆಣೆ ಮಾಡಿದ್ದೀರಿ! ಶಪಥ ಮಾಡಿದ್ದೀರಿ ಇದು ನಿಮ್ಮ ಮೊದಲ ತಪ್ಪು. ಅದರಲ್ಲಿ ಬರೆದಿರುವ ಶಾಸ್ತ್ರಗಳ ನಿಜಾಂಶವನ್ನು ಒಪ್ಪಿಕೊಳ್ಳುತ್ತಿಲ್ಲ. ಅಂದರೆ ಮಲಗಿರುವ ಮನುಷ್ಯನನ್ನು ಎಬ್ಬಿಸಬಹುದು. ಆದರೆ ಮಲಗಿರುವಂತೆ ನಟಿಸುತ್ತಿರುವ ಮನುಷ್ಯನನ್ನು ಎಬ್ಬಿಸಲು ಸಾಧ್ಯವಿಲ್ಲ".

ಕಬೀರ್ ಜಾನ್ ಬೂಝ್ ಸಾಚೀ ತಜೇ ಕರೈ ಝೂಠ ಸೆ ನೇಹ್।
ತಾಕೀ ಸಂಗತಿ ಹೆ ಪ್ರಭು ಸ್ವಪನ್ ಮೆಂ ಭೀ ನ ದೆ।

ಆದ್ದರಿಂದ ಹೇ ಸರ್ವಾನಂದ, ನೀನೇ ಗೆದ್ದೆ, ನಾನೇ ಸೋತೆ.

ಒಬ್ಬ ಜಮೀನ್ದಾರನ ಮಗ ಏಳನೇ ತರಗತಿಯಲ್ಲಿ ಓದುತ್ತಿದ್ದನು. ಅವನಿಗೆ ಸ್ವಲ್ಪ ಇಂಗ್ಲೀಷ್ ಭಾಷೆಯೂ ಬರುತ್ತಿತ್ತು. ಒಂದು ದಿನ ಆ ಇಬ್ಬರು ತಂದೆ, ಮಗ ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದರು. ಮುಂದೆ ಒಬ್ಬ ಇಂಗ್ಲೀಷಿನವನು ಕಾರಿನಲ್ಲಿ ಬರುತ್ತಿದ್ದನು. ಅವನು ಎತ್ತಿನ ಗಾಡಿಯಲ್ಲಿ ಕುಳಿತಿರುವವರ ಬಳಿ ಇಂಗ್ಲೀಷಿನಲ್ಲಿ ದಾರಿ ಕೇಳಿದನು. ಆಗ ತಂದೆಯು ಮಗನಿಗೆ ಹೀಗೆಂದನು, "ಹೇ ಮಗನೇ, ಈ ಇಂಗ್ಲೀಷಿನವನು ತನ್ನನ್ನು ತಾನು ಶಿಕ್ಷಿತನೆಂದು ಸಾಬೀತುಪಡಿಸಲು ಇಚ್ಚಿಸುತ್ತಿದ್ದಾನೆ. ನಿನಗೂ ಇಂಗ್ಲೀಷ್ ಭಾಷೆ ತಿಳಿದಿದೆ. ಅವನ ಗರ್ವವನ್ನು ಇಳಿಸು, ನೀನು ಇಂಗ್ಲೀಷಿನಲ್ಲಿ ಮಾತನಾಡು" ಎಂದು ಹೇಳಿದನು. ಆಗ ಆ

ಮಗನಿಗೆ ಅನಾರೋಗ್ಯವಾದಾಗ ಇಂಗ್ಲೀಷ್‌ನಲ್ಲಿ ರಜಾ ಚೀಟಿಯನ್ನು ಬರೆಯುವುದು ಮಾತ್ರ ಗೊತ್ತಿತ್ತು. ಅದನ್ನೇ ಜೋರಾಗಿ ಹೇಳಲು ಪ್ರಾರಂಭಿಸಿದನು. ಇಂಗ್ಲೀಷಿನವನು ಆ ಮುಗ್ಧ ಮಗುವಿನ ಮುಗ್ಧತೆಯನ್ನು ಕಂಡು ಹೀಗೆಂದನು, ನಾನು ದಾರಿ ಕೇಳಿದರೆ ನೀನು ಅನಾರೋಗ್ಯಕ್ಕಾಗಿ ರಜಾ ಚೀಟಿಯನ್ನು ಬರೆಯುವ ಬಗ್ಗೆ ಹೇಳುತ್ತಿರುವೆ. ಹೀಗೆಂದು ಹೇಳುತ್ತಾ ಹಣೆ ಹಣೆ ಚಚ್ಚಿಕೊಂಡು ಅವನು ಹೊರಟು ಹೋದನು. ಆದರೆ ಏನು ಅರಿಯದ ಆ ತಂದೆಯು ತನ್ನ ಮಗನು ಇಂಗ್ಲೀಷಿನವನನ್ನು ಸೋಲಿಸಿದನೆಂದು ಅವನಿಗೆ 'ಶಹಬ್ಬಾಷ್' ಗಿರಿಯನ್ನು ಕೊಟ್ಟನು ಹಾಗೂ ತನ್ನ ಪುತ್ರನಿಗೆ ಹೀಗೆಂದನು, "ವಾಹ್ ಮಗನೇ, ನನ್ನ ಜೀವನ ಸಾರ್ಥಕವಾಯಿತು. ಈ ದಿನ ನೀನು ಇಂಗ್ಲೀಷಿನವನನ್ನು ಇಂಗ್ಲೀಷ್ ಭಾಷೆಯಲ್ಲಿಯೇ ಸೋಲಿಸಿದೆ" ಎಂದನು. ಆಗ ಆ ಮಗನು "ಅಪ್ಪಾ ನನಗೆ ನನ್ನ ಬೆಸ್ಟ್ ಫ್ರೆಂಡ್ ಎಂಬ ಪ್ರಬಂಧವು ನೆನಪಿದೆ ಅದನ್ನೇನಾದರೂ ಹೇಳಿದ್ದಿದ್ದರೆ ಆ ಇಂಗ್ಲೀಷಿನವನು ಕಾರನ್ನು ಬಿಟ್ಟು ಓಡಿ ಹೋಗುತ್ತಿದ್ದ". ಹೀಗೆ ಕಬೀರ್ ದೇವನು ಏನೋ ಕೇಳಿದರೆ ಸರ್ವಾನಂದನು ಇನ್ನೇನೋ ಉತ್ತರ ಕೊಡುತ್ತಿದ್ದಾನೆ. ಹೀಗೆ ಶಾಸ್ತ್ರಾರ್ಥವು ತತ್ತ್ವಜ್ಞಾನವನ್ನು ಬಂಧಿಸಿದೆ.

ಪರಮಪೂಜ್ಯರಾದ ಕಬೀರದೇವನು (ಕವಿರ್ದೇವ) ಹೀಗೆಂದರು–"ಸರ್ವಾನಂದರೇ, ನೀವು ಗೆದ್ದಿರಿ! ನಾನು ಸೋತೆನು". ಆಗ ಮಹರ್ಷಿ ಸರ್ವಾನಂದನು ನೀವು ಸೊತಿದ್ದೇನೆ ಎಂದು ಬರೆದುಕೊಡಿ" ಎಂದನು. ಆಗ ಪರಮಾತ್ಮ ಕಬೀರರು ದಯವಿಟ್ಟು ಅದನ್ನು ನೀವೇ ಮಾಡಿ. ನಿಮಗೆ ಅನಿಸಿದ್ದನ್ನೇ ಬರೆದುಕೊಳ್ಳಿ. ನಾನು ಹೆಬ್ಬೆಟ್ಟನ್ನು ಒತ್ತುತ್ತೇನೆ ಎಂದರು. ಮಹರ್ಷಿ ಸರ್ವಾನಂದನು 'ಶಾಸ್ತ್ರಾರ್ಥದಲ್ಲಿ ಸರ್ವಾನಂದನು ಗೆದ್ದನು ಮತ್ತು ಕಬೀರ ಸಾಹೇಬರು ಸೋತರು' ಎಂದು ಬರೆದನು. ಹಾಗೂ ಕಬೀರ ಪರಮೇಶ್ವರನಿಂದ ಹೆಬ್ಬೆಟ್ಟನ್ನು ಒತ್ತಿಸಿಕೊಂಡನು. ನಂತರ ತನ್ನ ತಾಯಿಯ ಬಳಿ ಹೋಗಿ ಕಬೀರ್ ಪರಮೇಶ್ವರರನ್ನು ಸೋಲಿಸಿ ಬಂದದ್ದಕ್ಕೆ ಸಾಕ್ಷಿ ಸಮೇತ ಬಂದಿದ್ದೇನೆ ಎಂದು ಆ ಪತ್ರವನ್ನು ತೋರಿಸಿದನು. ಆಗ ಅವನ ತಾಯಿಯಾದ ಶಾರದೆಯು ಆ ಪತ್ರವನ್ನು ಓದುವಂತೆ ತಿಳಿಸಿದಳು. ಸರ್ವಾನಂದನು ಓದಲು ಪ್ರಾರಂಭಿಸಿದಾಗ ಅದರಲ್ಲಿ ಕಬೀರ ಪರಮೇಶ್ವರರು ವಿಜಯಿಯಾಗಿರುವುದಾಗಿಯೂ ಶಾಸ್ತ್ರಾರ್ಥದಲ್ಲಿ ಸರ್ವಾನಂದನು ಸೋತು ಹೋಗಿರುವುದಾಗಿಯೂ ಬರೆದಿತ್ತು. ಆಗ ಸರ್ವಾನಂದನ ತಾಯಿಯು ಹೀಗೆಂದಳು. 'ಹೇ ಮಗನೇ, ನೀನು ಗೆದ್ದಿರುವುದಾಗಿ ಹೇಳಿದೆ, ಆದರೆ ನೀನು ಸೋತು ಬಂದಿರುವೆ". ಆಗ ಸರ್ವಾನಂದನು ಹೀಗೆಂದನು– "ಅಮ್ಮಾ, ನಾನು ಅನೇಕ ದಿನಗಳಿಂದ ಎಡಬಿಡದೆ ಶಾಸ್ತ್ರಾರ್ಥಗಳಲ್ಲಿ ಮಗ್ನವಾಗಿದ್ದೆ. ಆದ್ದರಿಂದ ಪ್ರಮಾದವಶಾತ್ ಎಲ್ಲೋ ಬರೆಯುವುದರಲ್ಲಿ ತಪ್ಪಾಗಿದೆ. ಮತ್ತೆ ಹೋಗಿ ಸರಿಯಾಗಿ ಬರೆದು ತರುತ್ತೇನೆ" ಎಂದನು. ತಾಯಿಯು ಲಿಖಿತ ರೂಪದಲ್ಲಿ ವಿಜಯಿಯಾಗಿರುವ ಬಗ್ಗೆ ತರುವಂತೆ ಷರತ್ತನ್ನು ವಿಧಿಸಿದ್ದಳು. ಮಹರ್ಷಿ ಸರ್ವಾನಂದನು ಮತ್ತೆ ಅಲ್ಲಿಗೆ ಹೋಗಿ "ಕಬೀರ್ ಸಾಹೇಬರೇ ಬರೆಯುವುದರಲ್ಲಿ ಏನೋ ತಪ್ಪಾಗಿದೆ. ಇದನ್ನು ಮತ್ತೆ ಬರೆಯಬೇಕಾಗಿದೆ" ಎಂದನು. ಕಬೀರ ಸಾಹೇಬರು ಮತ್ತೆ ಬರೆಯಲು ತಿಳಿಸಿದರು. ಸರ್ವಾನಂದನು ಮತ್ತೆ ಬರೆದು ಹೆಬ್ಬೆಟ್ಟನ್ನು ಹಾಕಿಸಿಕೊಂಡು ತಾಯಿಯ ಬಳಿ ಬಂದು ನೋಡಿದಾಗ ಮತ್ತೆ ಅದೇ ರೀತಿ ಬರೆದಿತ್ತು. ಮೂರನೇ ಸಾರಿ ಕಬೀರರ ಬಳಿ ಹೋಗಿ ಮತ್ತೆ ಬರೆದು ತಂದನು. ಮನೆಗೆ ಹೋಗುವ ಮುಂಚೆ ಓದಿದಾಗ ಸರಿಯಾಗಿ ಬರೆದಿತ್ತು. ಆಗ ಸರ್ವಾನಂದನು ಆ ಪತ್ರದ ಮೇಲೆ ದೃಷ್ಟಿಯನ್ನು ತೆಗೆಯದೆ ಹಾಗೆಯೇ ನಡೆದು ತನ್ನ ಮನೆಯ ಒಳಗೆ ಪ್ರವೇಶ ಮಾಡಿದನು ಹಾಗೂ ತಾಯಿಯ ಮುಂದೆ ಓದಿದನು. ಆದರೆ ಅವನ ಕಣ್ಣುಗಳ ಮುಂದೆಯೇ ಅಕ್ಷರಗಳು ಬದಲಾಯಿಸಲ್ಪಟ್ಟವು. ನಂತರ ಮತ್ತೆ 'ಸರ್ವಾನಂದನು ಸೋತುಹೋದನು. ಮತ್ತು ಕಬೀರರು ಗೆದ್ದರು ಎಂದು ಬರೆದು ನಂತರ ಶಾಸ್ತ್ರಾರ್ಥದಲ್ಲಿ ಕಬೀರರು ಗೆದ್ದರು' ಎಂದೇ ಬರೆದಿತ್ತು. ಆಗ ಸರ್ವಾನಂದನು ಯಾವ ಮಾತನ್ನೂ ಆಡಲಿಲ್ಲ. ಆಗ ಅವನ ತಾಯಿಯು "ಹೇ ಮಗನೇ, ಏಕೆ ಮಾತನಾಡುತ್ತಿಲ್ಲ? ಏಕೆ ಬರೆದಿರುವುದನ್ನು ಓದಿ ತಿಳಿಸುತ್ತಿಲ್ಲ" ಎಂದಳು. ತನ್ನ ಮಗನು ಬೆಟ್ಟದ ಜೊತೆ ಗುದ್ದಾಡುತ್ತಿದ್ದಾನೆ ಎಂದು ತಿಳಿದಿತ್ತು. ತಾಯಿಯು ಸರ್ವಾನಂದನನ್ನು ಕುರಿತು ಹೀಗೆಂದಳು–"ಮಗನೇ, ಪರಮೇಶ್ವರರು ಬಂದಿದ್ದಾರೆ. ಹೋಗಿ ಅವರ ಕಾಲುಗಳ ಮೇಲೆ ಬಿದ್ದು ನಿನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮೆಯನ್ನು ಕೇಳು ಉಪದೇಶವನ್ನು ಕೇಳಿ ನಿನ್ನ ಜೀವನವನ್ನು ಸಾರ್ಥಕ ಮಾಡಿಕೊ". ಆಗ ಸರ್ವಾನಂದನು ತನ್ನ ತಾಯಿಯ ಪಾದಗಳಿಗೆ ಎರಗಿ ಅಳಲು ಪ್ರಾರಂಭಿಸಿದನು. ನಂತರ ಹೀಗೆಂದನು, "ಅಮ್ಮ ಇವರು ನಿಜವಾದ ಪ್ರಭುಗಳು ಬಂದಿದ್ದಾರೆ. ನೀವು ನನ್ನ ಜೊತೆ ಬನ್ನಿ ನನಗೆ ನಾಚಿಕೆಯಾಗುತ್ತಿದೆ". ಆಗ ಸರ್ವಾನಂದನ ತಾಯಿ ತನ್ನ ಪುತ್ರನನ್ನು ಕರೆದುಕೊಂಡು ಕಬೀರರ ಬಳಿ ಬಂದಳು ಹಾಗೂ ಅವರಿಂದ ಸರ್ವಾನಂದನಿಗೆ ಉಪದೇಶ ಕೊಡಿಸಿದಳು.

ಮಹರ್ಷಿ ಎಂದು ಕರೆಯಲ್ಪಡುತ್ತಿದ್ದ ಆ ಅಜ್ಞಾನಿ ಸರ್ವಾನಂದನು ಪೂರ್ಣ ಪರಮಾತ್ಮನ ಪಾದಗಳಿಗೆ ಎರಗಿದ ತಕ್ಷಣ ಅವನ ಉದ್ಧಾರವಾಯಿತು. ಆಗ ಪೂರ್ಣ ಬ್ರಹ್ಮ ಕಬೀರ ಪರಮೇಶ್ವರರು (ಕವಿರ್ದೇವರು) ಹೀಗೆಂದರು. ಹೇ ಸರ್ವಾನಂದ, ನೀನು ಕೇವಲ ಅಕ್ಷರಜ್ಞಾನದಿಂದ ಶಾಸ್ತ್ರಗಳನ್ನು ತಿಳಿಯಲು ಸಾಧ್ಯವಿಲ್ಲ. ಏಕೆಂದರೆ ನನ್ನ ಆಶ್ರಯಕ್ಕೆ ಬರದಿದ್ದರೆ ಯಾರ ಬುದ್ಧಿಯು ಪೂರ್ಣವಾಗಿ ವಿಕಸಿತವಾಗುವುದಿಲ್ಲ. ಈಗ ನೀನು ಮತ್ತೊಮ್ಮೆ ಇದೇ ಪವಿತ್ರ ವೇದಗಳನ್ನು ಪವಿತ್ರ ಗೀತೆಯನ್ನು, ಪವಿತ್ರ ಪುರಾಣಗಳನ್ನು

ಓದು, ಈಗ ನೀನು ನಿಜವಾದ ಬ್ರಾಹ್ಮಣನಾಗಿರುವೆ. 'ಬ್ರಾಹ್ಮಣ ಸೋಇ ಬ್ರಹ್ಮ ಪಹಚಾನೆ' ಯಾರು ಪೂರ್ಣ ಪರಮಾತ್ಮನನ್ನು ಗುರುತಿಸಿ ತನ್ನ ಉದ್ಧಾರವನ್ನು ಮಾಡಿಕೊಳ್ಳುತ್ತಾರೆಯೋ ಅವರೇ ನಿಜವಾದ ವಿದ್ವಾಂಸರು.

ವಿಶೇಷ :– 2013ನೇ ಇಸವಿಯಿಂದ ಸುಮಾರು 608 ವರ್ಷಗಳ ಹಿಂದೆ ಇದೇ ಪವಿತ್ರ ವೇದಗಳ, ಪವಿತ್ರ ಗೀತೆಯ ಹಾಗೂ ಪವಿತ್ರವಾದ ಪುರಾಣಗಳಲ್ಲಿ ಬರೆದಿದ್ದ ಜ್ಞಾನವನ್ನು ಕಬೀರ್ ಪರಮೇಶ್ವರರು (ಕವಿರ್ದೇವ್) ತನ್ನ ಸಾಧಾರಣ ವಾಣಿಯ ಮೂಲಕ ತಿಳಿಸಿದ್ದರು. (ಅವರು 5 ವರ್ಷದವರಾದಾಗ್ಗಿನಿಂದ ಆ ಸಮಯದಿಂದಲೂ ಅಮೃತಜ್ಞಾನವನ್ನು ತಿಳಿಸಲು ಪ್ರಾರಂಭಿಸಿದರು. ಅದನ್ನೇ ಸನ್ 1493 ರಲ್ಲಿ ಧರ್ಮದಾಸರ ಮೂಲಕ ಬರೆಯಲಾಗಿತ್ತು) ಆ ಸಮಯದಿಂದ ಹಾಗೂ ಇಲ್ಲಿಯವರೆಗೆ ಎಲ್ಲಾ ಮಹರ್ಷಿಗಳು ವ್ಯಾಕರಣದ ಕೊರತೆಯಿಂದ ತುಂಬಿರುವುದು ಎಂದು ಹೇಳಿ ಅದನ್ನು ಓದುವುದು ಅವಶ್ಯಕವಲ್ಲ ಎಂದು ತಿಳಿದಿದ್ದರು. ಹಾಗೂ ಕಬೀರರು ಒಬ್ಬ ಅಜ್ಞಾನಿ, ಅವರಿಗೆ ಅಕ್ಷರ ಜ್ಞಾನವೇ ಇಲ್ಲ. ಸಂಸ್ಕೃತ ಭಾಷೆಯಲ್ಲಿ ಬರೆದ ಶಾಸ್ತ್ರದಲ್ಲಿ ಅಡಗಿರುವ ರಹಸ್ಯವನ್ನು ಇವರೇನು ಬಲ್ಲರು. ನಾವೇನೋ ವಿದ್ವಾಂಸರು, ನಾವು ಹೇಳಿರುವುದು ಎಲ್ಲಾ ಶಾಸ್ತ್ರಗಳಲ್ಲಿ ಬರೆದಿದೆ. ಹಾಗೂ ಬ್ರಹ್ಮಾ, ವಿಷ್ಣು ಹಾಗೂ ಶಿವ ಇವರಿಗೆ ತಂದೆ–ತಾಯಿಗಳಿಲ್ಲ.

ಇವರೆಲ್ಲ ಅಜರಾಮರರು, ಅವಿನಾಶಿಗಳು, ಸರ್ವೇಶ್ವರರು, ಮಹೇಶ್ವರರು ಹಾಗೂ ಮೃತ್ಯುಂಜಯರು. ಇವರು ಎಲ್ಲರ ಸೃಷ್ಟಿಕರ್ತರು ಮತ್ತು ಮೂರು ಗುಣವುಳ್ಳವರು ಎಂದೆಲ್ಲಾ ಹೇಳುತ್ತಿದ್ದರು. ಹಾಗೂ ಅನೇಕ ಕತೆಗಳನ್ನು ಕಟ್ಟಿ ಇಂದಿನವರೆಗೂ ಹೇಳುತ್ತಲೇ ಇದ್ದಾರೆ. ಆದರೆ ಇಂದು ಅದೇ ಪವಿತ್ರ ಶಾಸ್ತ್ರಗಳು ನಿಮ್ಮ ಮುಂದಿವೆ. ಅದರಲ್ಲಿ ಮೂರು ಪ್ರಭುಗಳ (ಬ್ರಹ್ಮಾ–ರಜೋಗುಣ, ವಿಷ್ಣು–ಸತೋಗುಣ, ಶಿವ–ತಮೋಗುಣ) ಇವರ ತಂದೆ–ತಾಯಿಯರ ಸ್ಪಷ್ಟ ವಿವರಣೆಯಿದೆ. ಆ ಕಾಲದಲ್ಲಿ ನಮ್ಮ ಪೂರ್ವಜರು ಅಶಿಕ್ಷಿತರಾಗಿದ್ದರು. ಮತ್ತು ಶಿಕ್ಷಿತ ವರ್ಗಕ್ಕೆ ಶಾಸ್ತ್ರಗಳ ಪೂರ್ಣಜ್ಞಾನವಿರಲಿಲ್ಲ ಹಾಗೂ ಕಬೀರ್ ಪರಮೇಶ್ವರರ (ಕವಿರ್ದೇವ್) ಮೂಲಕ ತಿಳಿಸಲ್ಪಟ್ಟ ಸತ್ಯಜ್ಞಾನವು ಗೊತ್ತಿದ್ದೂ ಸಹ ಸುಳ್ಳು ಎಂದು ಹೇಳುತ್ತಿದ್ದರು. ಹಾಗೂ ಕಬೀರರು ಸುಳ್ಳನ್ನು ಹೇಳುತ್ತಿದ್ದಾರೆ. ಯಾವ ಶಾಸ್ತ್ರದಲ್ಲಿಯೂ ಬಹ್ಮಾ, ವಿಷ್ಣು, ಮಹೇಶ್ವರರಿಗೆ ತಂದೆ–ತಾಯಿ ಇದ್ದಾರೆ ಎಂದು ಬರೆದಿಲ್ಲ ಎಂದು ಹೇಳುತ್ತಿದ್ದರು.

## "ಕಬೀರರು ಮೂರು ದೇವರುಗಳ ಸೃಷ್ಟಿಯ ಕತೆ ಹೇಳಿದರು"

ಇಂದು ಎಲ್ಲಾ ಮಾನವ ಸಮಾಜವು ಅಂದರೆ ಅಣ್ಣ–ತಮ್ಮ, ಅಕ್ಕ–ತಂಗಿ, ಯುವಕರು–ಮುದುಕರು ಎಲ್ಲರೂ ಶಿಕ್ಷಿತರಾಗಿದ್ದಾರೆ. ಹಾಗಾಗಿ ಇಂದು ಕಬೀರ ಪರಮೇಶ್ವರರ ಕಬೀರ ಸಾಗರ ಗ್ರಂಥದಲ್ಲಿ ಅಮೃತವಾಣಿಯಲ್ಲಿ ಬರೆದಿರುವುದನ್ನು ಯಾವ ಶಾಸ್ತ್ರದಲ್ಲೂ ಬರೆದಿಲ್ಲ ಎಂದು ತಿರಸ್ಕರಿಸಲು ಸಾಧ್ಯವಿಲ್ಲ.

**ಅಮೃತವಾಣಿ ಪೂಜ್ಯ ಕಬೀರ್ ಪರಮೇಶ್ವರ್ (ಕವಿರ್ದೇವ) ರವರ :–**

ಧರ್ಮದಾಸ್ ಯಹ್ ಜಗ್ ಬೌರಾನಾ। ಕೋಯಿ ನ ಜಾನೇ ಪದ್ ನಿರವಾನಾ॥
ಯಹಿ ಕಾರನ್ ಮ್ಯೆಂ ಕಥಾ ಪಸಾರಾ। ಜಗಸೇ ಕಹಿಯೋ ಏಕ್ ರಾಮ್ ನಿಯಾರಾ॥
ಯಹೀ ಜ್ಞಾನ್ ಜಗ್ ಜೀವ್ ಸುನಾಓ। ಸಬ್ ಜೀವೋಂಕಾ ಭರಮ್ ನಶಾಓ॥
ಭರಮ್ ಗಯೇ ಜಗ್ ವೇದ್ ಪುರಾನಾ। ಆದಿ ರಾಮ್ ಕಾ ಭೇದ್ ನ ಜಾನಾ॥
ರಾಮ್ ರಾಮ್ ಸಬ್ ಜಗತ್ ಬಖಾನೇ। ಆದಿ ರಾಮ್ ಕೋಯಿ ಬಿರಲಾ ಜಾನೆ॥
ಜ್ಞಾನೀ ಸುನೆ ಸೋ ಹಿರದೈ ಲಗಾಯೀ। ಮೂರ್ಖ್ ಸುನೇ ಸೋ ಗಮ್ಯ್ ನಾ ಪಾಈ॥
ಅಬ್ ಮ್ಯೆಂ ತುಮ್ ಸೇ ಕಹೋಂ ಚಿತಾಯೀ। ತ್ರಯದೇವನಕೀ ಉತ್ಪತ್ತಿ ಭಾಈ॥
ಕುಛ್ ಸಂಕ್ಷೇಪ್ ಕಹೋಂ ಗುಹರಾಯೀ। ಸಬ್ ಸಂಶಯ್ ತುಮ್ಹರೆ ಮಿಟ್ ಜಾಈ॥
ಮಾಂ ಅಷ್ಟಂಗೀ ಪಿತಾ ನಿರಂಜನ್। ವೆ ಜಮ್ ದಾರುಣ್ ವಂಶನ್ ಅಂಜನ್॥
ಪಹಿಲೇ ಕೀನ್ಹ್ ನಿರಂಜನ್ ರಾಈ। ಪೀಛೇಸೇ ಮಾಯಾ ಉಪಜಾಈ॥
ಮಾಯಾ ರೂಪ್ ದೇಖ್ ಅತಿ ಶೋಭಾ। ದೇವ್ ನಿರಂಜನ್ ತನ್ ಮನ್ ಲೋಭಾ॥
ದೇವ್ ನಿರಂಜನ್ ಕಿನ್ಹಾಂ ಭೋಗ್ ವಿಲಾಸಾ। ಅಷ್ಟಾಂಗೀ ಕೋ ರಹೀ ತಬ್ ಆಸಾ॥

ತೀನ್ ಪುತ್ರ್ ಅಷ್ಟಂಗೀ ಜಾಯೇ। ಬ್ರಹ್ಮಾ ವಿಷ್ಣು ಶಿವ್ ನಾಮ್ ಧರಾಯೇ॥
ತೀನ್ ದೇವ್ ವಿಸ್ತಾರ್ ಚಲಾಯೇ। ಇನಮೆಂ ಯಹ್ ಜಗ್ ಧೋಖಾ ಖಾಯೇ॥
ಪುರುಷ್ ಗಮ್ಯ್ ಕೈಸೇ ಕೋ ಪಾವೈ। ಕಾಲ್ ನಿರಂಜನ್ ಜಗ್ ಭರಮಾವೈ॥
ತೀನ್ ಲೋಕ್ ಅಪನೇ ಸುತ್ ದೀನ್ಹಾ। ಸುನ್ನ್ ನಿರಂಜನ್ ಬಾಸಾ ಲೀನ್ಹಾ॥
ಅಲಖ್ ನಿರಂಜನ್ ಸುನ್ನ್ ಠಿಕಾನಾ। ಬ್ರಹ್ಮಾ ವಿಷ್ಣು ಶಿವ್ ಭೇದ್ ನ ಜಾನಾ॥
ತೀನ್ ದೇವ್ ಸೋ ಉಸಕೋ ಧಾವೇಂ। ನಿರಂಜನ್ ಕಾ ವೇ ಪಾರ್ ನಾ ಪಾವೇಂ॥
ಅಲಖ್ ನಿರಂಜನ್ ಬಡಾ ಬಟಪಾರಾ। ತೀನ್ ಲೋಕ್ ಜಿವ್ ಕೀನ್ಹ್ ಅಹಾರಾ॥
ಬ್ರಹ್ಮಾ ವಿಷ್ಣು ಶಿವ್ ನಹೀಂ ಬಚಾಯೇ। ಸಕಲ್ ಖಾಯ್ ಪುನ್ ಧೂರ್ ಉಡಾಯೇ॥
ತಿನಕೇ ಸುತ್ ಹೈ ತೀನೋಂ ದೇವಾ। ಆಂಧರ್ ಜೀವ್ ಕರತ್ ಹೈಂ ಸೇವಾ॥
ಅಕಾಲ್ ಪುರುಷ್ ಕಾಹೂ ನಹಿಂ ಚೀನ್ಹಾಂ। ಕಾಲ್ ಪಾಯ್ ಸಬಹೀ ಗಹ್ ಲೀನ್ಹಾಂ॥
ಬ್ರಹ್ಮ್ ಕಾಲ್ ಸಕಲ್ ಜಗ್ ಜಾನೇ। ಆದಿ ಬ್ರಹ್ಮಕೋ ನಾ ಪಹಿಚಾನೇ॥
ತೀನೋಂ ದೇವ್ ಔರ್ ಔತಾರಾ। ತಾಕೋ ಭಜೇ ಸಕಲ್ ಸಂಸಾರಾ॥
ತೀನೋಂ ಗುಣ್ ಕಾ ಯಹ್ ವಿಸ್ತಾರಾ। ಧರ್ಮ್ ದಾಸ್ ಮೈಂ ಕಹೋಂ ಪುಕಾರಾ॥
ಗುಣ್ ತೀನೋಂ ಕೀ ಭಕ್ತಿ ಮೆಂ, ಭೂಲ್ ಪರೋ ಸಂಸಾರ್।
ಕಹೈ ಕಬೀರ್ ನಿಜ್ ನಾಮ್ ಬಿನ್, ಕೈಸೇ ಉತರೈಂ ಪಾರ್॥

**ಇದರ ನಂತರ ಮಹರ್ಷಿ ಸರ್ವಾನಂದನು ತತ್ವಜ್ಞಾನದ ಆಧಾರದಿಂದ 4 ವೇದಗಳನ್ನು ತಿಳಿದುಕೊಂಡನು. ಆಗ ಸತ್ಯ ಯಾವುದು ಎಂದು ತಿಳಿಯಿತು. ನಂತರ ಕಬೀರ್ ಎಂಬ ನೇಕಾರನ ಶಿಷ್ಯನಾದನು ಮತ್ತು ಅದೇ ಸತ್ಯಜ್ಞಾನವನ್ನು ಬೇರೆಯವರಿಗೂ ತಿಳಿಸಿದನು.**

**ಮೇಲೆ ತಿಳಿಸಿರುವ ವಾಣಿಯ ಭಾವಾರ್ಥ:– ಕಬೀರ್ ಪರಮೇಶ್ವರರು ಸನ್ 1398ರಿಂದ 1518ರವರೆಗೆ ಈ ಪ್ರಪಂಚದಲ್ಲಿ ಲೀಲೆ ಮಾಡುತ್ತಿದ್ದು, ತನ್ನ ಸಮಕಾಲೀನನಾದ ಹಾಗೂ ಪರಮ ಭಕ್ತನಾದ ಧರ್ಮದಾಸನಿಗೆ ತತ್ವಜ್ಞಾನವನ್ನು ತಿಳಿಸಿದರು. (ಧರ್ಮದಾಸನು ಸಹ ವಿಷ್ಣುವಿನ ಅಂದರೆ ಶ್ರೀಕೃಷ್ಣನ ಪರಮ ಭಕ್ತನಾಗಿದ್ದನು. ನಂತರ ಸತ್ಯವನ್ನು ತಿಳಿದು ಕಬೀರ್ ಪರಮೇಶ್ವರರ ಆಶ್ರಯಕ್ಕೆ ಬಂದನು). ಕಬೀರರು ಹೀಗೆಂದರು, "ಧರ್ಮದಾಸ, ಇಡೀ ಪ್ರಪಂಚಕ್ಕೆ ನಿಜವಾದ ಅಧ್ಯಾತ್ಮ ಜ್ಞಾನವು ಇಲ್ಲದಿರುವುದರಿಂದ ಅದು ವಿಚಲಿತವಾಗಿದೆ. ಯಾವುದೇ ಮೋಕ್ಷ ಮಾರ್ಗವು ಅದಕ್ಕೆ ತಿಳಿದಿಲ್ಲ. ಆದ್ದರಿಂದ ಈ ಪೂರ್ಣ ಪರಮಾತ್ಮನು ಈ ಎಲ್ಲಾ ದೇವರುಗಳ ಮತ್ತು ಕಾಲಬ್ರಹ್ಮನಿಂದ ಭಿನ್ನವಾಗಿದ್ದಾನೆ ಎನ್ನುವ ಕತೆ ನಿನಗೆ ಹೇಳಿದ್ದೇನೆ. (ಗೀತೆಯ 15ನೇ ಅಧ್ಯಾಯದ 16–17ನೇ ಶ್ಲೋಕದಲ್ಲಿ ಇದಕ್ಕೆ ಆಧಾರವಿದೆ).**

**ಹೇ ಧರ್ಮದಾಸ್, ಈ ಕತೆಯನ್ನು ನೀನು ಪ್ರಪಂಚದ ಎಲ್ಲಾ ಜೀವಿಗಳಿಗೆ ತಿಳಿಸು. ಅವರ ಸಂದೇಹ ನಿವಾರಣೆಯನ್ನು ಮಾಡು.**

**ಈಗ ನಾನು (ಕಬೀರ್) ನಿನಗೆ ಮೂರು ದೇವರುಗಳ (ಬಹ್ಮಾ, ವಿಷ್ಣು, ಮಹೇಶ್ವರ) ಸೃಷ್ಟಿಯ ಸಂಕ್ಷಿಪ್ತ ಕತೆಯನ್ನು ಹೇಳುತ್ತೇನೆ. ಇದರಿಂದ ನಿನ್ನ ಎಲ್ಲಾ ಸಂದೇಹಗಳು ದೂರವಾಗುವುದು. ಬ್ರಹ್ಮಾ, ವಿಷ್ಣು, ಶಿವ ಈ ಮೂವರ ತಾಯಿಯು ದುರ್ಗಾದೇವಿ ಆಗಿದ್ದಾಳೆ ಹಾಗೂ ತಂದೆಯು ಜ್ಯೋತಿ ನಿರಂಜನ ಅಂದರೆ ಕಾಲಬ್ರಹ್ಮನಾಗಿದ್ದಾನೆ.**

**ನಾನು (ಕಬೀರ್) ಇಬ್ಬರನ್ನು ಯೌವ್ವನಾವಸ್ಥೆಯಲ್ಲಿ ಸೃಷ್ಟಿಸಿದೆ. ಮೊದಲು ಜ್ಯೋತಿ ನಿರಂಜನ (ಕಾಲ ಬ್ರಹ್ಮ)ನನ್ನು ಅದರ ನಂತರ ದುರ್ಗಾದೇವಿಯನ್ನು (ಅಷ್ಟಾಂಗಿ) ಸೃಷ್ಟಿಸಿದೆ, ಸ್ವಲ್ಪ ಸಮಯದ ನಂತರ ಜ್ಯೋತಿ ನಿರಂಜನನು ದೇವಿಯ ಸೌಂದರ್ಯವನ್ನು ನೋಡಿ ಆಕರ್ಷಿತನಾಗಿ ದುರ್ಗಾದೇವಿಯ ಜೊತೆ ಭೋಗವಿಲಾಸದಲ್ಲಿ ತೊಡಗಿದನು. ಅಷ್ಟಾಂಗಿ ದೇವಿಯು 3 ಪುತ್ರರಿಗೆ ಜನ್ಮ ನೀಡಿದಳು. ಅವರಿಗೆ ಬಹ್ಮಾ, ವಿಷ್ಣು, ಶಿವ ಎಂದು ಹೆಸರಿಡಲಾಯಿತು.**

ಈ ಮೂವರು ಪುತ್ರರು ತಮ್ಮ ತಂದೆ ಕಾಲನಿರಂಜನ ಮಾಡುತ್ತಿದ್ದ ಕೆಲಸವನ್ನು ಮಾಡುತ್ತಿದ್ದಾರೆ. ಜೀವದ ಸೃಷ್ಟಿ, ಪಾಲನೆ ಮತ್ತು ಸಂಹಾರದ ಕಾರ್ಯವನ್ನು ಮಾಡುತ್ತಿದ್ದಾರೆ. ಮಾನವರು ಈ ಮೂರು ದೇವರುಗಳಿಂದ ಪ್ರಭಾವಿತರಾಗಿ ಇವರನ್ನು ಸರ್ವಸ್ವ ಎಂದು ತಿಳಿದು ಇವರನ್ನೇ ಪ್ರಶಂಸಿಸುತ್ತಾ ಭಕ್ತಿ ಸಾಧನೆಯನ್ನು ಮಾಡುತ್ತಾರೆ. ಈ ಕಾರಣದಿಂದ ಎಲ್ಲಾ ಭಕ್ತರು ಮೋಸ ಹೋಗುತ್ತಿದ್ದಾರೆ. ಜೀವಿಗೆ ಪೂರ್ಣ ಪರಮಾತ್ಮನ ಜ್ಞಾನ ಹೇಗಾಗಲು ಸಾಧ್ಯ? ಏಕೆಂದರೆ ಕಾಲನಿರಂಜನನು ಇಡೀ ಜಗತ್ತಿಗೆ ಮೋಸ ಮಾಡಿದ್ದಾನೆ. ಇವನು ಒಂದು ಬ್ರಹ್ಮಾಂಡದಲ್ಲಿ ಸುಮ್ಮನೆ ಒಂದು ಜಾಗದಲ್ಲಿ ಕುಳಿತು ತನ್ನ ಯೋಗ ಮಾಯೆಯಿಂದ ಅಡಗಿಕೊಂಡಿದ್ದಾನೆ. ತನ್ನ ನಿಜವಾದ ರೂಪದಲ್ಲಿ ಯಾರ ಮುಂದೆಯೂ ಬರುವುದಿಲ್ಲ. ಗೀತೆಯ 7ನೇ ಅಧ್ಯಾಯದ 24–25 ನೇ ಶ್ಲೋಕದಲ್ಲಿ ಇದರ ಆಧಾರವಿದೆ.

ನಾನು ಯಾರಿಗೂ ಎಂದಿಗೂ ದರ್ಶನ ನೀಡುವುದಿಲ್ಲ. ಇದು ನನ್ನ ಅಚಲವಾದ ನಿಯಮ ಎಂದು ಪ್ರತಿಜ್ಞೆ ಮಾಡಿದ್ದಾನೆ. ಈ ಕಾರಣದಿಂದ ಬಹ್ಮಾ, ವಿಷ್ಣು, ಶಿವ ಈ ಮೂವರೂ ಪರಮಾತ್ಮನ ಪ್ರಾಪ್ತಿಗಾಗಿ ಸಾಧನೆ ಮಾಡುತ್ತಾರೆ. ಇವರಿಗೂ ಸಹ ತಮ್ಮ ತಂದೆಯ ದರ್ಶನವಾಗಿಲ್ಲ. ಇವರಿಗೂ ಸಹ ಈ ರಹಸ್ಯದ ಜ್ಞಾನವಿಲ್ಲ. ಹಾಗಾಗಿ ಇದನ್ನು ನಾನು ನಿನಗೆ ತಿಳಿಸುತ್ತಿದ್ದೇನೆ. ಈ ಕಾಲನಿರಂಜನನನ್ನು ಅಲಖ್ ನಿರಂಜನ್ ಎಂದು ಕರೆಯುತ್ತಾರೆ. ಇವನು ಒಬ್ಬ ದೊಡ್ಡ ಮೋಸಗಾರ. ಇವನು ದೇವಿಯ ಜೊತೆ ಅಸಭ್ಯವಾಗಿ ನಡೆದುಕೊಂಡನು. ಹಾಗಾಗಿ ಇವನಿಗೆ ಪ್ರತಿದಿನವೂ ಒಂದು ಲಕ್ಷ ಮಾನವರ ಶರೀರವನ್ನು ತಿನ್ನುವ ಹಾಗೂ 1.25 ಲಕ್ಷ ಮಾನವ ಶರೀರವನ್ನು ಸೃಷ್ಟಿಸುವ ಶಾಪವಿದೆ. ಇವನು ತನ್ನ ಮೂರು ಪುತ್ರರನ್ನು (ಬಹ್ಮಾ, ವಿಷ್ಣು, ಶಿವ) ಕೊಲ್ಲುತ್ತಾನೆ. ಇವರು ದುರ್ಗಾದೇವಿ ಮತ್ತು ಕಾಲಬ್ರಹ್ಮನ ಮೂವರ ಪುತ್ರರು. ಆದರೆ ತತ್ತ್ವಜ್ಞಾನವನ್ನು ತಿಳಿಯದ ಮೂರ್ಖ ವ್ಯಕ್ತಿಗಳು. ಈ ಮೂರು ದೇವರನ್ನು ಅಜರಾಮರ, ಅವಿನಾಶಿಗಳು ಮತ್ತು ಎಲ್ಲರಿಗೂ ಒಡೆಯರು ಎಂದು ತಿಳಿದು ಭಕ್ತರು ಮೋಸ ಹೋಗುತ್ತಿದ್ದಾರೆ.

ಅಕಾಲ ಪುರುಷ ಎಂದರೆ ಯಾರ ನಾಶವಾಗುವುದಿಲ್ಲವೋ ಅಂತಹ ಸತ್ಯಪುರುಷನ ಬಗ್ಗೆ ಯಾರಿಗೂ ಗೊತ್ತಿಲ್ಲ, ಇದುವರೆಗೂ ಅವರನ್ನು ಯಾರೂ ಪರೀಕ್ಷಿಸಿಲ್ಲ. ಕಾಲಪುರುಷ ಅಂದರೆ ಕ್ಷರಪುರುಷನನ್ನು (ನಶ್ವರ/ನಾಶವಾಗುವವನು) ಎಲ್ಲರು ಸ್ವೀಕರಿಸಿದ್ದಾರೆ. ಎಲ್ಲರೂ ಇವನನ್ನು ನಿರಾಕಾರ ಪರಮಾತ್ಮ ಎಂದಿದ್ದಾರೆ. ಆದರೆ ಆ ದಿವ್ಯ ಪುರುಷ (ಗೀತೆಯ 8ನೇ ಅಧ್ಯಾಯದ 3, 8, 9, 10, 20, 21, 22 ಹಾಗೂ ಗೀತೆಯ 18ನೇ ಅಧ್ಯಾಯದ 62, 18 ಮತ್ತು ಗೀತೆಯ 15ನೇ ಅಧ್ಯಾಯದ 1–4, 16–17 ರಲ್ಲಿ ಹೇಳಿರುವ ಪೂರ್ಣಬ್ರಹ್ಮ)ನನ್ನು ಯಾರು ಗುರುತಿಸುವುದಿಲ್ಲ. ಮುಗ್ಧ ಜನರು ಈ ಮೂರು ದೇವರುಗಳನ್ನು ಭಕ್ತಿಯಿಂದ ಕಂಡು ಇವರ ಅವತಾರಗಳನ್ನು (ರಾಮ, ಕೃಷ್ಣ, ಮುಂತಾದವರನ್ನು) ಇಡೀ ಪ್ರಪಂಚವು ಭಕ್ತಿಯಿಂದ ಪೂಜಿಸುತ್ತಿದೆ. ಆದರೆ ಇವರು ಮೋಕ್ಷವನ್ನು ನೀಡುವವರಲ್ಲ.

ಕಬೀರ್ ಪರಮೇಶ್ವರರು, 'ಹೇ ಧರ್ಮದಾಸ್, ಮೂರು ದೇವರುಗಳ ವಿಸ್ತೃತ ವರ್ಣನೆಯಿದೆ. ನಾನು ಕೂಗಿ ಕೂಗಿ ಹೇಳುತ್ತಿದ್ದೇನೆ. ಎಲ್ಲರಿಗೂ ಹೇಳುತ್ತಿದ್ದೇನೆ. ಈ ಎಲ್ಲಾ ಗುಣಗಳ ರಜೋಗುಣ ಬಹ್ಮಾ, ಸತೋಗುಣ ವಿಷ್ಣು ಮತ್ತು ತಮೋಗುಣ ಶಿವ ಇವರ ಭಕ್ತಿಯಲ್ಲಿ ಇಡೀ ಪ್ರಪಂಚವು ಮುಳುಗಿದೆ. ಪೂರ್ಣ ಪರಮಾತ್ಮನ ನಿಜನಾಮವನ್ನು ಅಂದರೆ ನಿಜವಾದ ನಾಮ ಮಂತ್ರದ ಹೊರತು ಭವಸಾಗರವನ್ನು ಹೇಗೆ ದಾಟಬಲ್ಲರು.?

ಕಬೀರ್, ತೀನ್ ದೇವ್ ಕೀ ಜೋ ಕರತೇ ಭಕ್ತಿ, ಉನಕೀ ಕಬಹೂ ನಾ ಹೋವೇ ಮುಕ್ತಿ|

ಅಂದರೆ ಕಬೀರ್ ಪರಮೇಶ್ವರರು ಈ 3 ಬ್ರಹ್ಮಾ, ವಿಷ್ಣು, ಶಿವ ದೇವರುಗಳನ್ನು ಯಾರು ಪೂಜಿಸುತ್ತಾರೆಯೋ ಅವರಿಗೆ ಎಂದೆಂದಿಗೂ ಮುಕ್ತಿ ದೊರೆಯುವುದಿಲ್ಲ ಎನ್ನುತ್ತಾರೆ.

ಗೀತೆಯ 7ನೇ ಅಧ್ಯಾಯದ 12–15ನೇ ಶ್ಲೋಕ ಮತ್ತು 20, 23ನೇ ಶ್ಲೋಕದಲ್ಲಿ ಇದರ ಆಧಾರವಿದೆ. ಯಾವ ಸಾಧಕರ ಜ್ಞಾನವು ಈ ಮೂರು ಗುಣಗಳ ಅಂದರೆ ರಜೋಗುಣ ಬಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ ಇವರಿಂದ ಸಿಗುವ ಕ್ಷಣಿಕ ಲಾಭಕ್ಕೆ ಮರುಳಾಗಿದ್ದಾರೋ, ಅವರು ರಾಕ್ಷಸ ಸ್ವಭಾವವನ್ನು ಪಡೆದಿರುವ ಮನುಷ್ಯರಲ್ಲಿ ನೀಚರಾದವರು ಹಾಗೂ ಕೆಟ್ಟ ಕರ್ಮವನ್ನು ಮಾಡುವ ಮೂರ್ಖರು. ಅವರು ನನ್ನ ಭಕ್ತಿಯನ್ನು ಮಾಡುವುದಿಲ್ಲ. ತನ್ನ ಭಕ್ತಿಯನ್ನೂ ಸಹ ಗೀತೆಯ ಜ್ಞಾನ ನೀಡುವವನು 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಅನುತ್ತಮ ಅಂದರೆ ನೀಚ ಭಕ್ತಿ ಎಂದು ಹೇಳಿದ್ದಾನೆ.

ಇದನ್ನೇ ಕಬೀರ್ ಪರಮಾತ್ಮರವರು ತತ್ವಜ್ಞಾನದಲ್ಲಿ ತಿಳಿಸಿದ್ದಾರೆ.

**'ಗೀತೆಯಲ್ಲಿ ಮೂರು ದೇವರುಗಳನ್ನು ಭಕ್ತಿ ಮಾಡದಿರುವ ಬಗ್ಗೆ ಸಿಗುವ ಆಧಾರ.'**

**ಪ್ರಶ್ನೆ 16 : ರಜೋಗುಣ ಬಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ ಇವರ ಪೂಜೆಯನ್ನು ಮಾಡಬೇಕೆ !**

ಉತ್ತರ : ಇಲ್ಲ.

ಪ್ರಶ್ನೆ 17 : ರಜೋಗುಣ ಬಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ ಇವರ ಪೂಜೆ ಮಾಡಬಾರದೆಂಬ ಯಾವ ಆಧಾರವಿದೆ?

ಉತ್ತರ : ಶ್ರೀಮದ್ಭಗವದ್ಗೀತೆಯ 7ನೇ ಅಧ್ಯಾಯದ 12-15ನೇ ಶ್ಲೋಕ, 20ರಿಂದ 23ನೇ ಶ್ಲೋಕ ಮತ್ತು 9ನೇ ಅಧ್ಯಾಯದ 23-24 ನೇ ಶ್ಲೋಕ 7ನೇ ಅಧ್ಯಾಯದಿಂದ 12-15ನೇ ಶ್ಲೋಕದಲ್ಲಿ ಯಾವ ವ್ಯಕ್ತಿಯು ರಜೋಗುಣನಾದ ಬ್ರಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವನ ಭಕ್ತಿಯನ್ನು ಮಾಡುತ್ತಾರೋ ಅವರು ರಾಕ್ಷಸ ಸ್ವಭಾವವನ್ನು ಹೊಂದಿ ಮನುಷ್ಯರಲ್ಲಿಯೇ ನೀಚರಾಗಿರುತ್ತಾರೆ ಹಾಗೂ ಕೆಟ್ಟ ಕೆಲಸವನ್ನು ಮಾಡುವ ಮೂರ್ಖರು. ಅವರು ನನ್ನನ್ನು ಭಜಿಸುವುದಿಲ್ಲ ಎಂದು ಹೇಳಿದೆ. ಹಾಗೂ ಗೀತೆಯ 7ನೇ ಅಧ್ಯಾಯದ 20-23ನೇ ಶ್ಲೋಕ ಮತ್ತು 9ನೇ ಅಧ್ಯಾಯದ 23-24ನೇ ಶ್ಲೋಕದಲ್ಲಿ ಇದನ್ನು ಹೇಳಲಾಗಿದೆ. ಹಾಗೂ ಕ್ಷರಪುರುಷ, ಅಕ್ಷರ ಪುರುಷ ಮತ್ತು ಪರಮ ಅಕ್ಷರ ಪುರುಷ ಇವರ ಬಗ್ಗೆ ಗೀತೆಯ 15ನೇ ಅಧ್ಯಾಯದ 16-17ನೇ ಶ್ಲೋಕದಲ್ಲಿ ವಿವರಣೆಯಿದೆ. ಇವರನ್ನು ಬಿಟ್ಟು ಬ್ರಹ್ಮಾ, ವಿಷ್ಣು, ಶಿವ ಇವರನ್ನು ಬೇರೆ ದೇವರುಗಳ ಜೊತೆ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ಮೇಲೆ 7 ಮತ್ತು 9ನೇ ಅಧ್ಯಾಯಗಳಲ್ಲಿ ತಿಳಿಸಿದ ಶ್ಲೋಕಗಳಲ್ಲಿ ಗೀತಾಜ್ಞಾನವನ್ನು ಬೋಧಿಸಿದಾತನು ಹೇಳಿದ್ದಾನೆ ಯಾವ ಸಾಧಕರು, ಯಾವುದೇ ಉದ್ದೇಶಕ್ಕಾಗಿಯಾದರೂ ಬೇರೆ ದೇವರುಗಳನ್ನು ಪೂಜಿಸುತ್ತಾರೋ, ಅವರನ್ನು ದೇವರೆಂದು ತಿಳಿದು ಭಜಿಸುತ್ತಾರೋ, ಆ ದೇವತೆಗಳಿಗೆ ನಾನು ಸ್ವಲ್ಪ ಶಕ್ತಿಯನ್ನು ಪ್ರದಾನ ಮಾಡಿದ್ದೇನೆ. ಆ ದೇವತೆಗಳನ್ನು ಭಜಿಸುವವರಿಗೆ ನನ್ನ ಮೂಲಕ ಕೊಡಲ್ಪಟ್ಟ ಶಕ್ತಿಯಿಂದ ಸ್ವಲ್ಪ ಪ್ರಯೋಜನವಾಗುತ್ತದೆ. ಆದರೆ ಅಲ್ಪ ಬುದ್ಧಿಯುಳ್ಳವರಿಗೆ ಆ ಫಲ ಕ್ಷಣಿಕವೆಂದು ತಿಳಿದಿಲ್ಲ. ದೇವತೆಗಳನ್ನು ಪೂಜಿಸುವವರು ದೇವತೆಗಳ ಲೋಕಕ್ಕೆ ಹೋಗುತ್ತಾರೆ. ಆದರೆ ನನ್ನ (ಕ್ಷರ ಪುರುಷ) ಭಕ್ತರು ನನ್ನನ್ನು ಪಡೆಯುತ್ತಾರೆ.

ಗೀತೆಯ 16ನೇ ಅಧ್ಯಾಯದ 23-24ನೇ ಶ್ಲೋಕದಲ್ಲಿ ಹೇಳಿರುವಂತೆ ಶಾಸ್ತ್ರ ವಿಧಿ ವಿಧಾನಗಳನ್ನು ಬಿಟ್ಟು ಯಾವ ಸಾಧಕನು ತನ್ನ ಮನಸ್ಸಿಗೆ ಬಂದಂತೆ ಆಚರಿಸುತ್ತಾನೋ ಅಂದರೆ ಯಾರು ದೇವತೆಗಳ ಪಿತೃಗಳ, ಯಕ್ಷರ, ಭೂತ ಪ್ರೇತಗಳನ್ನು ಪೂಜಿಸುತ್ತಾರೋ ಹಾಗೂ ಮನಸ್ಸಿಗೆ ಬಂದ ಮಂತ್ರಗಳ ಜಪವನ್ನು ಮಾಡುತ್ತಾರೋ ಅವರಿಗೆ ಯಾವ ಸುಖಗಳೂ ಲಭ್ಯವಾಗುವುದಿಲ್ಲ, ಯಾವ ಸಿದ್ಧಿಯೂ ಪ್ರಾಪ್ತವಾಗುವುದಿಲ್ಲ. ಯಾವ ಮೋಕ್ಷವೂ ದೊರೆಯುವುದಿಲ್ಲ. ಆದ್ದರಿಂದ "ಹೇ ಅರ್ಜುನ, ಕರ್ತವ್ಯ ಅಂದರೆ ಯಾವ ಭಕ್ತಿಯನ್ನು ಮಾಡಬೇಕು ಮತ್ತು ಅಕರ್ತವ್ಯ ಅಂದರೆ ಯಾವ ಭಕ್ತಿಯನ್ನು ಮಾಡಬಾರದು ಇವೆರಡರ ವ್ಯವಸ್ಥೆಯಲ್ಲಿ ಶಾಸ್ತ್ರವೇ ಆಧಾರ. ಗೀತೆಯ 17ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಅರ್ಜುನನು ಕೇಳುತ್ತಾನೆ. "ಹೇ ಕೃಷ್ಣ, (ಏಕೆಂದರೆ ಶ್ರೀಕೃಷ್ಣನೇ ಜ್ಞಾನವನ್ನು ತಿಳಿಸುತ್ತಿದ್ದಾನೆ ಎಂದು ಅರ್ಜುನನು ತಿಳಿದಿದ್ದನು) ಆದರೆ ಕೃಷ್ಣನ ಶರೀರದಲ್ಲಿ ಕಾಲಬ್ರಹ್ಮನು (ಕ್ಷರ ಪುರುಷ) ಪ್ರೇತದ ರೀತಿಯಲ್ಲಿ ಪ್ರವೇಶ ಮಾಡಿ ಜ್ಞಾನವನ್ನು ಹೇಳುತ್ತಿದ್ದಾನೆ. ಯಾವ ವ್ಯಕ್ತಿಯು ಶಾಸ್ತ್ರವಿಧಾನವನ್ನು ಬಿಟ್ಟು ಅನ್ಯ ದೇವತೆಗಳ ಪೂಜೆಯನ್ನು ಮಾಡುತ್ತಾರೆಯೋ ಅವರಿಗೆ ಗೀತೆಯ ಜ್ಞಾನವನ್ನು ಬೋಧಿಸಿದಾತನು ಹೀಗೆ ಉತ್ತರಿಸುತ್ತಾನೆ. ಸಾತ್ವಿಕ ವ್ಯಕ್ತಿಗಳು ದೇವರನ್ನು ಪೂಜಿಸುತ್ತಾರೆ. ರಾಜಸೀ ವ್ಯಕ್ತಿಗಳು ಯಕ್ಷ ಮತ್ತು ರಾಕ್ಷಸರನ್ನು ಪೂಜಿಸುತ್ತಾರೆ. ತಾಮಸಿ ವ್ಯಕ್ತಿಗಳು ಪ್ರೇತಗಳನ್ನು ಪೂಜಿಸುತ್ತಾರೆ. ಇದೆಲ್ಲ ಶಾಸ್ತ್ರ ವಿಧಾನವಲ್ಲದ ಕರ್ಮ. ನಂತರ ಗೀತೆಯ 17ನೇ ಅಧ್ಯಾಯದ 5-6ನೇ ಶ್ಲೋಕದಲ್ಲಿ ಹೇಳಲಾಗಿರುವುದೇನೆಂದರೆ ಯಾವ ಮನುಷ್ಯರು ಶಾಸ್ತ್ರ ವಿಧಾನವನ್ನು ಬಿಟ್ಟು ಕೇವಲ ಮನಸ್ಸಿಗೆ ಬಂದಂತೆ ಘೋರವಾದ ತಪಸ್ಸನ್ನು ಮಾಡುತ್ತಾರೋ ಅವರು ಡೊಂಗಿಗಳು. ಹಾಗೂ ಶರೀರದ ಕುಂಡಲಿಗಳಲ್ಲಿ ವಿರಾಜಮಾನವಾಗಿರುವ ಶಕ್ತಿಗಳನ್ನು ಮತ್ತು ನನ್ನನ್ನು ಉದಾಸೀನ ಮಾಡುವವರು, ರಾಕ್ಷಸ ಸ್ವಭಾವದವರು ಮತ್ತು ಅಜ್ಞಾನಿಗಳು ಎಂದು ತಿಳಿ.

ಸೂಕ್ಷ್ಮವೇದದಲ್ಲಿ ಪರಮೇಶ್ವರರು ಈ ರೀತಿ ಹೇಳಿದ್ದಾರೆ.

ಕಬೀರ್, ಮಾಯೀ ಮಸಾನೀ ಸೇಢ್ ಶೀತಲಾ ಭೈರವ್ ಭೂತ್ ಹನುಮಂತ್।

ಪರಮಾತ್ಮಾ ಸೇ ನ್ಯಾರಾ ರಹೈ, ಜೋ ಇನ್ಕೋ ಪೂಜಂತ್॥

ರಾಮ್ ಭಜೈ ತೋ ರಾಮ್ ಮಿಲೈ, ದೇವ್ ಭಜೈ ಸೋ ದೇವ್।

ಭೂತ್ ಭಜೈ ಸೋ ಭೂತ್ ಭವೈ, ಸುನೋ ಸಕಲ್ ಸುರ್ ಭೇವ್॥

ಇದರಿಂದ ತಿಳಿಯುವುದೇನೆಂದರೆ, ಬಹ್ಮಾ (ರಜೋಗುಣ), ವಿಷ್ಣು (ಸತೋಗುಣ), ಶಿವ (ತಮೋಗುಣ) ಇವರ ಪೂಜೆಯನ್ನು ಮಾಡಬಾರದು ಮತ್ತು ಇದರ ಜೊತೆಯಲ್ಲಿ ಭೂತ ಪ್ರೇತಗಳ, ಪಿತೃಗಳ (ಶ್ರಾದ್ಧಕರ್ಮ, ತಿಥಿ, ಪಿಂಡಪ್ರದಾನ ಕಾರ್ಯ ಇವೆಲ್ಲಾ

ಪ್ರೇತ ಪೂಜೆಯಾಗುತ್ತದೆ.) ಭೈರವ ಹಾಗೂ ಹನುಮಂತನ ಪೂಜೆಯನ್ನೂ ಮಾಡಬಾರದು.

## ("ಗೀತೆ ನಿನ್ನ ಜ್ಞಾನ ಅಮೃತ" ಎಂಬ ಪುಸ್ತಕದಿಂದ ಕೆಲವು ಅಂಶಗಳು)

ಧರ್ಮದಾಸರ ಪ್ರಶ್ನೆ **44** :– ಪೂರ್ಣಮೋಕ್ಷಕ್ಕಾಗಿ ಭಗವಂತನಾದ ವಿಷ್ಣು ಹಾಗೂ ಶಿವನ ಪೂಜೆಯನ್ನು ಬಿಡಬೇಕೇ?

ಜಿಂದಾ ಬಾಬಾರ ಉತ್ತರ :– ಈ ಪ್ರಭುಗಳನ್ನು ಬಿಡಬಾರದು, ಇವರ ಪೂಜೆಯನ್ನು ಮಾತ್ರ ಬಿಡಬೇಕು.

ಧರ್ಮದಾಸರ ಪ್ರಶ್ನೆ **45** :– ಹೇ ಗುರುಗಳೇ, ನನಗೆ ಅರ್ಥವಾಗಲಿಲ್ಲ. ವಿಷ್ಣು ಮತ್ತು ಶಿವನನ್ನು ಬಿಡಬಾರದು, ಪೂಜೆಯನ್ನು ಬಿಡಬೇಕು ಎಂದರೆ ಏನರ್ಥ. ನಾನು ಅತ್ಯಂತ ಅಜ್ಞಾನಿ. ಕೃಪೆಯಿಟ್ಟು ವಿಸ್ತಾರವಾಗಿ ತಿಳಿಸಿ ಹೇಳಿ.

ಜಿಂದಾ ಬಾಬಾರ ಉತ್ತರ :– ಹೇ ಧರ್ಮದಾಸರೇ, ನೀವು ಇವರ ಸಾಧನೆಯ ಶಾಸ್ತ್ರವಿಧಾನವನ್ನು ಬಿಟ್ಟು ನಿಮ್ಮ ಮನಸ್ಸಿಗೆ ಬಂದಂತೆ ಆಚರಣೆ ಮಾಡುತ್ತಿದ್ದೀರಾ. ಇದರಿಂದ ನಿಮಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಈ ದೇವತೆಗಳಿಂದ ಲಾಭ ಪಡೆಯುವ ಸಾಧನೆಯ ಮಂತ್ರವು ಬೇರೆ ಇದೆ. ಹೇಗೆಂದರೆ ಎಮ್ಮೆಗೆ ಎಮ್ಮೆ ಎಂದು ಕರೆದಾಗ ಅದು ನಿಮ್ಮ ಕಡೆ ನೋಡುವುದಿಲ್ಲ. ಅದರ ವಿಶೇಷ ಮಂತ್ರ 'ಹೇಯ್, ಹೇಯ್' ಎಂದಾಗ ಅದನ್ನು ಕೇಳಿದ ತಕ್ಷಣವೇ ಪ್ರಭಾವಿತಗೊಂಡು ಆ ಧ್ವನಿ ಮಾಡಿದವರ ಕಡೆ ಓಡೋಡಿ ಬರುತ್ತದೆ. ಇದೇ ರೀತಿ ಎಲ್ಲಾ ದೇವತೆಗಳಿಗೂ ನಿಜಮಂತ್ರ ಇದೆ. ಅದರಿಂದ ಅವರು ತಕ್ಷಣವೇ ಪೂರ್ಣಲಾಭವನ್ನು ನಿಮಗೆ ನೀಡುತ್ತಾರೆ. ಆ ನಿಜವಾದ ಮಂತ್ರವು ನನ್ನ (ಸಂತ ರಾಮ್‌ಪಾಲ್‌ದಾಸ್) ಬಳಿ ಇವೆ. ಪರಮೇಶ್ವರನು ಗುರುವಿನ ರೂಪದಲ್ಲಿ ನನಗೆ ಕೊಟ್ಟಿರುವ ಆ ಮಂತ್ರವನ್ನು ನೀವೆಲ್ಲರೂ ಪಡೆದುಕೊಳ್ಳಿ.

ಈ ಪ್ರಪಂಚವು ಒಂದು ವೃಕ್ಷವಿದ್ದಂತೆ ಎಂದು ಈಗಾಗಲೇ ನಿಮಗೆ ತಿಳಿಸಲಾಗಿದೆ. ಪರಮ ಅಕ್ಷರಪುರುಷನು ಇದರ ಬೇರು ಎಂದು ತಿಳಿಯಿರಿ. ಅಕ್ಷರಪುರುಷನನ್ನು ಕಾಂಡವೆಂದು ತಿಳಿದುಕೊಳ್ಳಿ. ಕ್ಷರಪುರುಷನು ದೊಡ್ಡ ದೊಡ್ಡ ಕೊಂಬೆಗಳಾದರೆ ಈ **3** ದೇವತೆಗಳು (ರಜೋಗುಣನಾದ ಬ್ರಹ್ಮಾ, ಸತೋಗುಣನಾದ ವಿಷ್ಣು ಮತ್ತು ತಮೋಗುಣನಾದ ಶಿವ) ಈ ಪ್ರಪಂಚವೆಂಬ ವೃಕ್ಷದ ಸಣ್ಣ ಸಣ್ಣ ರೆಂಬೆಗಳು ಹಾಗೂ ನೀವು ಎಲೆಗಳು ಎಂದುಕೊಳ್ಳಿ. ಎಲ್ಲಿಂದಲಾದರೂ ಮಾವಿನ ಗಿಡವನ್ನು ತಂದಿದ್ದರೆ ಗುಂಡಿ ತೋಡಿ ಆ ಗುಂಡಿಯಲ್ಲಿ ಅದರ ಬೇರನ್ನು ಇಟ್ಟು ಮಣ್ಣನ್ನು ಮುಚ್ಚುವಿರಿ ಹಾಗೂ ಬೇರಿನ ಬುಡಕ್ಕೆ ನೀರನ್ನು ಎರೆಯುವಿರಿ. ಆಗ ಅದು ಮಾವಿನ ಮರವಾಗಿ ಬೆಳೆಯುವುದು ಮತ್ತು ಅದರ ರೆಂಬೆಗಳಲ್ಲಿ ಹಣ್ಣುಗಳು ಬಿಡುವುದು. ಆದ್ದರಿಂದ ಮರದ ರೆಂಬೆಗಳನ್ನು ಯಾರೂ ಕಿತ್ತು ಹಾಕುವುದಿಲ್ಲ ಹಾಗೂ ಅವುಗಳನ್ನು ಬೇರಿನ ಜಾಗದಲ್ಲಿ ಗುಂಡಿಯಲ್ಲಿ ಮುಚ್ಚಿ ನೀರನ್ನು ಹಾಕುವುದಿಲ್ಲ. ಅದೇ ರೀತಿ ಪ್ರಪಂಚವೆಂಬ ವೃಕ್ಷದ ಬೇರು ಎಂದರೆ ಪರಮ ಅಕ್ಷರ ಬ್ರಹ್ಮನನ್ನು ಇಷ್ಟ ರೂಪದಲ್ಲಿ ಪ್ರತಿಷ್ಠಾಪನೆ ಮಾಡಿ ಪೂಜೆ ಮಾಡುವುದರಿಂದ ಶಾಸ್ತ್ರಕ್ಕೆ ಅನುಗುಣವಾಗಿ ಸಾಧನೆ ಮಾಡಿದಂತಾಗುತ್ತದೆ. ಅತ್ಯಂತ ಲಾಭವನ್ನು ನೀಡುತ್ತದೆ. ಈ ರೀತಿ ಮಾಡಿದ ಭಕ್ತಿಯ ಕರ್ಮಫಲವನ್ನು ಈ **3** ದೇವತೆಗಳು ಕರ್ಮಾನುಸಾರ ನೀಡುತ್ತಾರೆ. ಆದ್ದರಿಂದ ಇವರ ಪೂಜೆಯನ್ನು ಬಿಡಬೇಕು. ಆದರೆ ಈ ಮೂವರನ್ನು ಬಿಡುವಂತಿಲ್ಲ. ಗೀತೆಯ **3**ನೇ ಅಧ್ಯಾಯದಲ್ಲಿರುವ **8–15** ರವರೆಗಿನ ಶ್ಲೋಕದಲ್ಲಿ ಇದರ ಆಧಾರವಿದೆ. ಇಲ್ಲಿ ಹೀಗೆಂದು ಹೇಳಲಾಗಿದೆ:–

* ಹೇ ಅರ್ಜುನ, ನೀನು ಶಾಸ್ತ್ರಾನುಸಾರವಾಗಿ ಕರ್ಮವನ್ನು ಮಾಡು. ಅಂದರೆ ಶಾಸ್ತ್ರಗಳಲ್ಲಿ ಯಾವ ರೀತಿ ಇರಬೇಕೆಂದು ಹೇಳಲಾಗಿದೆಯೋ, ಆ ರೀತಿ ಭಕ್ತಿಯಿಂದಿರು. ಒಂದು ವೇಳೆ ಮನೆ ಬಿಟ್ಟು ಕಾಡಿಗೆ ಹೋಗಿ ನೀನು ಕರ್ಮ ಸನ್ಯಾಸಿಯಾದರೆ, ಒಂದೇ ಜಾಗದಲ್ಲಿ ಕುಳಿತು ಬಲವಂತವಾಗಿ ಸಾಧನೆ ಮಾಡಲು ಪ್ರಾರಂಭಿಸಿದಲ್ಲಿ, ನಿನ್ನ ಶರೀರದ ಪೋಷಣೆಯಾಗುವುದಿಲ್ಲ. ಆದ್ದರಿಂದ ಕರ್ಮವನ್ನು ಬಿಡದೆ ಕರ್ಮವನ್ನು ಮಾಡುತ್ತಲೇ ಭಕ್ತಿಯಿಂದ ಇರುವುದು ಶ್ರೇಷ್ಠ. (ಗೀತೆಯ **3**ನೇ ಅಧ್ಯಾಯದ **8**ನೇ ಶ್ಲೋಕ)

* ಯಾವ ಸಾಧಕನು ಶಾಸ್ತ್ರ ವಿಧಾನವನ್ನು ತ್ಯಜಿಸಿ ಮನಸ್ಸಿಗೆ ಬಂದಂತೆ ಆಚರಣೆ ಮಾಡುತ್ತಾನೋ ಅಂದರೆ ಶಾಸ್ತ್ರಾನುಸಾರವಾಗಿ ಭಕ್ತಿ ಕರ್ಮಗಳನ್ನು ಮಾಡದೇ ಬೇರೆ ಕರ್ಮಗಳನ್ನು ಮಾಡುತ್ತಾನೋ, ಆ ಮನುಷ್ಯನು ಕರ್ಮ ಬಂಧನದಲ್ಲಿ ಸಿಲುಕಿಕೊಂಡು ಜನನ ಮರಣ ಎಂಬ ಚಕ್ರದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ. ಆದ್ದರಿಂದ ಹೇ ಕುಂತಿಪುತ್ರನಾದ ಅರ್ಜುನನೇ, ಶಾಸ್ತ್ರವಿರುದ್ಧ ಭಕ್ತಿಯನ್ನು ಮಾಡುವುದರಿಂದ ದೂರವಿದ್ದು ಶಾಸ್ತ್ರಕ್ಕನುಗುಣವಾದ ಭಕ್ತಿಯನ್ನು ಮಾಡು. (ಗೀತೆಯ **3**ನೇ ಅಧ್ಯಾಯದ **9**ನೇ ಶ್ಲೋಕ)

* ಪ್ರಪಂಚದ ಸೃಷ್ಟಿಯನ್ನು ಮಾಡಿ ಆ ಪ್ರಜಾಪತಿಯು (ಕುಲದ ಒಡೆಯ) ಮೊಟ್ಟ ಮೊದಲನೆಯದಾಗಿ ಮನುಷ್ಯರನ್ನು ಸೃಷ್ಟಿಸಿ, ಯಜ್ಞ ಯಾಗಾದಿಗಳನ್ನು ಅಂದರೆ ಧಾರ್ಮಿಕ ಅನುಷ್ಠಾನದ ಜ್ಞಾನವನ್ನು ನೀಡುತ್ತಾ ಅವರಿಗೆ ಹೀಗೆಂದು ಹೇಳಿದನು.

ಶಾಸ್ತ್ರಾನುಕೂಲ ಕರ್ಮಗಳನ್ನು ಮಾಡುತ್ತಾ ಫಲಪ್ರಾಪ್ತಿಯನ್ನು ಪಡೆದುಕೊಳ್ಳಿ. ಈ ರೀತಿ ಶಾಸ್ತ್ರಾನುಸಾರವಾಗಿ ಮಾಡಿದ ಭಕ್ತಿಯು ನಿಮಗೆಲ್ಲಾ ಭೋಗ ಭಾಗ್ಯವನ್ನು ತಂದು ಕೊಡುತ್ತದೆ ಎಂದು ಹೇಳಿದನು. (ಗೀತೆಯ 3ನೇ ಅಧ್ಯಾಯ 10ನೇ ಶ್ಲೋಕ)

* ಈ ರೀತಿ ಶಾಸ್ತ್ರಾನುಸಾರದ ಭಕ್ತಿ ಅಂದರೆ ಪ್ರಪಂಚವೆಂಬ ಮರದ ಬೇರಿಗೆ (ಅಂದರೆ ಪರಮ ಅಕ್ಷರಬ್ರಹ್ಮ) ನೀರನ್ನು ಹಾಕುವುದರಿಂದ ಅಂದರೆ ಪೂಜೆ ಮಾಡುವುದರಿಂದ ಪ್ರಪಂಚವೆಂಬ ವೃಕ್ಷದ 3 ಗುಣಗಳೆಂಬ ರೆಂಬೆಗಳನ್ನು (ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು ಮತ್ತು ತಮೋಗುಣ ಶಿವ) ಪಡೆಯಬಹುದು. ಈ ದೇವರುಗಳು (ಈ ಮೂರೂ ದೇವರುಗಳು ಪ್ರಪಂಚವೆಂಬ ವೃಕ್ಷದ ರೆಂಬೆಗಳು) ನಿಮಗೆ ಕರ್ಮಾನುಸಾರ ಫಲಪ್ರಾಪ್ತಿಯನ್ನು ನೀಡುತ್ತಾರೆ. ಈ ರೀತಿ ಒಂದರಿಂದ ಇನ್ನೊಂದು ಮಟ್ಟಕ್ಕೆ ಏರುತ್ತಾ ಪರಮ ಕಲ್ಯಾಣ ಎಂದರೆ ಪೂರ್ಣ ಮೋಕ್ಷವನ್ನು ಪಡೆಯಬಹುದು. (ಗೀತೆಯ 3ನೇ ಅಧ್ಯಾಯದ 11ನೇ ಶ್ಲೋಕ)


* ಶಾಸ್ತ್ರವಿಧಾನದ ಅನುಸಾರವಾಗಿ ಮಾಡಿದ ಭಕ್ತಿಯು ಕರ್ಮಗಳ ಅಂದರೆ ಯಜ್ಞಗಳ ಮೂಲಕ ಸ್ತುತಿಸಿದ ದೇವರುಗಳ ಅಂದರೆ ಪ್ರಪಂಚವೆಂಬ ಮರದ ಬೇರು ಅಂದರೆ ಮೂಲ ದೇವರು (ಪರಮ ಅಕ್ಷರಬ್ರಹ್ಮನನ್ನು) ಇಷ್ಟ ರೂಪದಲ್ಲಿ ಪ್ರತಿಷ್ಠಾಪನೆ ಮಾಡಿ ಭಕ್ತಿ ಕರ್ಮದಿಂದ ಬೆಳೆದು ದೊಡ್ಡದಾದ ರೆಂಬೆಗಳನ್ನು (ಮೂರು ದೇವರುಗಳನ್ನು) ಪೂಜಿಸಿದಾಗ ಅವರು ನಿಮಗೆ ನಿಮ್ಮ ಕರ್ಮಾನುಸಾರ ನೀವು ಇಷ್ಟಪಟ್ಟ ಭೋಗ ಭಾಗ್ಯಗಳನ್ನು ನೀಡುತ್ತಾರೆ. ಹೇಗೆ ಮಾವಿನ ಮರದ ಬೇರಿಗೆ ನೀರನ್ನು ಹಾಕಿದರೆ ಅದರ ರೆಂಬೆಗಳು ಫಲವನ್ನು ನೀಡುತ್ತವೆಯೋ ಹಾಗೆಯೇ ಆ ವ್ಯಕ್ತಿಗೆ ಅವನ ಕರ್ಮಾನುಸಾರ ಫಲಪ್ರಾಪ್ತಿಯಾಗುವುದು. ಆದರೆ ಆ ವ್ಯಕ್ತಿಯು ಆ ದೇವರುಗಳ ಮೂಲಕ ಕೊಡಲ್ಪಟ್ಟ ಹಣದಿಂದ ದಾನಪುಣ್ಯಗಳನ್ನು ಮಾಡದಿದ್ದರೆ, ಅವನು ಪುನಃ ಶಾಸ್ತ್ರಾನುಸಾರ ಸಾಧನೆ ಮತ್ತು ಧರ್ಮ ಕರ್ಮಗಳನ್ನು ಮಾಡುವುದಿಲ್ಲವೋ, ಕೇವಲ ತನ್ನ ಹೊಟ್ಟೆಯನ್ನು ಹೊರೆಯುತ್ತಾನೋ ಹಾಗೂ ಎಲ್ಲವನ್ನು ತಾನೇ ಅನುಭೋಗಿಸುತ್ತಾನೋ, ಅವನು ದೊಡ್ಡ ಕಳ್ಳನೇ. (ಗೀತೆಯ 3ನೇ ಅಧ್ಯಾಯದ 12 ನೇ ಶ್ಲೋಕ)


* ಶಾಸ್ತ್ರಾನುಸಾರವಾಗಿ ಭಕ್ತಿಯ ವಿಧಿಯಲ್ಲಿ ಮೊಟ್ಟ ಮೊದಲು ಪರಮಾತ್ಮನಿಗೆ ನೈವೇದ್ಯವನ್ನು ಅರ್ಪಿಸಲಾಗುತ್ತದೆ. ಮೊದಲು ಪರಮ ಅಕ್ಷರಬ್ರಹ್ಮನನ್ನು ಇಷ್ಟ ರೂಪದಲ್ಲಿ ಪೂಜಿಸಿ, ನೈವೇದ್ಯವನ್ನು ಇಟ್ಟು ನಂತರ ಉಳಿದ ಭೋಜನವನ್ನು ಭಕ್ತರಿಗೆ ಹಂಚಬೇಕು. ಉಳಿದ ಅನ್ನವನ್ನು ಸತ್ಸಂಗದಲ್ಲಿ ಉಪಸ್ಥಿತರಿರುವ ಉಳಿದ ಭಕ್ತಾದಿಗಳು ಸೇವಿಸುತ್ತಾರೆ. ಏಕೆಂದರೆ ಪುಣ್ಯ ಮಾಡಿದ ಆತ್ಮಗಳು ಪರಮಾತ್ಮನಿಗಾಗಿ ಸಮಯ ಮಾಡಿಕೊಂಡು ಧಾರ್ಮಿಕ ಅನುಷ್ಠಾನಗಳಲ್ಲಿ ಭಾಗಿಯಾಗುತ್ತವೆ. ಆದ್ದರಿಂದ ಆ ಯಜ್ಞದಲ್ಲಿ ಉಳಿದ ಅನ್ನವನ್ನು ತಿನ್ನುವ ಸಂತ ಜನರು ಪಾಪಗಳಿಂದ ಮುಕ್ತರಾಗುತ್ತಾರೆ. ಯಾರು ಪಾಪಿಗಳೋ, ಯಾರು ತತ್ವದರ್ಶಿ ಸಂತರ ಸತ್ಸಂಗಕ್ಕೆ ಹೋಗುವುದಿಲ್ಲವೋ ಅವರಿಗೆ ಜ್ಞಾನ ಪ್ರಾಪ್ತಿಯಾಗುವುದಿಲ್ಲ. ಆ ಪಾಪಾತ್ಮರು ಕೇವಲ ತಮ್ಮ ಶರೀರವನ್ನು ಪೋಷಿಸುತ್ತಾರೆ. ಅದಕ್ಕಾಗಿ ಅಡುಗೆ ಮಾಡುತ್ತಾರೆ. ಅವರು ಪಾಪವನ್ನೇ ತಿನ್ನುತ್ತಾರೆ. ಏಕೆಂದರೆ ಊಟ ಮಾಡುವ ಮೊದಲು ಭಕ್ತರು, ಸಂತರು ಆದ ನಾವೆಲ್ಲ ಪರಮ ಅಕ್ಷರಬ್ರಹ್ಮನಿಗೆ ನೈವೇದ್ಯವನ್ನಿಡುತ್ತೇವೆ. ಇದರಿಂದ ಇಡೀ ಭೋಜನವು ಪವಿತ್ರ ಪ್ರಸಾದವಾಗಿ ಮಾರ್ಪಡುತ್ತದೆ. ಹೀಗೆ ಯಾರು ಮಾಡುವುದಿಲ್ಲವೋ ಅವರು ಪರಮಾತ್ಮನ ಕಳ್ಳರು, ಭಗವಂತನಿಗೆ ಅರ್ಪಿಸದೆ ಇರುವ ನೈವೇದ್ಯದ ಊಟ ಪಾಪದ ಊಟವಾಗುತ್ತದೆ. ಆದ್ದರಿಂದ ಶಾಸ್ತ್ರಕ್ಕೆ ಅನುಸಾರವಾಗಿ ಯಾರು ಧರ್ಮ ಕರ್ಮವನ್ನು ಮಾಡುವುದಿಲ್ಲವೋ, ಅವರು ಪಾಪದ ಮೂಟೆಯನ್ನು ಹೊತ್ತುಕೊಳ್ಳುವರು. (ಗೀತೆಯ 3ನೇ ಅಧ್ಯಾಯದ 13ನೇ ಶ್ಲೋಕ)

* ಎಲ್ಲಾ ಪ್ರಾಣಿಗಳು ಅನ್ನದಿಂದಲೇ ಹುಟ್ಟುತ್ತವೆ. ಅನ್ನವು ಮಳೆಯಿಂದಲೇ ಹುಟ್ಟುತ್ತದೆ. ಮಳೆಯು ಯಜ್ಞದಿಂದ ಅಂದರೆ ಶಾಸ್ತ್ರಾನುಸಾರವಾದ ಧಾರ್ಮಿಕ ಅನುಷ್ಠಾನದಿಂದ ಹುಟ್ಟುತ್ತದೆ. (ಗೀತೆಯ 3ನೇ ಅಧ್ಯಾಯದ 14ನೇ ಶ್ಲೋಕ)

* ಮೊದಲು ಎಲ್ಲಾ ಪ್ರಾಣಿಗಳು ಸನಾತನ ಪರಮಧಾಮದಲ್ಲಿ ಇರುತ್ತಿದ್ದವು. ಅಲ್ಲಿ ಯುವುದೇ ಕರ್ಮ ಮಾಡದಿದ್ದರೂ ಎಲ್ಲ ರೀತಿಯ ಸುಖವಿತ್ತು. ಇಲ್ಲಿಯ ಎಲ್ಲಾ ಜೀವಿಗಳು ತಮ್ಮ ತಮ್ಮ ತಪ್ಪುಗಳಿಂದ ಕ್ಷರಪುರುಷನ ಜೊತೆ ಬಂದರು. ಈಗ ಎಲ್ಲರಿಗೂ ಕರ್ಮದ ಫಲ ಪ್ರಾಪ್ತಿಯಾಗುತ್ತಿದೆ. ಕರ್ಮವು ಬ್ರಹ್ಮ ಅಂದರೆ ಕ್ಷರಪುರುಷನಿಂದ ಉತ್ಪನ್ನವಾಗಿವೆ. ಹಾಗೆಯೇ ಬ್ರಹ್ಮನನ್ನು ಅವಿನಾಶಿ ಪರಮಾತ್ಮನಿಂದ ಹುಟ್ಟಿದ್ದು ಎಂದು ತಿಳಿಯಬೇಕು. ಅಥರ್ವ ವೇದದ 4ನೇ ಖಂಡದ 1ನೇ ಅನುವಾಕದ 3ನೇ ಮಂತ್ರದಲ್ಲಿ ಸಹ ಇದರ ಬಗ್ಗೆ ಆಧಾರವಿದೆ. "ಬ್ರಹ್ಮ ಬ್ರಹ್ಮಣಃ ಉಜ್ಜಬಾರ್" ಅಂದರೆ (ಬ್ರಹ್ಮಣಃ) ಸಚ್ಚಿದಾನಂದ ಘನಬ್ರಹ್ಮ=ಪರಮ ಅಕ್ಷರ ಪುರುಷನು (ಬ್ರಹ್ಮ) ಬ್ರಹ್ಮನನ್ನು (ಉಜ್ಜಬಾರ) ಸೃಷ್ಟಿಸಿದನು.

ಸೂಚನೆ :– ಗೀತೆಯ 3ನೇ ಅಧ್ಯಾಯದ 14ನೇ ಶ್ಲೋಕದಲ್ಲಿ ಅಕ್ಷರ ಎಂಬ ಶಬ್ದದ ಅರ್ಥವು ಅವಿನಾಶಿ ಪರಮಾತ್ಮ ಎಂದು ಸರಿಯಾಗಿ ಬರೆದಿದೆ. ಆದರೆ ಎಲ್ಲಿ ಕ್ಷರಪುರುಷ, ಅಕ್ಷರ ಪುರುಷ ಮತ್ತು ಪರಮ ಅಕ್ಷರ ಪುರುಷನ ವರ್ಣನೆಯಿದೆಯೋ


ಗೀತಾ ಅಧ್ಯಾಯ ನಂ. 15
ಶಾಸ್ತ್ರದ ವಿರುದ್ಧ ಸಾಧನೆ ಅಂದರೆ
ಮನಮುಖಿಯಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)


ಶಾಸ್ತ್ರದ ಅನುಕೂಲ ಸಾಧನೆ ಅಂದರೆ
ನೇರವಾಗಿ ನೆಟ್ಟಿರುವ ಭಕ್ತಿ ರೂಪಿ ಸಸ್ಯ (ಗಿಡ)

ಅಲ್ಲಿ ಕ್ಷರಪುರುಷ ಮತ್ತು ಅಕ್ಷರಪುರುಷ ಇವರನ್ನೇ ನಾಶವಾಗುವವರು ಎಂದಿದ್ದಾರೆ. ಅಲ್ಲಿ ಅಕ್ಷರದ ಅರ್ಥವು ಸರಿಯಾಗಿ ಇದೆ. ಗೀತೆಯ 15ನೇ ಅಧ್ಯಾಯದ 16–17 ನೇ ಶ್ಲೋಕದಲ್ಲಿ ವರ್ಣಿಸಲಾದಂತೆ ಅಕ್ಷರದ ಅರ್ಥ ಅವಿನಾಶಿ ಪರಮಾತ್ಮ. ಏಕೆಂದರೆ ಸತ್ಯಪುರುಷ (ಅವಿನಾಶಿ ಪರಮಾತ್ಮ)ನಿಂದ ಬ್ರಹ್ಮನ ಉತ್ಪತ್ತಿ ಆಯಿತೆಂದು ಸೃಷ್ಟಿ ರಚನೆಯಿಂದ ಸ್ಪಷ್ಟವಾಗುತ್ತದೆ. ಇದರಿಂದ ಸಾಬೀತಾಗುವುದೇನೆಂದರೆ 'ಸರ್ವಗತಂ ಬ್ರಹ್ಮ' ಅಂದರೆ ಯಾವ ಪರಮಾತ್ಮನು ಎಲ್ಲಾ ಬ್ರಹ್ಮಾಂಡಗಳಿಗೆ ಹೋಗಬಲ್ಲನೋ, ಯಾರು ಎಲ್ಲರಿಗೂ ಒಡಯನೋ ಆ ಪರಮಾತ್ಮನು ಯಾವಾಗಲೂ ಯಜ್ಞಗಳಲ್ಲಿ ಅಂದರೆ ಧಾರ್ಮಿಕ ಅನುಷ್ಠಾನದಲ್ಲಿ ಪ್ರತಿಷ್ಠಾಪಿತನಾಗುತ್ತಾನೆ.

ಭಾವಾರ್ಥವೇನೆಂದರೆ, ಪರಮ ಅಕ್ಷರಬ್ರಹ್ಮನನ್ನು ಇಷ್ಟ ದೇವರ ರೂಪದಲ್ಲಿ ಪ್ರತಿಷ್ಠಾಪಿಸಿಕೊಂಡು ಧಾರ್ಮಿಕ ಅನುಷ್ಠಾನ ಅಂದರೆ ಯಜ್ಞಗಳನ್ನು ಮಾಡುವುದರಿಂದ ಹಾಗೂ ಶಾಸ್ತ್ರ ವಿಧಾನದಿಂದ ಕರ್ಮವನ್ನು ಮಾಡುವುದರಿಂದ ಸಾಧಕನಿಗೆ ಭಕ್ತಿಯ ಲಾಭವು ಸಿಗುತ್ತದೆ. ಹಾಗೂ ಮೋಕ್ಷ ಪ್ರಾಪ್ತಿಯಾಗುತ್ತದೆ.

ಮುಂದಿನ ಪುಟದಲ್ಲಿ ಚಿತ್ರಿಸಿರುವ ಚಿತ್ರವನ್ನು ನೋಡಿ. ಇದರಲ್ಲಿ ಮರದ ರೆಂಬೆಗಳನ್ನು ನೆಲದಲ್ಲಿ ಗುಂಡಿ ತೋಡಿ ಹೂಳಲಾಗಿದೆ. ಅಂದರೆ 3 ದೇವರುಗಳಲ್ಲಿ (ರಜೋಗುಣ ಬಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ) ಯಾರನ್ನಾದರೂ ಪೂಜೆ ಮಾಡಿದರೆ ಅಥವಾ ಶಾಸ್ತ್ರ ವಿಧಾನವನ್ನು ಬಿಟ್ಟು ಮನಸ್ಸಿಗೆ ಬಂದಂತೆ ಆಚರಣೆ ಮಾಡಿದರೆ ಗೀತೆಯ 16ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ತಿಳಿಸಿರುವಂತೆ ಅದು ವ್ಯರ್ಥ. ಯಾರು ಸರ್ವಗತಂ ಬ್ರಹ್ಮ ಅಂದರೆ ಪರಮ ಅಕ್ಷರಬ್ರಹ್ಮನ ಪೂಜೆ ಮಾಡಲಿಲ್ಲವೋ ಅವನನ್ನು ಇಷ್ಟ ರೂಪದಲ್ಲಿ ಪೂಜಿಸಲಿಲ್ಲವೋ ಅಂತಹ ಸಾಧಕನ ಸಾಧನೆಯು ವ್ಯರ್ಥ. ರೆಂಬೆಗಳಿಗೆ ನೀರು ಹಾಕಿದರೆ ಇಡೀ ಮರವು ಹಾಳಾಗುತ್ತದೆ. ಗೀತೆಯ 7ನೇ ಅಧ್ಯಾಯದ 12, 15, 20, 23ನೇ ಶ್ಲೋಕ ಹಾಗೂ 9ನೇ ಅಧ್ಯಾಯದ 23–24ನೇ ಶ್ಲೋಕದಲ್ಲಿ ಅನ್ಯದೇವರುಗಳ ಪೂಜೆ ಮಾಡುವುದನ್ನು ನಿಷೇಧಿಸಲಾಗಿದೆ.

ಇದೇ ಪುಸ್ತಕದ 21–22ನೇ ಪುಟಗಳಲ್ಲಿ ನೆಲದಲ್ಲಿ ಬೇರನ್ನು ನೆಟ್ಟು ಬೆಳೆಸಿದ ಗಿಡವನ್ನು ನೀವು ನೋಡಬಹುದು. ಅದು ಶಾಸ್ತ್ರವಿಧಾನವಾದ ಸಾಧನೆಯಾಗಿದೆ. ಇದರ ಆಧಾರವು ಗೀತೆಯ ಗ್ರಂಥದಲ್ಲಿದೆ.

ಆದ್ದರಿಂದ ಹೇ ಧರ್ಮದಾಸ! ಶ್ರೀ ಬಹ್ಮಾ, ವಿಷ್ಣು, ಶಿವನನ್ನು ಬಿಡಬಾರದು. ಆದರೆ ಇಷ್ಟರೂಪದಲ್ಲಿ ಮಾಡುತ್ತಿರುವ ಶಾಸ್ತ್ರವಿರುದ್ಧವಾದ ಪೂಜೆಯನ್ನು ಬಿಡಬೇಕು. ಆಗಲೇ ಭಕ್ತನಿಗೆ ಮೋಕ್ಷ ಸಿಗುವುದು.

**ಪ್ರಶ್ನೆ–46 : ಧರ್ಮದಾಸನ ಪ್ರಶ್ನೆ :–** ಹೇ ಗುರುಗಳೇ, ನೀವು ಮೂರೂ ದೇವರುಗಳ (ರಜೋಗುಣ ಬಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ) ಭಕ್ತಿಯನ್ನು ಮಾಡುವವರ ಪರಿಸ್ಥಿತಿಯು ಹೇಗಿರುವುದೆಂದು ಗೀತೆಯ 7ನೇ ಅಧ್ಯಾಯದ 12, 15, 20, 23ನೇ ಶ್ಲೋಕದವರೆಗೆ ಮತ್ತು 9ನೇ ಅದ್ಯಾಯದ 23–24ನೇ ಶ್ಲೋಕದಲ್ಲಿ ಆಧಾರ ಸಮೇತ ದೃಢೀಕರಿಸಿದ್ದೀರಿ. ಅದೇನೆಂದರೆ, (ರಜೋಗುಣ ಬಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ) ಇವರ ಭಕ್ತಿಯನ್ನು ಮಾಡುವವರು ರಾಕ್ಷಸ ಸ್ವಭಾವ ಹೊಂದಿರುವ ಮನುಷ್ಯರಲ್ಲೇ ನೀಚರು, ಕೆಟ್ಟ ಕೆಲಸ ಮಾಡುವವರು, ಮೂರ್ಖರು ಆಗಿರುತ್ತಾರೆ. ಅವರು ನನ್ನನ್ನು (ಗೀತೆಯ ಜ್ಞಾನವನ್ನು ಬೋಧಿಸಿದ ಬ್ರಹ್ಮ) ಭಜಿಸುವುದಿಲ್ಲ. ಬೇರೆ ದೇವತೆಗಳನ್ನು ಪೂಜಿಸುವವರ ಸುಖವು ಕ್ಷಣಿಕವಾಗಿರುತ್ತದೆ. ಅವರಿಗೆ ಸ್ವರ್ಗ ಪ್ರಾಪ್ತಿಯಾದರೂ ಸಹ ಬಹಳ ಬೇಗನೆ ಈ ಭೂಮಿಯ ಮೇಲೆ ಜನ್ಮ ತಳೆಯುತ್ತಾರೆ. ಹೇ ಮಹಾತ್ಮನೇ, ಕೃಪೆಯಿಟ್ಟು ಈ ಪ್ರಪಂಚದಲ್ಲಿ ನಡೆದಂತಹ ಒಂದು ನೈಜ ಘಟನೆಯನ್ನು ವಿವರಿಸಿ. ಇದರಿಂದ ನೀವು ಹೇಳಿದ ಮಾತುಗಳು ಸತ್ಯವೆಂದು ಪ್ರಮಾಣಿತವಾಗುತ್ತದೆ.

## "ಹಿರಣ್ಯಕಶ್ಯಪುವಿನ ಕಥೆ"

ಉತ್ತರಗಳು :– (ಜಗದೀಶನಾದ ಜಿಂದಾಬಾಬಾ ಕಬೀರರ)

1) ರಜೋಗುಣ ಬ್ರಹ್ಮಾನ ಉಪಾಸಕರ ಚರಿತ್ರೆ :– ಹಿರಣ್ಯಕಶ್ಯಪು ಎಂಬ ಬ್ರಾಹ್ಮಣ ರಾಜನಿದ್ದನು. ಅವನಿಗೆ ವಿಷ್ಣುವಿನ ಮೇಲೆ ಹೊಟ್ಟೆಕಿಚ್ಚು ಉಂಟಾಯಿತು. ಆಗ ಆ ರಾಜನು ರಜೋಗುಣ ಬ್ರಹ್ಮಾನನ್ನು ಪೂಜಿಸಿ ಪ್ರಸನ್ನಗೊಳಿಸಿದನು. ಬಹ್ಮಾನು ಪ್ರಸನ್ನನಾಗಿ ಹೇ ಭಕ್ತನೇ, ನಿನಗೇನು ಬೇಕು ಕೇಳು? ಎಂದನು. ಆಗ ಹಿರಣ್ಯಕಶ್ಯಪು ಈ ರೀತಿಯ ವರವನ್ನು ಬೇಡಿದನು. "ನಾನು ಬೆಳಿಗ್ಗೆಯೂ ಸಾಯಬಾರದು, ಸಂಜೆಯೂ ಸಾಯಬಾರದು, ಹೊರಗಡೆ ಸಾಯಬಾರದು. ಒಳಗಡೆ ಸಾಯಬಾರದು. ಹಗಲಲ್ಲೂ ಸಾಯಬಾರದು, ಇರುಳಲ್ಲೂ ಸಾಯಬಾರದು. ಆಕಾಶದಲ್ಲಿ ಸಾಯಬಾರದು, ಪಕ್ಷಿಗಳಿಂದಲೂ ಸಾಯಬಾರದು" ಎಂದಾಗ ಬ್ರಹ್ಮಾನು 'ತಥಾಸ್ತು' ಎಂದನು. ಆಗ ಹಿರಣ್ಯಕಶ್ಯಪು ತನ್ನನ್ನು ತಾನು ಅಮರನೆಂದು ತಿಳಿದನು. ಎಲ್ಲರಿಗೂ ತನ್ನ ಜಪವನ್ನು

ಮಾಡಬೇಕೆಂದು ತಿಳಿಸಿದನು. ಯಾರಾದರೂ ವಿಷ್ಣುವಿನ ಹೆಸರನ್ನು ಜಪಿಸಿದರೆ ಕೊಂದುಹಾಕುತ್ತಿದ್ದನು, ಆದರೆ ಅವನ ಮಗನಾದ ಪ್ರಹ್ಲಾದನು ವಿಷ್ಣುವನ್ನು ಪೂಜಿಸುತ್ತಿದ್ದನು. ಹಿರಣ್ಯಕಶುಪು ತನ್ನ ಮಗನನ್ನು ಬಹಳ ಹಿಂಸಿಸುತ್ತಿದ್ದನು. 'ಹೇ, ಧರ್ಮದಾಸರೇ, ಈ ಕತೆ ನಿಮಗೆ ತಿಳಿದೇ ಇದೆ. ಈ ಕತೆಯ ನೀತಿಯೆಂದರೆ, ರಜೋಗುಣ ಬ್ರಹ್ಮನ ಭಕ್ತನಾದ ಹಿರಣ್ಯಕಶ್ಯಪು ರಾಕ್ಷಸನನೆನಿಸಿಕೊಂಡನು. ಅವನು ನಾಯಿಯಂತೆ ಕೊಲ್ಲಲ್ಪಟ್ಟನು.

## "ರಾವಣ ಮತ್ತು ಭಸ್ಮಾಸುರನ ಕತೆ"

**2)** ತಮೋಗುಣ ಶಿವನ ಉಪಾಸಕರ ಕತೆ :– ಲಂಕೆಯ ರಾಜನಾದ ರಾವಣನು ತಮೋಗುಣ ಶಿವನನ್ನು ಪೂಜಿಸುತ್ತಿದ್ದನು. ಅವನು ತನ್ನ ಶಕ್ತಿಯಿಂದ 33 ಕೋಟಿ ದೇವತೆಗಳನ್ನು ಬಂಧಿಸಿಟ್ಟಿದ್ದನು. ನಂತರ ಸೀತಾದೇವಿಯನ್ನು ಅಪಹರಿಸಿದ್ದನು. ಅವನ ಗತಿ ಏನಾಯಿತೆಂದು ನಿಮಗೆಲ್ಲರಿಗೂ ಗೊತ್ತೇ ಇದೆ. ತಮೋಗುಣ ಶಿವನ ಉಪಾಸಕನಾದ ರಾವಣನು ರಾಕ್ಷಸನೆನಿಸಿಕೊಂಡನು. ಅವನ ಸರ್ವನಾಶವಾಯಿತು. ಎಲ್ಲರೂ ಅವನನ್ನು ನಿಂದಿಸಿದರು.

* ಮತ್ತೊಂದು ಉದಾಹರಣೆಯೆಂದರೆ ಭಸ್ಮಾಸುರನ ಕತೆ ಗೊತ್ತಿರಬಹುದು. ಭಸ್ಮಾಗಿರಿ ಎಂಬುವವನು ಶಿವನ ಭಕ್ತಿಯನ್ನು ಮಾಡುತ್ತಿದ್ದನು. ಅವನು 12ವರ್ಷಗಳ ಕಾಲ ಶಿವನ ಬಾಗಿಲಿನ ಬಳಿ ಕಾಲುಗಳನ್ನು ಮೇಲುಮಾಡಿ ತಲೆಯನ್ನು ಕೆಳಗಡೆ ಮಾಡಿ ಶೀರ್ಷಾಸನವನ್ನು ಮಾಡುತ್ತಾ, ತಪಸ್ಸನ್ನು ಆಚರಿಸಿದನು. ಒಂದು ದಿನ ಪಾರ್ವತಿಯು ಮಹಾದೇವನಿಗೆ ಹೀಗೆಂದಳು, "ಹೇ ಮಹಾದೇವ, ನಿಮ್ಮ ಭಕ್ತನು ಏನನ್ನು ಬೇಡುತ್ತಾನೋ, ಅದನ್ನು ಕೊಡಿ ಪ್ರಭು. ಆಗ ಶಿವನು, ಹೇ ಭಸ್ಮಾಗಿರಿಯೇ, ಏನು ಬೇಕು? "ಹೇ ಭಕ್ತನೇ, ನಿನಗೇನು ಬೇಕು ಕೇಳು. ನಿನ್ನ ಮೇಲೆ ನಾನು ಪ್ರಸನ್ನನಾಗಿದ್ದೇನೆ" ಎಂದನು. ಆಗ ಭಸ್ಮಾಗಿರಿಯು ಹೀಗೆಂದನು, "ಮೊದಲು ನೀವು ನನಗೆ ಒಂದು ವಚನವನ್ನು ಕೊಡಿ. ನಂತರ ನಾನು ವರವನ್ನು ಬೇಡುತ್ತೇನೆ". ಶಿವನು ಭಸ್ಮಾಗಿರಿಗೆ ವಚನವನ್ನು ಕೊಟ್ಟನು. ಆಗ ಭಸ್ಮಾಗಿರಿಯು ಹೀಗೆಂದನು, "ಹೇ ಪ್ರಭು, ನಿಮ್ಮ ಬಳಿ ಇರುವ ಭಸ್ಮಕಡಗವನ್ನು ನನಗೆ ಕೊಡಿ". ಶಿವನು ಆ ಭಸ್ಮಕಡಗವನ್ನು ಭಸ್ಮಗಿರಿಗೆ ಕೊಟ್ಟುಬಿಟ್ಟನು. ಆ ಭಸ್ಮಕಡಗವು ಭಸ್ಮಾಗಿರಿಯ ಕೈಸೇರಿದೊಡನೆ ಅವನು ಹೀಗೆಂದನು, "ಶಿವನೇ, ಎಚ್ಚರ! ನಿನ್ನನ್ನು ಭಸ್ಮ ಮಾಡಿ ಪಾರ್ವತಿಯನ್ನು ಹೆಂಡತಿಯಾಗಿ ಮಾಡಿಕೊಳ್ಳುವೆ". ಹೀಗೆ ಹೇಳುತ್ತಾ ಕೆಟ್ಟದ್ದಾಗಿ ನೋಡುತ್ತಾ ಶಿವನನ್ನೇ ಕೊಲ್ಲಲು ಅವನ ಬಳಿ ಓಡಿದನು. ಶಿವನು ಆ ದುಷ್ಟನ ಉದ್ದೇಶವನ್ನು ತಿಳಿದು ಓಡಲು ಆರಂಭಿಸಿದನು. ಮುಂದೆ ಮುಂದೆ ಶಿವ ಓಡುತ್ತಿದ್ದರೆ, ಅವನನ್ನು ಅಟ್ಟಿಸಿಕೊಂಡು ಭಕ್ತನು ಓಡುತ್ತಿದ್ದನು.

"ಹೇ ಧರ್ಮದಾಸರೇ, ಯೋಚಿಸಿ, ನಿಮ್ಮ ದೇವರಾದ ಶಿವನೇ ಅವಿನಾಶಿಯಾಗಿದ್ದರೆ ಮೃತ್ಯುವಿನ ಭಯದಿಂದ ಏಕೆ ಓಡಿ ಹೋಗುತ್ತಿದ್ದನು. ನೀವೇಕೆ ಅವನನ್ನು ಅಂತರ್ಯಾಮಿ ಎಂದು ಕರೆಯುವಿರಿ? ಒಂದು ವೇಳೆ ಶಿವನು ಅಂತರ್ಯಾಮಿ ಆಗಿದ್ದರೆ ಭಸ್ಮಾಗಿರಿಯ ಮನಸ್ಸಿನಲ್ಲಿರುವುದನ್ನು ಮೊದಲೇ ತಿಳಿದುಕೊಳ್ಳುತ್ತಿದ್ದನು. ಹಾಗಾಗಿ ಶಿವನು ಅಂತರ್ಯಾಮಿ ಅಲ್ಲವೆಂದು ಸಾಬೀತಾಗುತ್ತದೆ.

ಯಾವಾಗ ಭಗವಂತನಾದ ಶಿವನು ಮುಂದೆ ಮುಂದೆ ಓಡುತ್ತಿದ್ದನೋ ಆಗ ಭಸ್ಮಾಗಿರಿಯು ಅವನನ್ನು ಹಿಂಬಾಲಿಸುತ್ತಾ ಓಡುತ್ತಿದ್ದನು. ಆಗ ಭಗವಂತನಾದ ಶಿವನು ತನ್ನ ರಕ್ಷಣೆಗಾಗಿ ಪರಮೇಶ್ವರನನ್ನು ಕರೆದನು. ಅದೇ ಸಮಯದಲ್ಲಿ ಪರಮ ಅಕ್ಷರಬ್ರಹ್ಮನು ಪಾರ್ವತಿಯ ರೂಪವನ್ನು ತಾಳಿ ದುಷ್ಟನಾದ ಭಸ್ಮಾಗಿರಿಯ ಮುಂದೆ ನಿಂತು ಹೀಗೆಂದು ಹೇಳಿದನು, "ಹೇ ಭಸ್ಮಾಗಿರಿ, ಇಲ್ಲಿ ಬಾ. ನನ್ನ ಬಳಿ ಬಂದು ಕುಳಿತುಕೋ", ಭಸ್ಮಾಗಿರಿಗೆ ಶಿವನು ತನ್ನ ಹತ್ತಿರ ಬಂದರೆ ಉಳಿಗಾಲವಿಲ್ಲವೆಂದು ತಿಳಿದಿತ್ತು. ಅವನು ಪಾರ್ವತಿಗಾಗಿ ಈ ರೀತಿಯ ಉಪದ್ರವವನ್ನು ಮಾಡುತ್ತಿದ್ದನು. "ಹೇ ಧರ್ಮದಾಸ, ಈ ಕತೆ ನಿಮಗೂ ಗೊತ್ತಿದೆ. ಪಾರ್ವತಿಯ ರೂಪದಲ್ಲಿ ಪರಮಾತ್ಮನು ಭಸ್ಮಾಗಿರಿಯನ್ನು ನೃತ್ಯ ಮಾಡಿಸಿ ಭಸ್ಮ ಮಾಡಿಬಿಟ್ಟನು. ತಮೋಗುಣ ಶಿವನ ಭಕ್ತನಾದ ಭಸ್ಮಾಗಿರಿಯು ತನ್ನ ಕೆಟ್ಟ ಕರ್ಮಗಳಿಂದ ಭಸ್ಮಾಸುರ ಅಂದರೆ ಭಸ್ಮಾರಾಕ್ಷಸ ಎಂದು ಕರೆಯಲ್ಪಟ್ಟನು. ಆದ್ದರಿಂದ ಈ ಮೂರು ದೇವರುಗಳ ಭಕ್ತರನ್ನು ರಾಕ್ಷಸ ಸ್ವಭಾವ ಹೊಂದಿರುವ ಮನುಷ್ಯರಾದ ನೀಚರು, ಕೆಟ್ಟ ಕೆಲಸ ಮಾಡುವ ಮೂರ್ಖರು ಎಂದು ಕರೆಯಲಾಗಿದೆ.

## "ಹರಿದ್ವಾರದಲ್ಲಿ ಸಾಧುಗಳ ಹತ್ಯಾಕಾಂಡ"

**3)** ಈಗ ಸತೋಗುಣ ವಿಷ್ಣುವಿನ ಭಕ್ತರ ಕತೆಯನ್ನು ಹೇಳುತ್ತೇವೆ.

* ಒಮ್ಮೆ ಹರಿದ್ವಾರದಲ್ಲಿ ಕುಂಭಮೇಳವಿತ್ತು. ಆ ಸಮಯದಲ್ಲಿ ಮೂರು ಗುಣಗಳ ಉಪಾಸಕರು ತಮ್ಮ ತಮ್ಮ ಸಮುದಾಯದಲ್ಲಿ ಬಂದು ಸೇರುತ್ತಿದ್ದರು. ಗಿರಿ, ಪುರಿ, ನಾಗಾ-ನಾಥ್ ಇವರೆಲ್ಲ ಭಗವಂತನಾದ ತಮೋಗುಣ ಶಿವನ ಉಪಾಸಕರು. ವೈಷ್ಣವರು ಸತೋಗುಣ ವಿಷ್ಣುವಿನ ಉಪಾಸಕರು, ಹರಿದ್ವಾರದ ನದಿ ತೀರದಲ್ಲಿ ಪ್ರಥಮ ಸ್ನಾನ ಮಾಡಲು ಈ ಇಬ್ಬರು ಸಮುದಾಯದವರಾದ ನಾಗಸಾಧುಗಳು ಮತ್ತು ವೈಷ್ಣವರ ಮಧ್ಯೆ ಜಗಳ ಉಂಟಾಯಿತು. ಸುಮಾರು 25 ಸಾವಿರ ತ್ರಿಗುಣರು ಅಂದರೆ ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ ಇವರ ಭಕ್ತರು ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ಸತ್ತರು. ಒಬ್ಬರನ್ನೊಬ್ಬರು ಕೊಲೆ ಮಾಡಿದರು. ಕತ್ತಿ, ಚೂರಿಗಳಿಂದ ಒಬ್ಬರನ್ನೊಬ್ಬರು ತಿವಿದು ಸಾಯಿಸಿದರು. ಸೂಕ್ಷ್ಮ ವೇದದಲ್ಲಿ ಹೇಳಿರುವುದೇನೆಂದರೆ-

ತೀರ್ ತುಪಕ್ ತಲವಾರ್ ಕಟಾರೀ, ಜಮ್ ಧಡ್ ಜೋರ್ ಬಧಾವ್ಯೆಂ ಹೈಂ।
ಹರ್ ಪೈಡೀ ಹರ್ ಹೇತ್ ನಹೀಂ ಜಾನಾ, ವಹಾಂ ಜಾ ತೇಗ್ ಚಲಾವ್ಯೆಂ ಹೈಂ॥

ಕಾಟ್ಯೆಂ ಶೀಶ್ ನಹೀಂ ದಿಲ್ ಕರುಣಾ, ಜಗ್ ಮೆಂ ಸಾಧ್ ಕಹಾವ್ಯೆಂ ಹೈಂ।
ಜೋ ಜನ್ ಇನ್ಕೆ ದರ್ಶನ್ ಕೂಂ ಜಾವ್ಯೆಂ, ಉನಕೋ ಭೀ ನರಕ್ ಪಠಾವ್ಯೆಂ ಹೈಂ॥

ಹೇ ಧರ್ಮದಾಸ, ಮೇಲೆ ತಿಳಿಸಿದ ಸತ್ಯ ಘಟನೆಗಳಿಂದ ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು ಹಾಗೂ ತಮೋಗುಣ ಶಿವನ ಪೂಜೆ ಮಾಡುವವರನ್ನು ಗೀತೆಯ 7ನೇ ಅಧ್ಯಾಯದ 12-15ನೇ ಶ್ಲೋಕದಲ್ಲಿ ತಿಳಿಸಿರುವಂತೆ ರಾಕ್ಷಸ ಸ್ವಭಾವದವರು ಮನುಷ್ಯರಲ್ಲಿ ನೀಚ, ದುಷ್ಟ ಕರ್ಮವನ್ನು ಮಾಡುವ ಮೂರ್ಖರು ಎಂದು ಸಾಬೀತಾಗುತ್ತದೆ.

ಗುರುಗಳ ಬಾಯಿಂದ ಮೇಲೆ ತಿಳಿಸಿದ ಕತೆಗಳನ್ನು ಕೇಳಿ ಧರ್ಮದಾಸನ ತಲೆ ಸಿಡಿಯಲಾರಂಭಿಸಿತು. ಆದರೂ ಧೈರ್ಯ ತಂದುಕೊಂಡು ಧರ್ಮದಾಸನು ಹೀಗೆಂದನು, "ಹೇ ಪ್ರಭುಗಳೇ, ನೀವು ನನ್ನಂತಹ ಅಜ್ಞಾನಿ ಎಂಬ ಕುರುಡನಿಗೆ ಕಣ್ಣು ಕೊಟ್ಟಿರಿ. ಎಲ್ಲಾ ಕತೆಗಳನ್ನು ನಾನು ಕೇಳಿದ್ದೆ ಹಾಗೂ ಓದಿದ್ದೆ. ಆದರೆ ತಪ್ಪುದಾರಿಯಲ್ಲಿ ನಡೆಯುತ್ತಿದ್ದೇನೆ ಎಂದು ತಿಳಿದಿರಲಿಲ್ಲ. ನಿಮಗೆ ಕೋಟಿ ಕೋಟಿ ಪ್ರಣಾಮಗಳು. ನೀವು ನನ್ನಂತಹ ಪಾಪಿಯನ್ನು ನರಕದಿಂದ ಪಾರು ಮಾಡಿದಿರಿ".

ಧರ್ಮದಾಸನ ಪ್ರಶ್ನೆ 47 :- "ಹೇ ಗುರುಗಳೇ, ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ, ತಿಳಿಸಿರುವಂತೆ ತನ್ನ ಸಾಧನೆಯನ್ನು ಮಾಡುವುದರಿಂದ ಮುಂದೆ ಸಿಗುವ ಮೋಕ್ಷವು ಉತ್ತಮದ್ದಲ್ಲವೆಂದು ಗೀತೆಯನ್ನು ಬೋಧಿಸಿದಾತನು ಹೇಳಿದ್ದಾನೆ ಎಂದು ನೀವು ತಿಳಿಸಿರುವಿರಿ. ಇದನ್ನು ಸ್ವಲ್ಪ ಸ್ಪಷ್ಟವಾಗಿ ತಿಳಿಸುವ ಕೃಪೆ ಮಾಡಿ. ಯಾವುದಾದರೂ ಕತೆಯಿದ್ದರೆ ತಿಳಿಸಿ.

ಜಿಂದಾಬಾಬಾ ವೇಷಧಾರಿಯಾದ ಕಬೀರ್ ಪರಮೇಶ್ವರರ ಉತ್ತರ :-

ಗೀತೆಯ 2ನೇ ಅಧ್ಯಾಯದ 12ನೇ ಶ್ಲೋಕ, 4ನೇ ಅಧ್ಯಾಯದ 5 ಮತ್ತು 9ನೇ ಶ್ಲೋಕ, 10ನೇ ಅಧ್ಯಾಯದ 2ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ನೀಡಿದವನು (ಬ್ರಹ್ಮ) ಹೀಗೆಂದು ಹೇಳಿದ್ದಾನೆ. "ಹೇ ಅರ್ಜುನ, ನನ್ನ ಮತ್ತು ನಿನ್ನ ಅನೇಕ ಜನ್ಮಗಳು ಆಗಿ ಹೋಗಿವೆ. ಈ ವಿಷಯ ನಿನಗೆ ಗೊತ್ತಿಲ್ಲ. ಆದರೆ ನನಗೆ ಗೊತ್ತಿದೆ, ಗೀತೆಯ 15ನೇ ಅಧ್ಯಾಯದ 4ನೇ ಶ್ಲೋಕದಲ್ಲಿ ಹೇಳಿರುವಂತೆ, ತತ್ವದರ್ಶಿ ಸಂತನಿಂದ ತತ್ತ್ವಜ್ಞಾನವನ್ನು ಪಡೆದು ಪರಮೇಶ್ವರನ ಪರಮ ಪದದ ಅನ್ವೇಷಣೆಯನ್ನು ಮಾಡಬೇಕು. ಆಗ ಅಲ್ಲಿಗೆ ಹೋದ ನಂತರ ಸಾಧಕನು ಈ ಪ್ರಪಂಚಕ್ಕೆ ಮರಳಿ ಬರುವುದಿಲ್ಲ. ಯಾವ ಪರಮೇಶ್ವರನಿಂದ ಪ್ರಪಂಚವೆಂಬ ಮರದ ಪ್ರವೃತ್ತಿಯು ಪ್ರಾಪ್ತವಾಯಿತೋ ಅಂದರೆ ಯಾವ ಪರಮೇಶ್ವರನು ಇಡೀ ಪ್ರಪಂಚವನ್ನು ಸೃಷ್ಟಿಸಿದನೋ ಆ ಪರಮೇಶ್ವರನನ್ನು ಪೂಜಿಸು. ಗೀತೆಯ 18ನೇ ಅಧ್ಯಾಯದ 62ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ಬೋಧಿಸಿದವನು ಹೀಗೆಂದಿದ್ದಾನೆ.

ಹೇ ಅರ್ಜುನ, ನೀನು ಸರ್ವಭಾವದಿಂದ ಆ ಪರಮೇಶ್ವರನ ಆಶ್ರಯಕ್ಕೆ ಹೋಗು. ಆ ಪರಮೇಶ್ವರನ ಕೃಪೆಯಿಂದ ನೀನು ಪರಮ ಶಾಂತಿಯನ್ನು ಪಡೆಯುವೆ ಮತ್ತು ನಿನಗೆ ಸನಾತನ ಪರಮಧಾಮವು ಪ್ರಾಪ್ತಿಯಾಗುವುದು.

ಹೇ ಧರ್ಮದಾಸ, ಎಲ್ಲಿಯವರೆಗೆ ಜನನ ಮರಣಗಳಿರುವುದೋ ಅಲ್ಲಿಯವರೆಗೆ ಪರಮಶಾಂತಿಯಿರುವುದಿಲ್ಲ ಹಾಗೂ ಸನಾತನ ಪರಮಧಾಮದ ಪ್ರಾಪ್ತಿಯಾಗುವುದಿಲ್ಲ. ವಾಸ್ತವವಾಗಿ ಎಲ್ಲಿ ಜನನ ಮರಣಗಳು ಸಂಪೂರ್ಣವಾಗಿ ಕೊನೆಗೊಳ್ಳುವುದೋ ಅದನ್ನೇ ಪರಮಗತಿ ಎನ್ನುವರು. ಆದ್ದರಿಂದ ಗೀತೆಯ 7ನೇ ಅಧ್ಯಾಯದ 18ನೇ ಶ್ಲೋಕದಲ್ಲಿ ಗೀತೆಯ ಜ್ಞಾನವನ್ನು ಬೋಧಿಸಿದಾತನು ಹೀಗೆಂದಿದ್ದಾನೆ. 'ಯಾವ ಆತ್ಮಗಳು ಜ್ಞಾನಿ ಆತ್ಮಗಳೋ, ನನ್ನ ದೃಷ್ಟಿಯಲ್ಲಿ ಅವರೆಲ್ಲ ಒಳ್ಳೆಯವರು. ಬ್ರಹ್ಮನ ಸಾಧನೆಯ ಮಂತ್ರ 'ಓಂ' ಎಂದಾಗಿದೆ. ಇದರಿಂದ ಬ್ರಹ್ಮ ಲೋಕವು ಪ್ರಾಪ್ತಿಯಾಗುತ್ತದೆ'. ಗೀತೆಯ 8ನೇ ಅಧ್ಯಾಯದ 16ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ ಬ್ರಹ್ಮ ಲೋಕಕ್ಕೆ ಹೋದ ಸಾಧಕನು ಸಹ ಪುನಃ ಈ ಪ್ರಪಂಚಕ್ಕೆ ಮರಳಿ ಬರುತ್ತಾನೆ. ಆದ್ದರಿಂದ ಅವನಿಗೆ ಪರಮಶಾಂತಿಯು ಸಿಗುವುದಿಲ್ಲ. ಸನಾತನ ಪರಮಧಾಮವು ಪ್ರಾಪ್ತಿಯಾಗುವುದಿಲ್ಲ. ವೇದಗಳಲ್ಲಿ ವರ್ಣಿಸುವ ಸಾಧನೆಯಿಂದ

ಪರಮಾತ್ಮನ ಪ್ರಾಪ್ತಿಯಾಗುವುದಿಲ್ಲ. ಕೆಲವು ಸಿದ್ಧಿಗಳು ಪ್ರಾಪ್ತಿಯಾಗುತ್ತವೆ. ಇವುಗಳ ಮೂಲಕ ಋಷಿಗಳು ಚಮತ್ಕಾರಗಳನ್ನು ಮಾಡಿ ಕೆಲವರಿಗೆ ಹಾನಿಯನ್ನುಂಟು ಮಾಡಿ ಪ್ರಸಿದ್ಧರಾಗಿಬಿಡುತ್ತಾರೆ. ಕೊನೆಯಲ್ಲಿ ಪಾಪದ ಫಲವಾಗಿ 84ಲಕ್ಷ ಪ್ರಾಣಿಗಳ ಶರೀರದಲ್ಲಿ ಕಷ್ಟವನ್ನು ಅನುಭವಿಸುತ್ತಾರೆ. ಆದ್ದರಿಂದ ಬ್ರಹ್ಮ ಸಾಧನೆಯಿಂದ ಉಂಟಾಗುವ ಮೋಕ್ಷವು ಅಂದರೆ ಫಲಪ್ರಾಪ್ತಿಯು ನಿಕೃಷ್ಟಮಟ್ಟದ್ದು ಎಂದು ಹೇಳಲಾಗಿದೆ.

## "ಚುಣಕ ಋಷಿಯ ಮೂಲಕ ಮಾನಧಾತನನ್ನು ನಾಶಗೊಳಿಸಿದ ಕತೆ"

ಕಥಾಪ್ರಸಂಗ :– ಗೀತೆಯನ್ನು ಬೋಧಿಸಿದಾತನು (ಬ್ರಹ್ಮ) ಗೀತೆಯ 7ನೇ ಅಧ್ಯಾಯದ 16 ಮತ್ತು 17ನೇ ಶ್ಲೋಕದಲ್ಲಿ ಹೇಳಿರುವುದೇನೆಂದರೆ 4 ರೀತಿಯ ಭಕ್ತರು ನನ್ನನ್ನು ಭಕ್ತಿಯಿಂದ ಪೂಜಿಸುತ್ತಾರೆ.

1. ಆರ್ತರು (ಸಂಕಟವನ್ನು ಪರಿಹರಿಸುವುದಕ್ಕೋಸ್ಕರ)

2. ಅರ್ಥಾರ್ಥಿ (ಧನಲಾಭಕ್ಕಾಗಿ)

3. ಜಿಜ್ಞಾಸು (ಯಾರು ಜ್ಞಾನವನ್ನು ಪಡೆದು ವಾಚ್ಮೆಗಳಾಗುತ್ತಾರೋ)

4.ಜ್ಞಾನಿ (ಕೇವಲ ಮೋಕ್ಷ ಪ್ರಾಪ್ತಿಗಾಗಿ ಭಕ್ತಿಯಿಂದ ಇರುವುವರು)

ಇವರಲ್ಲಿ ಮೂವರನ್ನು ಬಿಟ್ಟು ನಾಲ್ಕನೆಯವರಾದ ಜ್ಞಾನಿಗಳನ್ನು ಗೀತೆಯನ್ನು ಬೋಧಿಸಿದಾತನು ತನ್ನ ಭಕ್ತರೆಂದು ಹೇಳಿದ್ದಾನೆ.

ಜ್ಞಾನಿಯ ವಿಶೇಷತೆ :– ಮನುಷ್ಯ ಜೀವನ ಕೇವಲ ಮೋಕ್ಷಪ್ರಾಪ್ತಿಗಾಗಿ ಇರುವುದು ಎನ್ನುವುದನ್ನು ಅರಿತವನೇ ನಿಜವಾದ ಜ್ಞಾನಿಯು. ಪೂರ್ಣ ಮೋಕ್ಷಕ್ಕಾಗಿ ಕೇವಲ ಒಬ್ಬ ಪರಮಾತ್ಮನನ್ನು ಮಾತ್ರ ಭಕ್ತಿಯಿಂದ ಕಾಣಬೇಕು ಎನ್ನುವ ಜ್ಞಾನವು ಸಹ ಅವನಿಗಿರುತ್ತದೆ. ಬೇರೆ ದೇವತೆಗಳ ರಜೋಗುಣ ಬ್ರಹ್ಮಾ, ಸತೋಗುಣ ವಿಷ್ಣು, ತಮೋಗುಣ ಶಿವ ಇವರನ್ನು ಭಕ್ತಿಯಿಂದ ಆರಾಧಿಸುವುದರಿಂದ ಪೂರ್ಣ ಮೋಕ್ಷವು ಸಿಗುವುದಿಲ್ಲ. ಆ ಜ್ಞಾನಿಯ ಆತ್ಮಗಳಿಗೆ ಗೀತೆಯ 4ನೇ ಅಧ್ಯಾಯದ 34ನೇ ಶ್ಲೋಕ ಮತ್ತು ಯಜುರ್ವೇದದ 40ನೇ ಅಧ್ಯಾಯದ 10ನೇ ಮಂತ್ರದಲ್ಲಿ ವರ್ಣಿಸಲಾದ ತತ್ವದರ್ಶಿ ಸಂತನು ಸಿಗದೆ ಇರುವ ಕಾರಣ ಅವರು ವೇದಗಳಿಂದ ಸ್ವತಃ ತೀರ್ಮಾನಕ್ಕೆ ಬಂದಿರುವುದೇನೆಂದರೆ ಬ್ರಹ್ಮನು ಸಮರ್ಥ ಪರಮಾತ್ಮನು. 'ಓಂ' ಎನ್ನುವುದು ಅವನ ಭಕ್ತಿಯ ಮಂತ್ರವು. ಈ ಸಾಧನೆಯಿಂದ ಯಾವ ಬ್ರಹ್ಮ ಲೋಕವು ಪ್ರಾಪ್ತಿಯಾಗುವುದೋ ಇದೇ ಮೋಕ್ಷ ಎಂದು ತಿಳಿದಿದ್ದಾರೆ.

ಜ್ಞಾನಿಯ ಆತ್ಮಗಳು ಪರಮಾತ್ಮನ ಪ್ರಾಪ್ತಿಗಾಗಿ ಹಠಯೋಗವನ್ನು ಮಾಡಿದವು. ಒಂದೇ ಜಾಗದಲ್ಲಿ ಕುಳಿತು ಘೋರ ತಪಸ್ಸನ್ನು ಮಾಡಿದವು. 'ಓಂ' ಎಂಬ ನಾಮದ ಜಪವನ್ನು ಮಾಡಿದವು. ಆದರೆ ವೇದಗಳಲ್ಲಿ, ಭಗವದ್ಗೀತೆಯಲ್ಲಿ ಹಠಯೋಗ ಮಾಡುವವರನ್ನು, ಘೋರ ತಪಸ್ಸನ್ನು ಆಚರಿಸುವವರನ್ನು ಮೂರ್ಖರು, ಅಹಂಕಾರಿಗಳು, ರಾಕ್ಷಸರು ಎಂದು ಕರೆಯಲಾಗಿದೆ. ಗೀತೆಯ 3ನೇ ಅಧ್ಯಾಯದ 4ನೇ ಶ್ಲೋಕದಿಂದ 9ನೇ ಶ್ಲೋಕದವರೆಗೆ, 16ನೇ ಅಧ್ಯಾಯದ 17ರಿಂದ 20ನೇ ಶ್ಲೋಕದವರೆಗೆ ಮತ್ತು 17ನೇ ಅಧ್ಯಾಯದ 1ರಿಂದ 6ನೇ ಶ್ಲೋಕದವರೆಗೆ) ಇವರಿಗೆ ಹಠಯೋಗ ಮಾಡುವ ಪ್ರೇರಣೆ ಎಲ್ಲಿಂದ ಬಂತು? ಶ್ರೀದೇವಿ ಪುರಾಣದ (ಗೀತಾ ಪ್ರೆಸ್, ಗೋರಖ್‌ಪುರದಿಂದ ಪ್ರಕಾಶಿತಗೊಂಡ ಸಚಿತ್ರ ಪುಸ್ತಕ) 3ನೇ ಸ್ಕಂದದಲ್ಲಿ ಹೇಳಿರುವುದೇನೆಂದರೆ, ಬ್ರಹ್ಮಾನು ತನ್ನ ಮಗನಾದ ನಾರದನಿಗೆ ಹೀಗೆಂದು ಹೇಳಿದ್ದಾನೆ––"ಯಾವ ಸಮಯದಲ್ಲಿ ನನ್ನ ಸೃಷ್ಟಿಯಾಯಿತೋ ಆಗ ನಾನು ಕಮಲದ ಹೂವಿನ ಮೇಲೆ ಕುಳಿತಿದ್ದೆ. ಆಗ ತಪಸ್ಸು ಮಾಡು, ತಪಸ್ಸು ಮಾಡು ಎಂದು ಆಕಾಶವಾಣಿಯಾಯಿತು. ಒಂದು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದೆ.

ಹೇ ಧರ್ಮದಾಸ, ವೇದಗಳು ಬ್ರಹ್ಮಾನಿಗೆ ಸಮುದ್ರ ಮಂಥನದಲ್ಲಿ ಸಿಕ್ಕಿದ್ದವು. ಅವುಗಳನ್ನು ಓದಿದಾಗ ಯಜುರ್ವೇದದ 40ನೇ ಅಧ್ಯಾಯದ 15ನೇ ಮಂತ್ರದಲ್ಲಿ 'ಓಂ' ಎಂಬ ನಾಮಮಂತ್ರವು ಸಿಕ್ಕಿತ್ತು. ಜಪ ಮತ್ತು ಆಕಾಶವಾಣಿಯಿಂದ ಕೇಳಿದ ಹಠಯೋಗ (ಘೋರ ತಪಸ್ಸು) ಇವೆರಡನ್ನು ಸೇರಿಸಿ ಬ್ರಹ್ಮಾನು ಸ್ವತಃ ಜಪ ಮಾಡಲಾರಂಭಿಸಿದನು ಮತ್ತು ಇದನ್ನು ತನ್ನ ಸಂತಾನಕ್ಕೆ (ಋಷಿಗಳಿಗೆ) ತಿಳಿಸಿಕೊಟ್ಟನು. (ನಾಲ್ಕು ವೇದಗಳು ಮತ್ತು ಇವುಗಳ ಉಪಸಂಹಾರವಾದ ಶ್ರೀ ಭಗವದ್ಗೀತೆಯಲ್ಲಿ ಹಠಯೋಗ ಅಂದರೆ ಘೋರ ತಪಸ್ಸನ್ನು ಮಾಡುವವರನ್ನು ರಾಕ್ಷಸ, ಘೋರಕರ್ಮ ನರಾಧಮ ಅಂದರೆ ನೀಚವ್ಯಕ್ತಿ ಎಂದು ಕರೆಯಲಾಗಿದೆ. ಗೀತೆಯ 16ನೇ ಅಧ್ಯಾಯದ 17–20ರ ಶ್ಲೋಕದವರೆಗೆ ಮತ್ತು 17ನೇ ಅಧ್ಯಾಯದ 1ರಿಂದ 6ನೇ ಶ್ಲೋಕದಲ್ಲಿ ಇದರ ಆಧಾರವಿದೆ.) ಇಂಥಾ ಸಾಧನೆಯನ್ನು ಜ್ಞಾನಿಗಳಾದ ಋಷಿಜನರು ಮಾಡಲಾರಂಭಿಸಿದರು. ಅಂತಹ ಜ್ಞಾನಿಗಳಲ್ಲಿ ಒಬ್ಬರಾದ

ಚುಣಕ ಋಷಿಗಳ ಪ್ರಸಂಗವನ್ನು ನಾನು ತಿಳಿಸುತ್ತೇನೆ. ಇದರಿಂದ ನಿಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಸಿಗುವುದು.

ಚುಣಕ ಎಂಬ ಒಬ್ಬ ಋಷಿ ಇದ್ದನು. ಅವನು ಸಾವಿರಾರು ವರ್ಷಗಳವರೆಗೆ ಘೋರತಪಸ್ಸನ್ನು ಮಾಡಿದನು. 'ಓಂ' ಎಂಬ ಮಂತ್ರದ ಜಪ ಮಾಡಿದ್ದನು. ಇದು ಬ್ರಹ್ಮನನ್ನು ಪೂಜಿಸುವ ಭಕ್ತಿಯು, ನಾನು ಯಾವುದೇ ಸಾಧನೆ ಅಂದರೆ ವೇದಗಳಲ್ಲಿ ವರ್ಣಿಸಲಾಗಿರುವ ಯಜ್ಞಗಳಾದ ಜಪ ತಪಗಳನ್ನು ಮಾಡುವುದರಿಂದ ಯಾರಿಗೂ ದರ್ಶನ ನೀಡುವುದಿಲ್ಲ ಎಂದು ಬ್ರಹ್ಮನು ಪ್ರತಿಜ್ಞೆ ಮಾಡಿದ್ದನು. ಗೀತೆಯ **11**ನೇ ಅಧ್ಯಾಯದ **48**ನೇ ಶ್ಲೋಕದಲ್ಲಿ ಹೇ ಅರ್ಜುನ, ನನ್ನನ್ನು ನೀನು ಯಾವ ರೂಪದಲ್ಲಿ ದರ್ಶನ ಪಡೆದಿರುವೆಯೋ ಅಂದರೆ ನನ್ನ ಈ ಕಾಲರೂಪವನ್ನು ನೋಡಿದೆಯೋ ಅದೇ ನನ್ನ ಸ್ವರೂಪ. ಇದನ್ನು ವೇದಗಳಲ್ಲಿ ವರ್ಣಿಸಲಾಗಿರುವ ವಿಧಾನಗಳಿಂದ ನೋಡಲು ಸಾಧ್ಯವಿಲ್ಲ. ಅಥವಾ ಯಾವುದೇ ಜಪದಿಂದ, ತಪದಿಂದ, ಯಜ್ಞದಿಂದ ಅಥವಾ ಯಾವುದೇ ಕ್ರಿಯೆಗಳಿಂದ ನೋಡಲು ಸಾಧ್ಯವಿಲ್ಲ. ಗೀತೆಯ ಜ್ಞಾನ ನೀಡುವವನು **7**ನೇ ಅಧ್ಯಾಯದ **24-25**ನೇ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, ಇದು ನನ್ನ ಅವಿನಾಶಿ ವಿಧಾನ ಅಂದರೆ ನಾನು ಎಂದಿಗೂ, ಯಾರಿಗೂ, ದರ್ಶನ ನೀಡುವುದಿಲ್ಲ. ನನ್ನ ಯೋಗಮಾಯೆಯಿಂದ ಅಡಗಿಕೊಂಡಿರುತ್ತೇನೆ. ಈ ಮೂರ್ಖಜನರು ನನ್ನನ್ನು ಮನುಷ್ಯ ರೂಪದಲ್ಲಿ ಅಂದರೆ ಕೃಷ್ಣನ ರೂಪದಲ್ಲಿ ಕಾಣುತ್ತಿದ್ದಾರೆ. ಇದನ್ನು ಗೀತೆಯ ಜ್ಞಾನ ನೀಡುವವನು ತನ್ನ ಎದುರಿಗೆ ನಿಂತಿದ್ದ ಸೈನ್ಯದ ಕಡೆಗೆ ಸಂಕೇತ ಮಾಡಿ ಹೇಳುತ್ತಿದ್ದನು. ಇದರ ಅರ್ಥವೇನೆಂದರೆ, ನಾನು ಎಂದಿಗೂ ಯಾರಿಗೂ ದರ್ಶನ ನೀಡುವುದಿಲ್ಲ. ಆದರೆ ಈಗ ನಿನ್ನ ಮೇಲೆ ಅನುಗ್ರಹವಿಟ್ಟು ನನ್ನ ಈ ರೂಪವನ್ನು ತೋರಿಸಿದ್ದೇನೆ.

ಭಾವಾರ್ಥ:- ವೇದಗಳಲ್ಲಿ ವರ್ಣಿಸಿರುವ ವಿಧಾನಗಳಿಂದ ಮತ್ತು ಈಗ ಪ್ರಚಲಿತವಿರುವ ಬೇರೆ ಕ್ರಿಯೆಗಳಿಂದ ಬ್ರಹ್ಮನ ಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ ಚುಣಕ ಋಷಿಗಳಿಗೆ ಸಿದ್ಧಿಗಳು ಪ್ರಾಪ್ತವಾಯಿತೇ ಹೊರತು ಪರಮಾತ್ಮನ ಪ್ರಾಪ್ತಿಯಾಗಲಿಲ್ಲ. ಋಷಿಗಳು ಅದನ್ನೇ ಭಕ್ತಿಯ ಅಂತಿಮ ಪ್ರಾಪ್ತಿ ಎಂದು ತಿಳಿದರು. ಯಾರ ಬಳಿ ಹೆಚ್ಚು ಹೆಚ್ಚು ಸಿದ್ಧಿಗಳು ಇರುತ್ತವೆಯೋ ಅವರನ್ನು ಶ್ರೇಷ್ಠರೆಂದು ಭಾವಿಸುತ್ತಿದ್ದರು. ಹೀಗಾಗಿ ಚುಣಕ ಋಷಿಯನ್ನು ಶ್ರೇಷ್ಠ ಎಂದು ಭಾವಿಸಲಾಗಿತ್ತು.

ಮಾನಧಾತ ಎಂಬ ಒಬ್ಬ ಚಕ್ರವರ್ತಿ ರಾಜನಿದ್ದನು. (ಇವನ ರಾಜ್ಯವು ಇಡೀ ಭೂಮಿಯನ್ನೇ ಆವರಿಸಿಕೊಂಡಿತ್ತು. ಇವನು ಇಂತಹ ಶಕ್ತಿಶಾಲಿ ರಾಜನಾಗಿದ್ದನು) ಇವನ ಬಳಿ **72** ಅಕ್ಷೋಹಿಣಿ (ಕೋಟಿ) ಸೈನ್ಯವಿತ್ತು. ಒಮ್ಮೆ ಈ ರಾಜನು ತನ್ನ ಅಧೀನರಾಜರಿಗೆ ಹೀಗೆಂದು ಹೇಳಿದನು, "ಯಾರಿಗೆ ತಮ್ಮ ಪರಾಧೀನತೆಯು ಒಪ್ಪಿಗೆಯಿಲ್ಲವೋ ಅವರು ನನ್ನ ಜೊತೆ ಯುದ್ಧ ಮಾಡಿ". ನಂತರ ಅವನು ಒಂದು ಕುದುರೆಯ ಕೊರಳಿಗೆ ಒಂದು ಪತ್ರವನ್ನು ಬರೆದು ಕಟ್ಟಿದನು. ಅದರಲ್ಲಿ ಹೀಗೆ ಬರೆದಿತ್ತು. 'ಯಾವ ರಾಜನಿಗೆ ಮಾನಧಾತ ರಾಜನ ಅಧೀನದಲ್ಲಿರುವುದು ಒಪ್ಪಿಗೆ ಇಲ್ಲವೋ ಅವರು ಈ ಕುದುರೆಯನ್ನು ಹಿಡಿದುಕೊಳ್ಳಬೇಕು. ಮತ್ತು ಯುದ್ಧಕ್ಕಾಗಿ ಸಿದ್ಧರಾಗಬೇಕು". ಭೂಮಿಯ ಮೇಲಿರುವ ಯಾವ ರಾಜನೂ ಕುದುರೆಯನ್ನು ಹಿಡಿದುಕೊಳ್ಳಲಿಲ್ಲ. ಕುದುರೆಯ ಜೊತೆ ಕೆಲವು ಸೈನಿಕರಿದ್ದರು. ಇವರೆಲ್ಲ ವಾಪಸ್ಸು ಬರುವ ಸಮಯದಲ್ಲಿ ಚುಣಕ ಋಷಿಗಳು ಹೀಗೆಂದು ಕೇಳಿದರು, "ಸೈನಿಕರೇ ನೀವೆಲ್ಲಿ ಹೋಗಿದ್ದಿರಿ". ಅವರಿಗೆ ಈ ರೀತಿ ಉತ್ತರ ಸಿಕ್ಕಿತು. "ಇಡೀ ಭೂಮಿ ಸುತ್ತಿ ಬಂದೆವು.

ಆದರೆ ಯಾರೂ ಕುದುರೆಯನ್ನು ಕಟ್ಟಿ ಹಾಕಲಿಲ್ಲ. ಯಾರೂ ರಾಜರ ಜೊತೆ ಯುದ್ಧ ಮಾಡಲು ಒಪ್ಪಿಕೊಳ್ಳಲಿಲ್ಲ". ಋಷಿಗಳೆಂದರು, "ನಾನು ಯುದ್ಧ ಮಾಡಲು ಒಪ್ಪಿದ್ದೇನೆ". ಆಗ ಸೈನಿಕರು, "ಅಯ್ಯೋ ಮೂರ್ಖ, ನಿನ್ನ ಬಳಿ ತಿನ್ನಲು ಏನೂ ಇಲ್ಲ. ನಿನ್ನಂತಹವನು ಮಾನಧಾತ ರಾಜನ ಜೊತೆ ಯುದ್ಧ ಮಾಡಲು ಸಾಧ್ಯವೇ?" ಆಗ ಚುಣಕ ಋಷಿಯು ಕುದುರೆಯನ್ನು ಹಿಡಿದು ಮರಕ್ಕೆ ಕಟ್ಟಿ ಹಾಕಿದನು. ಈ ವಿಷಯವು ಮಾನಧಾತ ರಾಜನಿಗೆ ತಿಳಿಯಿತು. ಆಗ ಅವನು **72** ಕೋಟಿ ಸೈನ್ಯವನ್ನು **4** ಭಾಗಗಳಾಗಿ ಮಾಡಿದನು. ಋಷಿಯ ಮೇಲೆ ಹಲ್ಲೆ ಮಾಡಲು ಒಂದು ಭಾಗವಾದ **18** ಕೋಟಿ ಸೈನ್ಯವನ್ನು ಕಳುಹಿಸಿದನು. ಇನ್ನೊಂದು ಕಡೆ ಚುಣಕ ಋಷಿಯು ತನ್ನ ಸಿದ್ಧಿಯಿಂದ **4** ಗೊಂಬೆಗಳನ್ನು ಮಾಡಿದನು. ಒಂದು ಗೊಂಬೆಯನ್ನು ಕಳುಹಿಸಿದಾಗ ಆ ಗೊಂಬೆಯು ರಾಜನ **18** ಕೋಟಿ ಸೈನ್ಯವನ್ನು ನಾಶ ಮಾಡಿತು. ರಾಜನು ಮತ್ತೊಂದು ತುಕಡಿ ಸೈನ್ಯವನ್ನು ಕಳುಹಿಸಿದನು. ಋಷಿಯು ಇನ್ನೊಂದು ಗೊಂಬೆಯನ್ನು ಬಿಟ್ಟನು. ಆಗ ಅದು ಇನ್ನೊಂದು **18** ಕೋಟಿ ಸೈನ್ಯವನ್ನು ನಾಶ ಮಾಡಿತು. ಈ ರೀತಿ ಚುಣಕ ಋಷಿಯು ಮಾನಧಾತ ರಾಜನ **72** ಕೋಟಿ ಸೈನ್ಯವನ್ನು ತನ್ನ **4** ಗೊಂಬೆಗಳಿಂದ ನಾಶ ಮಾಡಿದನು. ಈ ಕಾರಣದಿಂದ ಚುಣಕ ಮಹರ್ಷಿಯ ಖ್ಯಾತಿಯು ಭೂಮಿಯಲ್ಲೆಲ್ಲಾ ಹರಡಿತು. ಇದರಿಂದ ಅವನು ಸರ್ವಶ್ರೇಷ್ಠ ಋಷಿ ಎಂದೆನಿಸಿಕೊಂಡನು. ಹೇ ಧರ್ಮದಾಸ, (ಜಿಂದಾಬಾಬಾನ ರೂಪದಲ್ಲಿರುವ ಪರಮಾತ್ಮ ಹೇಳಿದನು) ಚುಣಕ ಋಷಿಯು ಯಾವ ಸೈನ್ಯವನ್ನು ಕೊಂದನೋ, ಆ ಪಾಪಕರ್ಮವು ಋಷಿಯ ಸಂಚಿತ ಕರ್ಮಗಳಲ್ಲಿ ಜಮೆಯಾಯಿತು. ಚುಣಕ ಋಷಿಯು ಯಾವ ಓಂ ಎಂಬ ಮಂತ್ರ ಜಪವನ್ನು ಮಾಡಿದನೋ, ಆ ಜಪದಿಂದ ಅವನು ಬ್ರಹ್ಮ ಲೋಕಕ್ಕೆ ಹೋಗುವನು.

ನಂತರ ಬ್ರಹ್ಮಲೋಕದ ಸುಖದ ಸಮಯವನ್ನು ಕಳೆದ ನಂತರ ಮತ್ತೆ ಭೂಮಿಯ ಮೇಲೆ ಹುಟ್ಟುವನು. ಅವನು ಹಠಯೋಗವನ್ನು ಮಾಡಿದ್ದರಿಂದ ಭೂಮಿಯ ಮೇಲೆ ರಾಜನಾಗಿ ಹುಟ್ಟುವನು. ಆದರೆ ಸತ್ತ ನಂತರ ಅವನಿಗೆ ನಾಯಿಯ ಜನ್ಮ ಪ್ರಾಪ್ತವಾಗುವುದು. ಯಾವ 72 ಕೋಟಿ ಸೈನ್ಯವು ಕೊಲ್ಲಲ್ಪಟ್ಟಿತೋ, ಅದರ ಪಾಪವನ್ನು ಅನುಭವಿಸಲೇ ಬೇಕು. ನಾಯಿಯ ತಲೆಯಲ್ಲಿ ಗಾಯವಾಗಿ, ಅದರಲ್ಲಿ ಹುಳುಗಳಾಗಿ ಹುಟ್ಟಿ ಆ 72 ಕೋಟಿ ಸೈನ್ಯವು ತನ್ನ ಸೇಡನ್ನು ತೀರಿಸಿಕೊಳ್ಳುವುದು. ಆದ್ದರಿಂದ ಹೇ ಧರ್ಮದಾಸ, ಗೀತೆಯ ಜ್ಞಾನವನ್ನು ಬೋಧಿಸಿದಾತನು (ಬ್ರಹ್ಮ) ತನ್ನ ಸಾಧನೆಯಿಂದ ಸಿಗುವ ಮುಕ್ತಿಯನ್ನು ಉತ್ತಮವಲ್ಲ ಎಂದು ಹೇಳಿದ್ದಾನೆ.

## "ಶಾಸ್ತ್ರಕ್ಕನುಗುಣವಾಗಿ ಭಕ್ತಿಯ ಸಾಧನೆಯನ್ನು ಮಾಡುವುದರಿಂದ ಭಕ್ತರಿಗೆ ಸಿಗುವ ಲಾಭ"

## "ಪರಮೇಶ್ವರನ ಸೀಮಾತೀತವಾದ ದಯೆ"

ಮುಕ್ತಿದಾತ ಸದ್ಗುರು ರಾಮ್‌ಪಾಲ್ ಮಹಾರಾಜರಿಗೆ ಜೈ

ನನ್ನ ಹೆಸರು ನೀಲೇಶ ದಾಸ್, ನನ್ನ ತಂದೆಯವರ ಹೆಸರು ವಾಲಪ್ಪ, ನಾನು ತಾ॥ ಜಿ॥ ಬಾಗಲಕೋಟ, ನೀಲಾನಗರ ಹಳ್ಳಿಯ ನಿವಾಸಿಯಾಗಿದ್ದೇನೆ. ನಾನು ಮೊದಲು ನನ್ನ ತಂದೆ-ತಾಯಿಯವರು ಶ್ರದ್ಧಾ, ಭಕ್ತಿ ಮತ್ತು ನಂಬಿಕೆಯಿಂದ ಪೂಜೆ ಪುನಸ್ಕಾರ ಮಾಡಿಕೊಂಡು ಬಂದಂತಹ ದೇವಾನು-ದೇವತೆಗಳ ಪೂಜೆ ಪುನಸ್ಕಾರಗಳನ್ನು ನಾನೂ ಶ್ರದ್ಧೆಯಿಂದ ಮಾಡಿಕೊಂಡು ಬರುತ್ತಿದ್ದೆ. ನಮ್ಮ ಊರಿನ ಹತ್ತೀರದಲ್ಲಿರುವ ಎಲ್ಲಮ್ಮ ದೇವಿಯ ಗುಡ್ಡಕ್ಕೂ ಹೋದೆ, ದಸರಾ ಉತ್ಸವದ ಸಮಯದಲ್ಲಿ ದುರ್ಗಾ ದೇವಿಗೆ ಅಲ್ಲಿ ನಡೆದುಕೊಂಡು ಬಂದಿರುವ ಆಚಾರ ವಿಚಾರ ಮತ್ತು ನಂಬಿಕೆಗಳ ಆಧಾರದ ಮೆರೆಗೆ ಮೇಕೆ ಬಲಿ ಕೊಡುತ್ತಿದ್ದೆ ಮತ್ತು ಪಾಂಡುರಂಗನ ಭಕ್ತಿ ಕೂಡ ಮಾಡುತ್ತಿದ್ದೆ. ಅದೇ ರೀತಿ ಎಲ್ಲಾ ದೇವರ ಭಕ್ತಿ ಮಾಡುತ್ತಿದ್ದೆನು. ಆದರೂ ಸಹ ನನ್ನ ಆರ್ಥಿಕ ಹಾಗೂ ಶಾರೀರಿಕ ತೊಂದರೆಗಳನ್ನು ಅನುಭವಿಸುತ್ತಿದ್ದೆನು ಮತ್ತು ಆ ಭಕ್ತಿಯನ್ನು ಮಾಡಿದ ದಿಸೆಯಿಂದ ನನ್ನ ತೊಂದರೆಗಳು ಸುದಾರಿಸುವ ಸ್ಥಿತಿಯನ್ನು ಕಂಡುಕೊಳ್ಳಲಿಲ್ಲ ಹಾಗೂ ಯಾವುದೆ ವ್ಯತ್ಯಾಸಗಳು ಕಂಡುಬರಲಿಲ್ಲ.

ನಾನು ಕಂಡ ಜೀವನದಲ್ಲಿ, ಒಂದು ದಿನ ಸಂತೋಷದಿಂದಿದ್ದರೆ ಹತ್ತು ದಿನ ದುಃಖದಲ್ಲಿರುತ್ತಿದ್ದೆ. ನಾನು ಯಾವುದೇ ಕೆಲಸ ಮಾಡಿದರು ಯಶಸ್ವಿ ಹೊಂದುತ್ತೀರಲಿಲ್ಲ. ಈ ಕಾರಣದಿಂದ ನಾನು ಕಾಲ ಕ್ರಮೇಣವಾಗಿ ನಶೆ ಮಾಡಲು ಆರಂಭಿಸಿದೆ. ಆ ದಿಸೆಯಲ್ಲಿ ಸಾರಾಯಿ, ಗುಟಖಾ, ತಂಬಾಕು, ಸಿಗರೇಟ್ ಇವೆಲ್ಲ ದುಷ್ಚಟಗಳು ನನ್ನಲ್ಲಿ ಮನೆ ಮಾಡಿಕೊಂಡಿದ್ದವು.

ನಾನು ಡ್ರೈವರ್ ಕೆಲಸ ಮಾಡುತ್ತಿದ್ದೆ. ಬರುವ ಅರ್ಧ ಸಂಬಳ ಈ ಚಟಗಳಿಗೆ ಖರ್ಚಾಗುತ್ತಿತ್ತು. ಸ್ವಲ್ಪ ದಿನದ ನಂತರ ನಾನು ಮದುವೆ ಮಾಡಿಕೊಂಡೆ. ನನ್ನ ಹೆಂಡತಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದಳು ಹೆರಿಗೆ ಆದ ನಂತರ ಕೆಲವು ಗಂಟೆಗಳ ನಂತರ ಆ ಮಗು ಸಾವನ್ನಪ್ಪಿತು. ಹೀಗೆ ಒಂದು ವರ್ಷದ ನಂತರ ಇನ್ನೊಂದು ಹೆಣ್ಣು ಮಗು ಹುಟ್ಟಿತು. ಆ ಕೂಸಿಗೆ ಉಸಿರಾಟದ ಸಮಸ್ಯೆ ಇತ್ತು. ನಾನು ನಂಬಿಕೊಂಡಿದ್ದ ದೇವರುಗಳಲ್ಲಿ, ಹೇ ದೇವರೇ ! ನನಗೆ ಈ ಭೂಮಿ ಮೇಲೆ ಏಕೆ ಹುಟ್ಟಿಸಿದ್ದೀರಿ. ನನಗೆ ದುಃಖ ಬಿಟ್ಟು ಏನೂ ಸಿಗುತ್ತಿಲ್ಲ. ಈ ಭೂಮಿ ಮೇಲೆ ನಿವು ಇದ್ದಿರೋ ಅಥವಾ ಇಲ್ಲವೋ? ಎಂದು ಇಡೀ ರಾತ್ರಿ ದುಃಖಿಸುತ್ತಿದ್ದೆ. ಕೆಲವು ದಿನದ ನಂತರ ನಾನು ಯಾವ ಲಾರ್‍ರಿಯನ್ನು ಓಡಿಸಿ ನನ್ನ ಕುಟುಂಬದ ಜೀವನ ಸಾಗಿಸುತ್ತಿದ್ನೋ ಅದೂ ಕಳುವಾಯ್ತು. ಸಮಯಕ್ಕೆ ಬೇರೆ ಕೆಲಸ ಸಿಗದೆ, ಜೀವನ ಸಾಗಿಸುವುದು ತುಂಬ ಕಷ್ಟಕರವಾಗಿ ದುಃಖದ ಬೆಟ್ಟವೇ ನನ್ನ ಮೇಲೆ ಬಿದ್ದಂತೆ ಭಾಸವಾಗುತ್ತಿತ್ತು.

ನನ್ನ ಗೆಳೆಯನಾದ ಉಮೇಶನು ಒಂದು ದಿನ ಸಾಧನಾ ಟಿವಿಯಲ್ಲಿ ಸಂತ ರಾಮ್‌ಪಾಲ್ ಮಹಾರಾಜ ರವರ ಪ್ರವಚನ ಕೇಳುತ್ತಿದ್ದನು ಟಿವಿ ಸ್ಕ್ರೀನ್ ಮೇಲೆ "ಜ್ಞಾನ ಗಂಗಾ" ಪುಸ್ತಕವನ್ನು ಉಚಿತವಾಗಿ ಪಡೆಯಲು ನಿಮ್ಮ ಪೂರ್ಣ ವಿಳಾಸ ಆಶ್ರಮನ ಮೊಬೈಲ್ ಸಂಖ್ಯೆಗೆ ಎಸ್.ಎಮ್.ಎಸ್ ಮಾಡಿ ಎಂದು ಒಂದು ಪಟ್ಟಿಯ ಮೇಲೆ ಬರೆದಿತ್ತು. ನಾನು ಮತ್ತು ಉಮೇಶನು ಪರಸ್ಪರ ನಮ್ಮ ವಿಳಾಸವನ್ನು ಎಸ್.ಎಮ್.ಎಸ್ ಮೂಲಕ ಸದರಿ ಮೊಬೈಲ್ ಸಂಖ್ಯೆಗೆ ಪುಸ್ತಕ ಕಳುಹಿಸಿಕೊಡಲು ಕೇಳಿಕೊಂಡೆವು. ಒಂದು ವಾರದಲ್ಲಿ ಪುಸ್ತಕ ನಮ್ಮ ಮನೆ ಬಾಗಿಲಿಗೆ ಬಂದು ತಲುಪಿತು. ಅದರಲ್ಲಿ ಬ್ರಹ್ಮಾ, ವಿಷ್ಣು, ಮಹೇಶ್ವರರ ಭಕ್ತಿ ಹೇಗೆ ಮಾಡಿದರೆ ಲಾಭವಾಗುವುದು, ಶ್ರೀಮದ್ಭಗವದ್ಗೀತೆ, ವೇದಗಳು ಮತ್ತು ಪುರಾಣಗಳಲ್ಲಿ ಪ್ರಮಾಣ ಸಹೀತ ಯಾವ ದೇವರ ಭಕ್ತಿ ಮಾಡಿದರೆ ನಾವು ನಮ್ಮ ಜೀವನದಲ್ಲಿ ಸಾರ್ಥಕತೆಯನ್ನು ಹೊಂದಿ ಮೋಕ್ಷ ಮಾರ್ಗ ಪ್ರಶಸ್ತವಾಗುವುದು ಎಂಬುವ ಜ್ಞಾನವನ್ನು ಸಂತ ರಾಮ್‌ಪಾಲ್ ಮಹಾರಜರು ಸವಿಸ್ತಾರವಾಗಿ ತಿಳಿಸಿರುವುದನ್ನು ಓದಿ ನನಗೆ ಜ್ಞಾನೋದಯುವಾಯಿತು.

ಭಗವದ್ಗೀತೆಯ 16ನೇ ಅಧ್ಯಾಯದ 23ನೇ ಶ್ಲೋಕದಲ್ಲಿ ಬರೆದಿದೆ ಯಾವ ವ್ಯಕ್ತಿಯು ಶಾಸ್ತ್ರಗಳಲ್ಲಿ ಬರೆದಿರುವುದನ್ನು ಬಿಟ್ಟು ಮನಬಂದಂತೆ ಆಚರಣೆ (ಪೂಜೆ) ಮಾಡುತ್ತಾರೋ ಅಂಥವರಿಗೆ ಸುಖ, ಸಿದ್ಧಿ ಮತ್ತು ಮೋಕ್ಷ ದೊರೆಯುವುದಿಲ್ಲವೆಂಬುವುದನ್ನು ಅರಿತು ನಾನು ಇಲ್ಲಿಯವರೆಗೆ ಮಾಡಿಕೊಂಡು ಬರುತ್ತಿದ್ದ ಭಕ್ತಿಯಿಂದ ಯಾವ ಲಾಭವು ಏಕೆ ಸಿಗುತ್ತೀರಲಿಲ್ಲವೆಂದು ತಿಳಿದುಕೊಂಡೆನು.

ಬ್ರಹ್ಮಾ, ವಿಷ್ಣು, ಮಹೇಶ್ವರ ಮತ್ತು ಇನ್ನಿತರ ಆದಿ ದೇವತೆಗಳ ಮೂಲ ಮಂತ್ರವನ್ನು ಪೂರ್ಣ ಗುರುವಿನಿಂದ ಪಡೆದು ನಿಯಮದಲ್ಲಿದ್ದು ಭಕ್ತಿ ಮಾಡಿದರೆ ಮನೆಯಲ್ಲಿ ಸುಖ–ಶಾಂತಿ ಮತ್ತು ಮೊಕ್ಷದ ಮಾರ್ಗ ಸಿಗುವುದೆಂದು "ಜ್ಞಾನ ಗಂಗಾ" ಪುಸ್ತಕದ ಮೂಲಕ ತಿಳಿಯಿತು ಮತ್ತು ಗುರವಿಲ್ಲದೆ ಮುಕ್ತಿ ದೊರೆಯುವುದಿಲ್ಲ ಎಂದು ತಿಳಿದ ಬಳಿಕ ಸಂತ ರಾಮ್‌ಪಾಲ್ ಗುರುಗಳ ಆಶೀರ್ವಚದನ ಪಡೆಯುವ ಇಚ್ಛೆ ಮನಸ್ಸಿನಲ್ಲಿ ಮೂಡಿತು. ಆರ್ಥಿಕ ತೊಂದರೆಗಳ ಕಾರಣಗಳಿದ್ದರೂ ಬೇರೆಯವರಿಂದ ಸಾಲ ಪಡೆದು ಸತ್ಯಲೋಕ ಆಶ್ರಮ ಬರವಾಲಾ, ಜಿಲ್ಲೆ–ಹಿಸಾರ್ (ಹರಿಯಾಣ)ಕ್ಕೆ ಹೋಗಿ ದಿನಾಂದಕ : 11–04–2014 ರಂದು ರಾತ್ರಿ 03:30 ಕ್ಕೆ ಗುರುಗಳಿಂದ ನಾಮದೀಕ್ಷೆ ಪಡೆದೆ. ಆಶ್ರಮದಲ್ಲಿ ಭಕ್ತಾದಿಗಳ ನಡೆ–ನುಡಿ, ಸಭ್ಯತೆ ಮತ್ತು ಆಶ್ರಮದ ವ್ಯವಸ್ಥೆ ಎಲ್ಲವನ್ನು ನೋಡಿದಾಗ ಅದೊಂದು ಮಿನಿ ಸತ್ಯಲೋಕ ಎನ್ನಿಸಿತು. ಗುರುಗಳಿಂದ ಆಶೀರ್ವಾದ ಪಡೆಯುವಾಗ ಅಳುತ್ತಾ ನನ್ನ ದುಃಖಗಳನ್ನು ವಿವರಿಸಿದೆ. ಆಗ ಗುರುಗಳು, ಪರಮಾತ್ಮ ಎಲ್ಲಾ ಸರಿಪಡಿಸುತ್ತಾನೆ ಭಕ್ತಿ ಮಾಡು ಮಗು ಎಂದು ಹೇಳಿ ಆಶೀರ್ವದಿಸಿದರು. ಆಶ್ರಮದಿಂದ ಅವತ್ತೆ ಸಾಯಂಕಾಲ ಮನೆಗೆ ಹಿಂದಿರುಗಿದೆ. ಗುರುಗಳು ಹೇಳಿದ ಪ್ರಕಾರ ನಿಯಮದಲ್ಲಿದ್ದು ಶ್ರದ್ಧೆಯಿಂದ ಭಕ್ತಿ ಮಾಡಲು ಆರಂಭಿಸಿದೆ. ಕೆಲವೇ ದಿನಗಳಲ್ಲಿ ಆರ್ಥಿಕ ಹಾಗೂ ಶಾರೀರಿಕ ಲಾಭ ಸಿಗಲು ಪ್ರಾರಂಭವಾಯಿತು. ನಾನು ಮೊದಲು ಮಾಂಸ, ಮೀನು, ಮೊಟ್ಟೆ ಎಲ್ಲವನ್ನು ತಿನ್ನುತ್ತಿದ್ದೆ ಹಾಗೂ ಸಾರಾಯಿ, ಗುಟಖಾ, ಸಿಗರೇಟ್‌ಗಳ ಚಟಗಳಿತ್ತು. ಗುರುಗಳು ತಿಳಿಸಿದ ಹಾಗೆ ಭಕ್ತಿ ಮಾರ್ಗದಲ್ಲಿ ಇವೆಲ್ಲ ವಿಷಕ್ಕೆ ಸಮಾನವೆಂದು ಅರಿತು ಅವೆಲ್ಲವನ್ನು ತಿನ್ನುವುದನ್ನು ಹಾಗೂ ಸೇವಿಸುವುದನ್ನು ಬಿಟ್ಟಿರುತ್ತೆನೆ ಹಾಗೂ ಅವೆಲ್ಲವನ್ನು ಯಾರಿಗೂ ತಂದು ಸಹ ಕೊಡುವುದಿಲ್ಲ ಮತ್ತು ಮುಟ್ಟುವುದಿಲ್ಲ. ಇಷ್ಟೆಲ್ಲ ಬದಲಾವಣೆ ಗುರುಗಳು ನೀಡಿದಂತಹ ನಾಮ ಜಪದಿಂದ ಹಾಗೂ ಅವರ ಆಶೀರ್ವಾದದಿಂದಾಯಿತೆಂದು ಅವರಿಗೆ ಕೋಟಿ–ಕೋಟಿ ಸಲ ಕೃತಘ್ನತೆಗಳನ್ನು ಅರ್ಪಿಸಿದರು ಸಾಲದು ಎಂದು ಹೇಳಲು ಇಚ್ಛಿಸುತ್ತೆನೆ.

ನಾನು ಮೊದಲು ಬೇರೆಯವರ ಬಳಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದೆ. ಇಗ ನನ್ನದೆ ಆದ ಒಂದು ಸ್ವಂತ ಗಾಡಿ ಇದೆ. ನನಗೆ ಎಲ್ಲಾ ತರಹದ ಸುಖ ಸಿಗಲು ಪ್ರಾರಂಭವಾದವು. ನನ್ನ ಹೆಂಡತಿಯ ಎರಡೂ ಕಾಲುಗಳು ಅಚಾನಕ್ಕಾಗಿ ಸ್ಪರ್ಶವಿಲ್ಲದಂತಾಯಿತು. ಆಗ ನಾನು ಸತ್ಯಲೋಕ ಆಶ್ರಮ ಬರವಾಲಾಗೆ ಫೋನ್ ಮಾಡಿ ಗುರುಗಳಲ್ಲಿ ಪ್ರಾರ್ಥಿಸಿಕೊಂಡಾಗ, ಗುರುಗಳು ನಿನ್ನ ಹೆಂಡತಿಗೆ ದೀಕ್ಷೆ ಕೊಡಿಸು ಪರಮಾತ್ಮ ದಯಮಾಡುತ್ತಾರೆ ಎಂದರು. ನನ್ನ ಕಾಲುಗಳು ಸರಿಯಾದರೆ ನಾನು ದೀಕ್ಷೆ ಪಡೆಯುವೆನೆಂದು ಅವತ್ತೆ ರಾತ್ರಿ ನನ್ನ ಹೆಂಡತಿ ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಳು. ಮುಕ್ತಿದಾತ ಸಂತ ರಾಮ್‌ಪಾಲ್ ಮಹಾರಾಜರವರ ದಯದಿಂದ ಬೆಳಿಗ್ಗೆ ಆಗುವಷ್ಟರಲ್ಲಿ ಕಾಲುಗಳು ಸರಿಯಾಗಿದ್ದವು. ಆಮೇಲೆ ನನ್ನ ಹೆಂಡತಿ ದೀಕ್ಷೆ ಪಡೆದಳು.

ಈಗ ನಾನು, ನನ್ನ ಹೆಂಡತಿ ಮತ್ತು ನನ್ನ ಐದು ವರ್ಷದ ಮಗಳು ಸೇರಿ ಮುಕ್ತಿದಾತ ಕಬೀರ್ ಪರಮೇಶ್ವರರ ಅವತಾರ ಸಂತ ರಾಮ್‌ಪಾಲ್ ಮಹಾರಾಜ ರವರು ನೀಡಿದಂತಹ ಭಕ್ತಿ ಮಾರ್ಗ ಅನುಸರಿಸಿ ಬಹಳ ಸುಖಕರ ಜೀವನ ಸಾಗಿಸುತ್ತಿದ್ದೇವೆ. ಎಲ್ಲ ಭಕ್ತ ಸಮಾಜರಲ್ಲಿ ಪ್ರಾರ್ಥಿಸಿಕೊಳ್ಳುವುದೆನೆಂದರೆ ಸ್ವತಃ ಕಬೀರ್ ಪರಮೇಶ್ವರರು ಸಂತ ರಾಮ್‌ಪಾಲ್ ಮಹಾರಾಜರವರ ರೂಪದಲ್ಲಿ ಬಂದು ವೇದಗಳು, ಶ್ರೀಮದ್ಭಗವದ್ಗೀತೆ, ಪುರಾಣ ಶಾಸ್ತ್ರಗಳಲ್ಲಿ ಉಲ್ಲೆಖವಿರುವ ನೀಜ ಭಕ್ತಿಸಾಧನೆಯ ತತ್ವ ಜ್ಞಾನವನ್ನು ತಿಳಿಸಿ, ಸತ್ಯ ಭಕ್ತಿ ಮಾಡಿಸಿ ನಮ್ಮನ್ನು ಅಮರಲೋಕ ಅಂದರೆ ಸತ್ಯಲೋಕಕ್ಕೆ ಕರೆದೊಯ್ಯಲು ಅವತರಿಸಿರುತ್ತಾರೆ. ಇವರಿಂದ ದೀಕ್ಷೆ ಪಡೆದು ನಿಮ್ಮ ಆತ್ಮ ಕಲ್ಯಾಣ ಮಾಡಿಸಿಕೊಳ್ಳಿರಿ.

–: ಸತ್ ಸಾಹೇಬ್ :–

ನೀಲೇಶ್ ದಾಸ್ 7972426806

## "ಅದ್ಭುತ ಚಮತ್ಕಾರ"

ನಾನು ಹಣಮಂತರೆಡ್ಡಿಯವರ ಮಗ ಶಿವಾರೆಡ್ಡಿ ಕರ್ನಾಟಕ ರಾಜ್ಯದ ಕಲಬುರ್ಗಿ ಜಿಲ್ಲೆಯ ಕಮಲಾಪೂರ ತಾಲ್ಲೂಕಿನ ಕಲಮೂಡ ಗ್ರಾಮದ ನಿವಾಸಿಯಾಗಿದ್ದೇನೆ. ನನಗೆ ನಾಲ್ಕು ವರ್ಷದಿಂದ ಬೆನ್ನು ನೋವು ಮತ್ತು ಕಿಡ್ನಿ ಸ್ಟೋನ್ ಹಾಗೂ ಕಾಲು ನೋವು ಇತ್ತು. ಸುಮಾರು 6 ತಿಂಗಳಿನಿಂದ ನನಗೆ ಬೆನ್ನಿನಿಂದ ಕಾಲಿನವರೆಗೆ ನೋವು ಅತೀ ಹೆಚ್ಚಾಗಿತ್ತು. ಡಾಕ್ಟರ್ ಹತ್ತಿರ ಹೋದಾಗ ಅವರು ಮೂರು ತಿಂಗಳುಗಳಿಗೆ ಆಗುವಷ್ಟು ಮಾತ್ರೆ ಕೊಟ್ಟರು. ಅದನ್ನೆಲ್ಲಾ ಸೇವಿಸಿದ ನಂತರವೂ ರಿಪೋಟಿನಲ್ಲಿ ಸ್ಲಿಪ್ ಡಿಸ್ಕ್

ಆಗಿರುವ ಕಾರಣದಿಂದ ಆಪರೇಷನ್ ಮಾಡಿಸಿಕೊಳ್ಳುವಂತೆ ವೈದ್ಯರು ಸಲಹೆ ನೀಡಿದ್ದರು. ಆ ವಿಷಯದಲ್ಲಿ ನಾನು ಬೆಂಗಳೂರಿಗೆ ಹೋಗಿ 'ಮಹಾವೀರ್ ಜೈನ್ ಆಸ್ಪತ್ರೆ' ಯಲ್ಲಿ ತಜ್ಞ ವೈದ್ಯರ ಸಲಹೆ ಪಡೆಯಲು ರೋಗಿಗಳ ಸಾಲಿನಲ್ಲಿ ಕುಳಿತುಕೊಂಡೆ. ಆಗ ನಾನು ದೊಡ್ಡ ಟಿವಿ ಸ್ಕ್ರಿನಿನ ಪರದೆಯ ಮೇಲೆ ಮೂಳೆಗಳನ್ನು ಕಟ್ಟು ಮಾಡಿ ಆಪರೇಷನ್ ಮಾಡುವುದನ್ನು ನೋಡಿ ಭಯಭೀತನಾಗಿ ಮುಂದಿನ ಸಲಹೆ ಪಡೆಯದೆ ಮರಳಿ ಊರಿಗೆ ಬಂದೆ. ಆಗ ನನ್ನ ಮಿತ್ರರು ಆದ ಡಾಕ್ಟರ್ ಮಠಪತಿಯವರ ಮೂಲಕ ಕಲಬುರ್ಗಿ ಯುನೈಟೆಡ್ ಹಾಸ್ಪಿಟಲನಲ್ಲಿ ಆಪರೇಷನ್ ಮಾಡಿಸಿಕೊಳ್ಳುವ ಸಿದ್ಧತೆಯನ್ನು ಮಾಡಿಕೊಂಡಿದ್ದೆನು. ಆದರೂ ನನಗೆ ಅವರು ಮಿತ್ರರಾದ ಕಾಣದಿಂದ ಖಾಸಗಿ ಆಸ್ಪತ್ರಯಲ್ಲಿ ಬಹಳ ಖರ್ಚು ವೆಚ್ಚ ತಗಲಬಹುದೆಂದು ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಮಾಡುತ್ತೆನೆಂದು ಸಲಹೆಯನ್ನು ನೀಡಿದರು. ಸದರಿ ಸಲಹೆಯಂತೆ ಐದು ದಿನಗಳ ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗುತ್ತೆನೆಂದು ಊರಿಗೆ ಮರಳಿ ಬಂದೆ. ಈ ರೀತಿ ಇರುವಾಗ ನನ್ನ ಗೆಳೆಯನಾದ ರಾಮರೆಡ್ಡಿಯವರು ಸಂತ ರಾಮ್‌ಪಾಲ್ ಮಹಾರಾಜರಿಂದ ಸಾವಿರಾರು ಜನರು ದೀಕ್ಷೆ ಪಡೆದು ಭಕ್ತಿ ಮಾಡುವುದರಿಂದ ಮಾರಣಾಂತಿಕ ರೋಗಗಳಿಂದ ಗುಣಮುಖರಾಗಿದ್ದಾರೆಂದು ಸುಮಾರು 6 ತಿಂಗಳುಗಳ ಹಿಂದೆ ಹೇಳಿದ ಮಾತು ಪದೆ ಪದೆ ನೆನಪಾಗುತ್ತಿತ್ತು. ನಾನು ಅವರ ಮಾತುಗಳಿಗೆ ಗಮನ ನೀಡುತ್ತಿರಲಿಲದಿದ್ದರು, ಅವರು ಒಂದು ದಿನ ಅಂಚೆಯ ಮೂಲಕ 'ಜ್ಞಾನ ಗಂಗಾ' ಪುಸ್ತಕವನ್ನು ನನಗೆ ಕಳುಹಿಸಿದರು. ಸದರಿ ಪುಸ್ತಕ ಈ ಮೊದಲೇ ನನ್ನ ಮನೆಯಲ್ಲಿ ಇತ್ತು. ಅದನ್ನು ಒಂದು ದಿನ ನಾನು ಕಮಲಾಪೂರದಲ್ಲಿ ಕೆಲಸಕ್ಕೆ ಹೊಗಿದ್ದಾಗ ಕೆಲ ಭಕ್ತರು 'ಜ್ಞಾನ ಗಂಗಾ' ಪುಸ್ತಕ ಸೇವೆ ಮಾಡುತ್ತೀರುವಾಗ ಅವರ ಬಳಿ ಹತ್ತು ರೂಪಾಯಿ ನೀಡಿ ಪುಸ್ತಕವನ್ನು ಪಡೆದುಕೊಂಡಿದ್ದೆ. ಅದೇ ಪುಸ್ತಕವನ್ನು ನನ್ನ ಸ್ನೇಹಿತರು ಕಳುಹಿಸಿದ್ದನ್ನು ನೋಡಿ, ಆ ಪುಸ್ತಕದಲ್ಲಿ ಏನಿರಬಹುದೆಂಬ ಕೂತುಹಲದಿಂದ ಪುಸ್ತಕವನ್ನು ಓದಲು ಆರಂಭಿಸಿದೆ. ಪುಸ್ತಕವನ್ನು ಸಂಪೂರ್ಣವಾಗಿ ಒದಲಾಗಿ, ಶ್ರೀ ಮದ್ಭಗವದ್ಗೀತೆ, ನಾಲ್ಕು ವೇದಗಳು, ಪುರಾಣಗಳು, ಉಪನಿಷದ್‌ಗಳು ಮತ್ತು ಇನ್ನಿತರೆ ಧರ್ಮದ ಪವಿತ್ರ ಸದ್ಗ್ರಂಥಗಳಲ್ಲಿ ಪೂರ್ಣ ಪರಮಾತ್ಮನ ಬಗ್ಗೆ ಒಬ್ಬರೆ ಎನ್ನುವ ಅರಿವು ಆಯಿತು. ಹಾಗೂ ಅವರನ್ನು ಆರಾಧಿಸುವುದರಿಂದ ದುಃಖಿಯನ್ನು ಸುಖಿಯನ್ನಾಗಿ ಮಾಡುವನೆಂದು ತಿಳಿಯಿತು. ಅವತ್ತಿನಿಂದ ನಾನು ಮಾಂಸ ಮತ್ತು ವ್ಯಸನ ಮಾಡುವುದಿಲ್ಲ. ನನ್ನ ತಾಯಿಯವರಿಗೂ ಕೂಡ ಬಹಳ ವರ್ಷಗಳಿಂದ ಮಾಟ ಮಂತ್ರ ಪೀಡೆಯಿಂದ ಬಳಲುತ್ತಿದ್ದರು. ಅವರು ಅಂಬಾ ಭವಾನಿ ಮಾತೆಯ ಭಕ್ತೆಯಾಗಿದ್ದಳು. ಅವರ ಹೆಸರಿನಲ್ಲಿ ಮಂಗಳವಾರ ಮತ್ತು ಶುಕ್ರವಾರ ಬಿಕ್ಷಾಟನೆ ಮಾಡಿ ತಯಿಗೆ ನೈವೆದ್ಯ ಸೇವೆ ಮಾಡುತ್ತಿದ್ದರು. ಆದರೂ ಪೀಡೆಯ ಕಾಟದ ಪ್ರಮಾಣ ಕಡಿಮೆಯಾಗಲಿಲ್ಲ. ಎಲ್ಲಾ ತಾಂತ್ರಿಕರ ಹತ್ತಿರ ಹೋದರು ಕೂಡ ನೋವು ಹಾಗೂ ತೊಂದರೆಗಳು ಹೆಚ್ಚಾಗುತ್ತಿತ್ತು. ನಮ್ಮ ಊರಲ್ಲಿದ್ದ ಮಾಣಿಕೇಶ್ವರ ದೇವಸ್ಥಾನಕ್ಕೆ, ಎಲ್ಲಮ್ಮ ದೇವಸ್ಥಾನ ಹಾಗೂ ಮನ ಲಕ್ಷ್ಮಿಗೆ ಕೂರಿಯನ್ನು ಮೂರು ವರ್ಷಕ್ಕೊಮ್ಮೆ ಬಲಿ ಅರ್ಪಿಸಿ ಪೂಜೆಯನ್ನು ಮಾಡಿದರೂ ಸಹ ನಮ್ಮ ತಾಯಿಯ ಶರೀರದಲ್ಲಿ ಸೂಜಿ ಚುಚ್ಚಿದ ಹಾಗೆ ಮತ್ತು ಬೆಂಕಿ ಹತ್ತಿದ ಹಾಗೆ ಕಾಲು ನೋವು ಹೆಚ್ಚಾಗಿತ್ತು. ಅವರು ಕೂಡ ಗುರುಗಳು ಹೇಳಿದ ಜ್ಞಾನಾರ್ಚನೆ ಮಾಡಿ ನಾಮೋಪದೇಶ ಪಡೆಯಲು ಮುಂದದರು. ದಿನಾಂಕ :– 25–08–2019 ರಂದು ನಮ್ಮ ಸಪರಿವಾರದೊಂದಿಗೆ ಹೈದ್ರಾಬಾದನಲ್ಲಿರುವ ಸದ್ಗುರುಗಳ ನಾಮೋಪದೇಶ ಕೇಂದ್ರಕ್ಕೆ ಹೋಗಿ ಗುರು ದೀಕ್ಷೆ ಪಡೆದುಕೊಂಡೆವು. ಸೇವೆ ಮಾಡುವುದರಿಂದ ನಮ್ಮ ಪಾಪ ಕರ್ಮಗಳು ಕಳೆಯುವುದೆಂದು ಕೆಲವು ಭಕ್ತಾದಿಗಳಿಂದ ತಿಳಿದುಕೊಂಡು ಒಂದು ತಿಂಗಳ ತನಕ ಸೇವೆ ಮಾಡುವುದಾಗಿ ಪರಮಾತ್ಮನಲ್ಲಿ ಮನಸ್ಸಿನಲ್ಲಿ ಬೇಡಿಕೊಂಡೆ. ಆಗ ನಾನು ಬೆಂಗಳೂರು ನಾಮೋಪದೇಶ ಕೇಂದ್ರಕ್ಕೆ ಫೋನ್ ಮಾಡಿ ಸೇವೆಗೆ ಬರುವುದಾಗಿ ಕೇಳಿದೆ. ಆಗ ಅವರು ಕರ್ನಾಟಕದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳಿಗೆ ಉಚಿತವಾಗಿ ಪುಸ್ತಕ ವಿತರಣೆಯ ಸೇವೆಯಲ್ಲಿ ಭಾಗವಹಿಸಲು ತಿಳಿಸಿದರು. ಸದರಿ ಸೇವೆ ಮಾಡುವ ಅವಕಾಶವನ್ನು ಸದುಪಯೋಗ ಪಡೆಯಲು ಸೇವೆಯಲ್ಲಿ ಭಾಗವಹಿಸಿದೆ. ಕೆಲವು ದಿನಗಳ ನಂತರ ನನ್ನ ಬೆನ್ನು ಮೂಳೆ ನೋವು ಹೇಗೆ ಮಾಯವಾಯಿತು ಎಂದು ನನಗೆ ತಿಳಿಯಲಿಲ್ಲ. ಇದೆಲ್ಲ ಮುಕ್ತಿದಾತ ಸಂತ ರಾಮ್‌ಪಾಲ್ ಮಹಾರಾಜರ ಕೃಪೆಯಿಂದಾಗಿದೆ ಎನ್ನುವುದರಲ್ಲಿ ಎರಡು ಮಾತಿರುವುದಿಲ್ಲ. ಒಂದು ತಿಂಗಳು ಹದಿನಾಲ್ಕು ದಿವಸ ಸೇವೆ ಮಾಡಿ ಊರಿಗೆ ಹೊಸ ಉಲ್ಲಾಸದಿಂದ ವಾಪಸ್ಸಾದೆ. ಈಗ ನಾವು ಸಪರಿವಾರ ಸಂತ ರಾಮ್‌ಪಾಲ್ ಮಹಾರಾಜರವರು ಹೇಳಿರುವ ಭಕ್ತಿಯನ್ನು ಮಾಡುತ್ತಾ ಸುಖವಾಗಿ ಜೀವನವನ್ನು ಸಾಗಿಸುತ್ತಿದ್ದೇವೆ

॥ ಸತ್ ಸಾಹೇಬ್ ॥

ಶಿವಾರೆಡ್ಡಿ ದಾಸ್– 9108900453

## "ಲೂಟಿಗೊಳಗಾದವರಿಗೆ ಆಧಾರ'

ನಾನು ಚೆತನಾ ದಾಸಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಹರಲಾಪೂರದ ನಿವಾಸಿಯಾಗಿದ್ದೇನೆ. ನನ್ನನ್ನು ದೇವರು

ಸಾವಿನ ದವಡೆಯಿಂದ ಬದುಕಿಸಿದ್ದಾರೆ. ಈ ಮೇಲೆ ತಿಳಿಸಿರುವ ನಾನು ಆತ್ಮ ಹತ್ಯೆ ಮಾಡಿಕೊಳ್ಳುವ ಮಾನಸಿಕ ಸ್ಥಿತಿಗೆ ಒಳಗಾಗಿದ್ದೆ ಮತ್ತು ಬದುಕೆಂಬುವುದು ಒಂದು ಅವತಾರವಾಗಿ ಪರಿಗಣಿಸಿತ್ತು. ಇವೆಲ್ಲಾ ಸಂಕಷ್ಟಗಳು ನನಗೆ ಮದುವೆ ಆದ ಮೇಲೆ ಶುರುವಾಗಿ ತುಂಬಾ ಹಿಂಸೆ ಅನುಭವಿಸಬೇಕಾಯಿತು. ನಾನು ಮೂಲತಃ ಬಿ.ಕಾಮ್ ಎಜುಕೇಷನ್ ಮಾಡಿದ್ದೆನೆ. ನನ್ನನ್ನು ಮಹಾರಾಷ್ಟ್ರದಲ್ಲಿ ಮದುವೆ ಮಾಡಿ ಕೊಟ್ಟರು. ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆ ಬಿಟ್ಟು ಯಾವುದೇ ಬೇರೆ ಭಷೆಗಳು ಬರುತ್ತಿರಲಿಲ್ಲ. ಮನೆಯಲ್ಲಿ ನನ್ನ ಗಂಡ ಮತ್ತು ಮಾವನವರಿಗೆ ಇಂಗ್ಲೀಷ ಭಾಷೆಯ ಅರಿವಿದ್ದ ಕಾರಣದಿಂದ ಅವರ ಜೋತೆಯಲ್ಲಿ ಮಾತನಾಡಬಹುದಿತ್ತು. ಆದರೆ ನನ್ನ ಅತ್ತೆ ಮತ್ತು ನಾದನಿ ಇಬ್ಬರು ನನಗೆ ಮರಠ ಭಾಷೆ ಬರದೇ ಇದ್ದ ಕಾರಣ ಅವರೊಡನೆ ಸಂಭಾಷಿಸಲು ಕಷ್ಟಕರವಾಗುತಿತ್ತು ಮತ್ತು ಈ ವರ್ತನೆಯಿಂದ ಅವರುಗಳು ನನಗೆ ಅವರುಗಳು ಮಾನಸಿಕವಾಗಿ ಹಿಂಸಿಸುತ್ತಿದ್ದರು ಆದ ಕರಣದಿಂದ ನಾನು ಹಲವಾರು ಬಾರಿ ಅಳುತ್ತಿದ್ದೆ. ನಾನು ನನ್ನ ತಾಯಿ ತಂದೆಗೆ ಫೋನ್ ಮಾಡಲೂ ಕೂಡ ಕಷ್ಟವಾದ ಸ್ಥತಿಯಲ್ಲಿ ಇಟ್ಟಿದರು. ನನ್ನ ಫೋನ್ ಕೂಡ ಕೊಡುತ್ತಿರಲಿಲ್ಲ. ನಮ್ಮದು ಸ್ವಂತ ಫ್ಯಾಕ್ಟರಿ ಇದ್ದು ಮತ್ತು ಮನೆಯಲ್ಲಿ ಕೆಲಸದವರು ಇದ್ದರು ನನಗೆ ಆ ಮನೆಯಲ್ಲಿ ಇರಲು ಕಷ್ಟವಾಗುತಿತ್ತು. ನನಗೆ ಗಂಡನ ಮನೆಯವರು ತತ್ವಜ್ಞಾನ ಇಲ್ಲದ ಕಾರಣ ತುಂಬ ಹಿಂಸೆ ಕೊಡುತ್ತಿರುತ್ತಿದ್ದರು. ಮನೆಯಲ್ಲಿ ಗಂಡನ ಆಸರೆಯು ಇರಲಿಲ್ಲ ದಿನಾಗಲೂ ಮನೆಯಲ್ಲಿ ಅನಗತ್ಯವಾಗಿ ಜಗಳವಾಗುತ್ತಿತ್ತು. ಮದುವೆಯಾಗಿ ಗಂಡನ ಮನೆಯಲ್ಲಿ ಒಂದು ವರ್ಷ ಕಾಲ ಕಳೆಯಲಾಗಲಾರದೇ ತವರಿಗೆ ಮರಳಿದೆ. ತವರು ಮನೆಯಲ್ಲಿ 5 ವರ್ಷ ಕಳೆಯಿತು, ಆ 5 ವರ್ಷಗಳಲ್ಲಿ

ಪೋಲಿಸ್ ಸ್ಟೇಷನ್, ಕೊರ್ಟು ಕಛೇರಿಗಳನ್ನು ಅಲೆದಾಡಿದರು, ಎಲ್ಲ ಗುರು ಹಿರಿಯರು ಸೆರಿ ಮಾತನಾಡಿದ್ದರೂ ಕೂಡ ಪರಿಸ್ಥಿತಿ ಸುಧಾರಿಸದೇ ನನ್ನ ದಾಂಪತ್ಯ ಜೀವನದಲ್ಲಿ ಯಾವುದೇ ರೀತಿಯ ಸುಖವನ್ನು ಕಾಣಲಾಗಲಿಲ್ಲ.

ಇಷ್ಟೆ ಅಲ್ಲದೆ ನಾನು ಜೈನ್ ಧರ್ಮದವಳಾಗಿದ್ದ ಕಾರಣ ನನ್ನ ತಾಯಿ ಹೇಳಿದ ಹಾಗೆ ಜೈನ್ ಮಂತ್ರ 'ನವಕಾರ್ ಮಂತ್ರ' ಕೂಡ ಜಪ ಮಾಡುತ್ತಿದ್ದೆ. ಇದರ ಜೋತೆಗೆ 'ಭಕ್ತಾಂಬರ' ಸ್ತೋತ್ರ' ಕೂಡ ಜಪಿಸುತ್ತಿದ್ದೆ. ಜೈನ್ ಧರ್ಮದಲ್ಲಿ 'ಭಕ್ತಾಂಬರ' ಸ್ತೋತ್ರವನ್ನು ಸ್ತೂತಿ ಮಾಡುವುದರಿಂದ ಸಕಲ ಸಂಕಷ್ಟಗಳು ದೂರವಾಗುವುದೆಂಬ ಪ್ರತೀತಿ ಇರುವ ಕಾರಣದಿಂದ, ಅದನ್ನೂ ಸಹ ಹಲವಾರು ಬಾರಿ ಜಪಿಸುತ್ತಿದೆ. ಯಾರೋ ಹೇಳಿದಂತೆ, ಪಠನೆ ಮಾತ್ರದಿಂದಲೇ ಸಕಲ ಕಷ್ಟಗಳು ದೂರವಾಗುವುದೆಂದು ಹನುಮಾನ ಚಾಲಿಸಾ ಕೂಡ ಜಪ ಮಾಡಿದೆ. ಹುಬ್ಬಳ್ಳಿಯಲ್ಲಿ ಭವಿಷ್ಯ ಹೇಳುವವರೊಬ್ಬರ ಬಳಿ ಹೊಗಲಾಗಿ, ಸದರಿಯವರು ನನ್ನನ್ನು ಗಮನಿಸಿ, ನಿನ್ನ ಮುಖದ ಮೇಲೆ ಇರುವ ಮಚ್ಚೆಯು ಅಪಶಕುನವಾಗಿ ಪರಿಗಣಿಸುತ್ತೀರುವುದರಿಂದ ಸದರಿ ಮಚ್ಚೆಯನ್ನು ತೆಗೆದು ಹಾಕಲು ಸೂಚಿಸಿದರು. ಅವರು ಸೂಚಿಸಿದಂತೆ, ಮಚ್ಚೆಯನ್ನು ಅಗರಬತ್ತಿಯಿಂದ ಸುಟ್ಟು ತೆಗೆಯಲು ಹೋಗಿ ಮುಖದಲ್ಲಿ ಗಾಯವನ್ನು ಮಾಡಿಕೊಂಡೆನು. ನಮ್ಮ ಊರ ಹತ್ತೀರ ಇರುವ ಪದ್ಮಾವತಿ ದೇವಸ್ಥಾನಕ್ಕೂ ಹೊದೆ, ಎಲ್ಲೋ ಪಂಚಾಂಗ ಕೇಳಿದೆ ಅವರು ಹೇಳಿದ ಹಾಗೆ ಕೂಡ ಮಾಡಿದೆ, ಸಿ.ಜಿ ಪರಿವಾರ ಅಂತ ಟಿವಿಯಲ್ಲಿ ಬರುತ್ತಿದ್ದು ಸರಳವಾಸ್ತು ಕೂಡ ಮಾಡಿಸಿದೆವು, ಕವಡೆ ಶಾಸ್ತರ ಕೇಳಿಸಿದೆವು, ನನ್ನ ಗೆಳತಿಯ ಸಲಹೆಯಂತೆ ಕ್ರೈಸ್ತ ಧರ್ಮದಲ್ಲಿ ಮಾಡುವ ಪ್ರರ್ಥನೆಗೆ ಕೂಡ ಹೊದೆ. ಎಲ್ಲೆಲ್ಲೋ ಸುತ್ತಾಡಿ ನನ್ನ 5 ವರ್ಷಗಳ ಕಾಲ ವ್ಯರ್ಥವಾಯಿತೆ ಹೊರತು ನನಗೆ ಎಲ್ಲೂ ಕೂಡ ಲಾಭ ಸಿಗಲಿಲ್ಲ. ಮಧ್ಯದಲ್ಲಿ ಒಂದು ಸಲ ನನ್ನ ಗಂಡ ಕರೆದುಕೊಂಡು ಹೊದರು ನಾವಿಬ್ಬರು ಬೇರೆ ಬಾಡಿಗೆ ಮನೆಯಲ್ಲಿ ಇರುತ್ತಿದ್ದೇವು. ಒಂದು ದಿನ ನನ್ನ ಗಂಡ ಜಗಳವಾಡಿ ಏನೂ ಹೇಳಲಾರದೆ ನನ್ನನ್ನು ಬಿಟ್ಟು ಹೋದರು. ಇವೆಲ್ಲವನ್ನು ಸಹಿಸಲಾರದೆ ನಾನು ವಿಷ ಸೆವಿಸಿ ಆತ್ಮ ಹತ್ಯೆ ಮಾಡಲು ಪ್ರಯತ್ನಿಸಿದೆ. ಆದರೆ ಪೂರ್ವ ಜನ್ಮದ ಸಂಸ್ಕಾರದಿಂದ ಬದುಕುಳಿದು ಮತ್ತೆ ತವರು ಮನೆಗೆ ಮರಳಿ ಬಂದೆ. ನನಗೆ ಒಳಿತಾಗಬೇಕೆಂದು ಮೇಲೆ ತಿಳಿಸಿದ ಎಲ್ಲ ದೇವರುಗಳ ಆರಾಧನೆ ಮಾಡಿದರು ಸಹ ಯಾವುದೇ ಲಾಭ ಸಿಗದೆ ನನ್ನ ಸಮಯ ಮತ್ತು ನನ್ನ ದುಡ್ಡು ವ್ಯರ್ಥವಾಯಿತು. ಕೊನೆಗೆ ಎಲ್ಲಾ ಸ್ಥಿತಿಗಳು ನನ್ನ ವಿರುದ್ಧವಾಯಿತು. ಇಷ್ಟೆಲ್ಲ ಸೇವೆ, ಭಕ್ತಿ, ವ್ಯಯಾ ಮಾಡಿದರೂ ನನ್ನ ಜೀವನ ಸರಿಪಡಿಸಿಕೊಳ್ಳಲಾಗದೆ, ದಾಂಪತ್ಯ ಜೀವನ ಅಂತ್ಯ ಅಂದರೆ ಡೈವರ್ಸ ತನಕ ತಲುಪಿತು. ಒಂದು ದಿನ ರಾತ್ರಿ ಎನನ್ನೂ ಹೇಳಲಾಗದ ಸ್ಥಿತಿಯಲ್ಲಿ ಅಳುತ್ತಿದ್ದೆ. ನಾನು ನೋಡಲು ಚೆನ್ನಾಗಿದ್ದೆನೆ, ವಿದ್ಯೆ ಇದೆ ಮತ್ತು ಧನವಂತ ಗಂಡ ಇದ್ದರೂ ಮದುವೆಯಾದ ಮೇಲೆ ನನ್ನ ಜೀವನ ನರಕವಾಯಿತು. ಬೇರೆ ಕಡೆ ಕೆಲಸ ಮಾಡಲು ಹೊಗುತ್ತಿದ್ದೆ ಅದರೆ ಒಳ್ಳೆ ಸಂಬಳ ಇಲ್ಲದೆ ಜನರು ಕೆಟ್ಟ ದೃಷ್ಟಿಯಿಂದ ಜಾಸ್ತಿ ಸಂಬಳ ಕೊಡುತ್ತೆವೆ ಎಂದರು. ಎಲ್ಲಾ ಕೆಲಸ ಬಿಟ್ಟು ಬದುಕುವ ಆಸೆಯನ್ನೆ ಬಿಟ್ಟೆ. ಒಂದು ರಾತ್ರಿ ಏಕಾಂತದಲ್ಲಿ ಕುಳಿತಿರುವಾಗ ಎಲ್ಲವೂ ನೆನನಪಿಸಿಕೊಳ್ಳುತ್ತ ತುಂಬ ನೋವಾಯಿತು. ಅವತ್ತೆ ದೇವರಲ್ಲಿ ನಮಸ್ಕಾರ ಹಾಕಿ ಕೇಳಿಕೊಂಡೆ ನೀವು ನೀಜವಾಗಿಯೂ ಇದ್ದರೆ ಅದು ನನಗೆ ಗೊತ್ತಾಗಲಿ, ಈ ಎಲ್ಲಾ ದೇವರು ಸತ್ಯ ಅಥವಾ ಸುಳ್ಳು ಎಂದು ಗೊತ್ತಾಗಲಿ ಮತ್ತು ಪೂರ್ಣ ಪರಮಾತ್ಮ ಯಾರು ಎಂದು ಗೊತ್ತಾಗಲಿ ಎಂದು ಪರಮಾತ್ಮನಲ್ಲಿ ಮೊರೆ ಹೋದೆ.

ಒಂದು ದಿನ ನಾನು ಸಾಯಿ ಸಮರ್ಥ ಮಂದಿರಕ್ಕೆ ಹೊಗಿದ್ದೆ. ಅಲ್ಲಿ ಸರಿತಾ ದಾಸಿ ಮನೆಯ ಸದಸ್ಯರ ಜೋತೆ ಬಂದಿದ್ದರು

ಅಚಾನಕ್ಕಾಗಿ ಅವರು ನನ್ನನ್ನು ಮಾತನಾಡಿಸಿ 'ಜ್ಞಾನ ಗಂಗಾ' ಪುಸ್ತಕ ನೀಡಿ ಓದಲು ಹೇಳಿದರು. ಮನೆಗೆ ಬಂದು ಪುಸ್ತಕವನ್ನು ಓದಿದಾಗ ನಾನು ಬಯಸಿದ ಹಾಗೆ ನೀಜವಾದ ದೇವರು ಪೂರ್ಣ ಪರಮಾತ್ಮ ಯಾರೆಂದು ಮತ್ತು ಎಲ್ಲಾ ಧರ್ಮಗ್ರಂಥಗಳನ್ನು ತಿಳಿದಿರುವ ತತ್ವದರ್ಶಿ ಸಂತ ಯಾರೆಂದು ಗೊತ್ತಾಯ್ತು ಮತ್ತು ಇವರಿಂದ ಎಲ್ಲಾ ಸಂದೇಹ ನಿವಾರಣೆ ಆಯಿತು. ಇದರಲ್ಲಿ ಎಲ್ಲಾ ಸದ್ಗ್ರಂಥಗಳು ಶ್ರೀಮದ್ಭಗವದ್ಗೀತೆ, 4 ವೇದಗಳು, ಪುರಾಣಗಳು, ಕುರಾನ್ ಶರೀಫ್, ಬೈಬಲ್, ಜೈನ್ ಧರ್ಮದ ಗ್ರಂಥ ಮತ್ತು ಗುರುಗ್ರಂಥ ಸಾಹೇಬ್ ಈ ಎಲ್ಲಾ ಗ್ರಂಥಗಳ ಸತ್ಯಾಂಶ ತಿಳಿಯಿತು. ನನಗೆ ಪುಸ್ತಕ ನೀಡಿದ ಸರಿತಾ ದಾಸಿಗೆ, ಸದ್ಭಕ್ತಿ ಮಾಡಲು ಮತ್ತು ಶಂಕೆಗಳ, ಕಷ್ಟಗಳ ನಿವಾರಣೆ ಮಾಡಿಕೊಳ್ಳಲು ನಿಮ್ಮ ಗುರುಗಳಿಗೆ ಏನಾದರು ಶುಲ್ಕ  ಪಾವತಿಸಬೇಕೆ ಎಂದು ಕೇಳಿದೆ? ಆಗ ಅವಳು 'ಅವರಿಗೆ ಯಾವ ದುಡ್ಡು ಕೇಳುವುದಿಲ್ಲ ಎಂದಳು' ಆಗ ನಾನು ಸರಿಯಾದ ಜಾಗಕ್ಕೆ ಬಂದೆ ಎಂದು ತಿಳಿದೆ. ಏಕೆಂದರೆ ಎಲ್ಲಿ ಹೊದರೂ ಮೊದಲು ದುಡ್ಡಿನ ವಿಷಯು ಎತ್ತುತಿದ್ದರು. ಇಗ ನಾನು ಖರ್ಚು ಮಾಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ಬಹಳ ಖುಷಿಯಾದೆ. ಒಂದೇ ವಾರದದಲ್ಲಿ ಪುಸ್ತಕ ಓದಿ ತಿಳಿದು ನನ್ನ ತಮ್ಮನನ್ನು ಸಹ ಕರೆದುಕೊಂಡು ದೆಹಲಿಯ ಬಳಿ ಇರುವ ಮುಂಡ್ಕ ಸತ್ಯಲೋಕ ಆಶ್ರಮದಲ್ಲಿರುವ ನಾಮೋಪದೇಶ ಕೇಂದ್ರ ದಿನಾಂಕ :– 26 –03 –2017 ರಂದು ನಾಮದೀಕ್ಷೆ ಪಡೆದುಕೊಂಡೆವು. ಅವತ್ತಿನಿಂದ ನನ್ನ ಎಲ್ಲ ಸಮಸ್ಯೆಗಳು ದೂರವಾಗತೊಡಗಿದವು.

ನಾನು ನಾಮದೀಕ್ಷೆ ಪಡೆದು ಮನೆಗೆ ಬಂದ ಕೇಲವೆ ದಿನಗಳಲ್ಲಿ ನನ್ನ ಗಂಡನ ಫೋನ್ ಬರಲು ಶುರುವಾಯಿತು. 6 ತಿಂಗಳಿಂದ ಮಾತಾಡುವುದನ್ನು ಬಿಟ್ಟಿದ್ದೇವು ಆ ಕಾರಣದಿಂದ ನಾನು ಫೋನ್ ತೆಗೆಯುತ್ತಿರಲಿಲ್ಲ 3 ದಿನದ ನಂತರ ಖುದ್ದಾಗಿ ಮನೆಗೆ ಬಂದು ಕರೆದುಕೊಂಡು ಹೋದರು. ಇಗ ಗುರುಗಳ ದಯದಿಂದ ನಮ್ಮ ಮನೆಯಲ್ಲಿ ಯಾವ ತೊಂದರೆಯು ಇಲ್ಲ.

ಈ ಮಧ್ಯ ನಾನು ತವರು ಮನೆಯಲ್ಲಿದ್ದಾಗ ಒಂದು ದಿನ ಜೊರಾಗಿ ಮಳೆ ಬರುತ್ತಿತ್ತು ಮನೆ ಒಳಗೆ ಹೊಗುವಾಗ ತಲೆಗೆ ಬಾಗಿಲು ತಾಗಿ ಗಂಭೀರವಾದ ಪೆಟ್ಟು ಬಿದ್ದು ತುಂಬಾ ಗಾಯವಾಯಿತು ಮತ್ತು ಕಣ್ಣು ಕತ್ತಲೆ ಆಗುತ್ತಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುಲು ನನ್ನ ಹತ್ತಿರ ದುಡ್ಡು ಇರಲಿಲ್ಲ. ಆಗ ನಾನು ಸತ್ಯಲೋಕ ಆಶ್ರಮ ಮುಂಡ್ಕಗೆ ಫೋನ್ ಮಾಡಿ ತೊಂದರೆ  ನಿವಾರಣೆಗೆ ಗುರುಗಳ ಬಳಿ ಪ್ರಾರ್ಥನೆ ಸಲ್ಲಿಸಿದೆ. ಆಗ ಗುರುಗಳ ಆದೇಸದಂತೆ 'ಪರಮಾತ್ಮ ದಯಮಾಡುತ್ತಾರೆ ಎಂದರು. ಆಶ್ರಮದಲ್ಲಿ ನೀಡಿದಂತಂಹ ಅಮೃತ್ ಜಲವನ್ನು ಸೇವಿಸಿದೆ ಅವತ್ತೆ ಗುರುಗಳ ದಯದಿಂದ ಸರಿಯಾಯಿತು. ಮತ್ತು ನನ್ನ ತಮ್ಮ ಕೆಲಸವಿಲ್ಲದೆ ದುಃಖಿತನಾಗಿದ್ದು ಗುರುಗಳಿಗೆ ಪ್ರಾರ್ಥನೆ ಮಾಡಿಕೊಂಡ ಸ್ವಲ್ಪ  ದಿನದಲ್ಲೇ ಅವನಿಗೆ ಸರ್ಕಾರಿ ಕೆಲಸ ಸಿಕ್ಕಿದೆ. ಸರಿಯಾಗಿ ಮಾತನಾಡಲು ಬರುತ್ತಿರಲಿಲ್ಲದವನಿಗೆ ಸರ್ಕಾರಿ ಕೆಲಸ ಹೇಗೆ ಸಿಕ್ಕಿತು ಎಂದು ಊರಿನ ಜನರು ಆಶ್ಚರ್ಯಪಡುತ್ತಾರೆ.

ಗುರುಗಳು ಹೇಳಿದ ನಿಯಮವನ್ನು ಉಲ್ಲಂಘನೆ ಮಾಡಿದ್ದರಿಂದ ನನಗೆ ಮೊದಲಿನ ತೊಂದರೆಗಳು ಕಾಡಲಾರಂಭಿಸಿದವು. ಮನೆಯಲ್ಲಿ ಮತ್ತೆ ಕಲಹ ಸುರುವಾಯಿತು ನನ್ನ ಗಂಡ ಗುರುಗಳ ಫೊಟೊ ಮನೆಯಿಂದ ತೆಗೆದರು. ಆಗ ನಾನು ತವರು ಮನೆಗೆ ಹೊಗುವೆನೆಂದು ನೇರ ಸತ್ಯಲೋಕ ಆಶ್ರಮ ಮುಂಡ್ಕಾ ದೆಹಲಿಗೆ ಹೊಗಿ ನನ್ನ ತವರು ಮನೆಗೆ ಫೋನ್ ಮಾಡಿ ಆಶ್ರಮಕ್ಕೆ ಬಂದಿರುವುದಾಗಿ ತಿಳಿಸಿದೆ. ಗುರುಗಳಲ್ಲಿ ಪ್ರಾರ್ಥಿಸಿಕೊಂಡೆ ಭವಿಷ್ಯದಲ್ಲಿ ಯಾವತ್ತು ನಿಯಮ ಖಂಡನೆ ಮಾಡುವುದಿಲ್ಲವೆಂದು ಮತ್ತು ಪುನರ ಉಪದೇಶ ಪಡೆದೆ. ನನ್ನ ಗಂಡ ನನ್ನ ತವರು ಮನೆಯಲ್ಲಿ ಫೋನ್ ಮಾಡಿ ಆಶ್ರಮಕ್ಕೆ ಹೊಗಿರುವುದಾಗಿ ತಿಳಿದು ನನಗೆ ಫೋನ್ ಮಾಡಿ ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಈ ರೀತಿ ಎಂದು ಮಾಡುವುದಿಲ್ಲ ಎಂದರು. ಇಗ ನಾವು ನಮ್ಮ ಪರಿವಾರದಲ್ಲಿ ಬಹಳ ಸುಖಿಯಾಗಿದ್ದೆವೆ.

॥ ಸತ್ ಸಾಹೇಬ್ ॥ 8550066959

ಸೂಚನೆ : ಇದೊಂದು ಕೇವಲ ನಮೂನೆಯಾಗಿದೆ. (Sample) ಅಧ್ಯಾತ್ಮ ಜ್ಞಾನದ ಅಧಿಕ ಜ್ಞಾನಕ್ಕಾಗಿ ದಯವಿಟ್ಟು 'ಜ್ಞಾನ ಗಂಗಾ' ಮತ್ತು 'ಬದುಕುವ ದಾರಿ' ಎಂಬ ಪುಸ್ತಕಗಳನ್ನು www.jagatgururampalji.org ನಮ್ಮ ವೆಬ್‌ಸೈಟ್‌ನಲ್ಲಿ ಓದಬಹುದು.

ಸಂಪರ್ಕಕ್ಕಾಗಿ ಮೊ : 8884445281, 7026200360

ಪ್ರಕಾಶಕರು
ಕಬೀರ್ ಜನ್ ಕಲ್ಯಾಣ ಟ್ರಸ್ಟ್ ಮತ್ತು
ಸಂತ ರಾಮ್‌ಪಾಲರ ಎಲ್ಲಾ ಅನುಯಾಯಿಗಳು